ಗೌರಿ ಲಂಕೇಶರ
ಲಂಕೇಶ್
ಆಗಸ್ಟ್ 9, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋದನೆ



ಭ್ರಷ್ಟ ಕುಟುಂಬದ ಬಗ್ಗೆ ತನಿಖಾ ವರದಿ

ಗೋಲ್‌ಮಾಲ್ ಗೌಡ!




ಪುತ್ರಿಯರ ಅರಿಶಿಣ ಕುಂಕುಮಕ್ಕೆ 30 ಕೋಟಿ



ನಾಲ್ಕು ಲಕ್ಷ ಟನ್ ಅದಿರು ಕದ್ದ ರಮೇಶ್



ಅನಿತಾ-ಅನಿಲ್ ಲಾಡ್ ಪಾರ್ಟನರ್‌ಶಿಪ್



ಲಂಕೇಶರಿಗೆ ನಮಸ್ಕಾರ

ರಾವಣ ಪ್ರತಿಭೆಗೊಂದು ರಂಗನಮನ

ಲಂಕೇಶ್‌ರಂಥ ವರ್ಣರಂಜಿತ ವ್ಯಕ್ತಿತ್ವದ ಬಗ್ಗೆ ಮಾತಾಡುವುದೇ ಕಷ್ಟ. ಇನ್ನು ನಾಟಕ ಮಾಡುವುದೆಂದರೆ..? ಬಹುಶಃ ಅದು ಸಿ.ಬಸವಲಿಂಗಯ್ಯನಂಥವರಿಗೆ ಮಾತ್ರ ಸಾಧ್ಯವಾಗಬಹುದಾದ ಸವಾಲು. ಕಿ.ರಂ. ಹೇಳುವ "ಲಂಕೇಶರ ಬರವಣಿಗೆಯನ್ನು ಪ್ರಭೇದಾತ್ಮಕವಾಗಿ ವಿಂಗಡಿಸುವುದು ಸರಿಯಲ್ಲ" ಎಂಬ ಮಾತು ಬಸವಲಿಂಗಯ್ಯನವರ 'ಲಂಕೇಶರಿಗೆ ನಮಸ್ಕಾರ'ವನ್ನು ಒಂದು ಸಂಪೂರ್ಣ ನಾಟಕವಾಗಿಸುತ್ತದೆ. ಲಂಕೇಶ್ ಬರೆದಿರುವ ನಾಟಕಗಳ ಪಾತ್ರಗಳನ್ನು ಸವೆಸಿ ಬಿಟ್ಟಿರುವ ಕನ್ನಡ ರಂಗಭೂಮಿಯೆದುರು ಲಂಕೇಶರೇ ಒಂದು ಪಾತ್ರವಾಗಿ ನಿಂತು 'ನಾಟಕದಲ್ಲಿ ಮಾತಾಡುವಂತೆ' ಮಾತಾಡಿದರೆ...? ಕನ್ನಡ ರಂಗಭೂಮಿಯ, ಕನ್ನಡ ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಬಸವಲಿಂಗಯ್ಯನವರಿಗಿರುವ ನಿರಾಶೆ, ಸಿಟ್ಟು, ಟೀಕೆಗಳನ್ನು ಲಂಕೇಶ್ ಅಂದೇ ಕನ್ನಡಿಗರ ಮುಂದಿಟ್ಟಿದ್ದರು. ಆದರೆ ಅವರ ಸಾವಿನ ನಂತರ ಅವರ ಟೀಕೆ-ಟಿಪ್ಪಣಿಗಳನ್ನು ಕೇವಲ ಪುಸ್ತಕಗಳಾಗಿ ನೋಡುವ ಇಂದಿನ ಕನ್ನಡಿಗರೆದುರು ಅವರ ಮಾತು-ಬರಹಗಳನ್ನು ಬಸು ನಮ್ಮ ಮುಂದಿಟ್ಟಿದ್ದಾರೆ.

ಇಂಥಹ ಸಮಕಾಲೀನ ಸಂದರ್ಭದ ತಲ್ಲಣ-ಹತಾಶೆಗಳೆದುರು ರಂಗಾಯಣದ 'ಲಂಕೇಶರಿಗೆ ನಮಸ್ಕಾರ' ರಂಗಪ್ರಯೋಗ ವಿಶಿಷ್ಟವಾಗಿ ನಿಲ್ಲುತ್ತದೆ. ಇದನ್ನು ಒಂದು ನಾಟಕವಾಗಿ ನೋಡುವವರು ಬಸು ನಂಬಿರುವ "ಕೃತಿಯಿಂದ ಶಾಸ್ತ್ರವೇ ಹೊರತು; ಶಾಸ್ತ್ರದಿಂದ ಕೃತಿಯಲ್ಲ" ಎಂಬ ತತ್ವವನ್ನು ನೆನಪಲ್ಲಿಟ್ಟುಕೊಂಡಿರಬೇಕು. ಲಂಕೇಶ್ ತಮ್ಮ ಹೆಸರಿಂದ ಹಿಡಿದು ಅವರ ಬದುಕು-ಬರಹಗಳಿಂದ ಲೋಕದ ಸಿದ್ಧ-ಸಾಮಾಜಿಕ ನಿಲುವುಗಳನ್ನು ನಿರಾಕರಿಸಿದಂತೆಯೇ ಬಸವಲಿಂಗಯ್ಯ ಅವರ ಇತ್ತೀಚಿನ ಪ್ರಯೋಗಗಳ ಮೂಲಕ ರಂಗಭೂಮಿಯ ಸಿದ್ಧ-ಮಾದರಿಗಳನ್ನು ನಿರಾಕರಿಸಿ, ಒಡೆದು ಹೊಸ ಹೊಸ ರಂಗ ಸಿದ್ಧಾಂತಗಳನ್ನು ರೂಪಿಸುವತ್ತ ಪ್ರಯತ್ನಿಸುತ್ತಿರುವುದನ್ನು ಬಹಳ ಎಚ್ಚರದಿಂದಲೇ ಗಮನಿಸಬೇಕಿದೆ. ಈ ಎಚ್ಚರ ಕೊಂಚ ತಪ್ಪಿದರೂ ಲಂಕೇಶರನ್ನು ಕೇವಲ ಪತ್ರಕರ್ತರಂತೆ ಕಾಣುವ ಕಣ್ಣೇ ಇಂದು ಬಸವಲಿಂಗಯ್ಯನವರನ್ನು ಕೇವಲ ರಂಗನಿರ್ದೇಶಕರಂತೆ ಕಂಡು ಸರಳ ತೀರ್ಮಾನಗಳಿಗೆ ಎಡೆ ಮಾಡಿಕೊಡುವ ದುರಂತ ಸೃಷ್ಟಿಯಾಗುತ್ತದೆ.

'ಲಂಕೇಶರಿಗೆ ನಮಸ್ಕಾರ' ಪ್ರಯೋಗದ ಮೊದಲ ಆಕರ್ಷಣೆ 'ಲಂಕೇಶ್' ಪಾತ್ರವಾದರೆ, ಆ ಪಾತ್ರ ವಿವಿಧ ಆಕೃತಿಗಳಾಗಿ, ಹೆಣ್ಣಾಗಿ, ಗಂಡಾಗಿ, ಮುಖವಾಡಗಳಾಗಿ ಅವಸ್ಥಾಂತರಗೊಳ್ಳುವ ಶೈಲಿಯ ವೈಶಿಷ್ಟತೆ ಇನ್ನೊಂದು ಆಕರ್ಷಣೆ. ಬಸು ಒಂದು ನಾಟಕಕ್ಕೆ ಬಳಸಿಕೊಳ್ಳುವ ಒಂದು ಮರದ ತುಂಡೂ ಕೂಡ ಉಸಿರಾಡುವ, ಒಬ್ಬ ಹುಡುಗ-ಹುಡುಗಿ ಕೂಡಾ ಮರವಾಗಿ, ಕಲ್ಲಾಗಿ, ಗೋಡೆಗಳಾಗಿ, ಕಿಟಕಿಗಳಾಗಿ ಮಾರ್ಪಾಡಾಗುವ ಅದ್ಭುತ ಪ್ರೇಕ್ಷಕರನ್ನು ಉಸಿರುಗಟ್ಟಿ ಕೂರಿಸುತ್ತದೆ. ಹಾಗೆಯೇ ಇಲ್ಲಿ ಕನ್ನಡ ರಂಗಭೂಮಿ ಮುಖ್ಯವಾಗಿ ಗಮನಿಸಬೇಕಾದ ಇನ್ನೊಂದು ವಿಷಯವಿದೆ: ಅದು ಬರಹಗಾರರೊಬ್ಬರ ಮಾತುಗಳು ಹಾಡಾಗುವ, ಹಾಡು ಮಾತಾಗುವ ಸಾಧ್ಯತೆ. ಇದನ್ನು ಬಸವಲಿಂಗಯ್ಯ 'ದ್ಯಾವನೂರು' ರಂಗಪ್ರಯೋಗದಲ್ಲಿ ಪ್ರಯೋಗಿಸಿ ರುಚಿ ತೋರಿಸಿದ್ದರು. ಎಲ್ಲರ -ಎಲ್ಲಾ ಕಾವ್ಯಗಳನ್ನೂ ಗದ್ಯವಾಗಿಸಬಹುದು, ಅದು ಸುಲಭ; ಆದರೆ ಎಲ್ಲಾ ಗದ್ಯಗಳನ್ನು ಹಾಡಾಗಿಸುವುದು ಅಸಾಧ್ಯ. ಹಾಗೇನಾದರೂ ಪ್ರಯತ್ನಪಟ್ಟರೆ ಸಂಗೀತಪ್ರಜ್ಞೆಯನ್ನು ಮರೆತು ಕೇಳುವ 'ತಾಕತ್ತು' ಬೇಕು. ಆದರೆ ಬೇಂದ್ರೆ ಪದ್ಯಗಳನ್ನೋ ಅಕ್ಕನ ವಚನಗಳನ್ನೋ ಅವುಗಳಿರುವ ಗೇಯಾಂಶದ ಮೂಲಕ ಹಾಡಾಗಿಸಬಹುದಾದಷ್ಟೇ ಸುಭಲವಾಗಿ, ಸುಂದರವಾಗಿ ಮಹಾದೇವ, ಲಂಕೇಶರಂಥ ಶ್ರೇಷ್ಠ ಬರಹಗಾರರ ಪ್ರತಿ ಸಾಲನ್ನೂ ಹಾಡಾಗಿಸಬಹುದಾದ ಸಾಧ್ಯತೆಯನ್ನು ಬಸು ತೋರಿಸಿದ್ದಾರೆ.


ಪ್ರಸುತ್ತ ರಂಗಪ್ರಯೋಗ ಲಂಕೇಶರ ಟೀಕೆ-ಟಿಪ್ಪಣಿಯ ಕೆಲಭಾಗ, ಕೆಲವು ಪದ್ಯಗಳು, ಕೆಲವು ನೀಲುಗಳು ಹಾಗು ಮೂರು ಏಕಾಂಕಗಳನ್ನು ಒಳಗೊಂಡಿದೆ. ಇವೆಲ್ಲವನ್ನು ಬಸವಲಿಂಗಯ್ಯ ಅತೀ ಎಚ್ಚರದಿಂದ ಸಮಕಾಲೀನ ವಿದ್ಯಮಾನಗಳಿಗೆ ಮುಖಾಮುಖಿಯಾಗುವ, ಸಾಂಸ್ಕೃತಿಕ ವಿಸ್ಮೃತಿಗೆ ಒಳಗಾಗಿರುವ ಕಣ್ಣುಗಳಿಗೆ ಬೆಳಕಾಗಬಹುದಾದ ಹಾಗು ನಾವು ಮರೆತ ನಮ್ಮದೇ ಪ್ರಜ್ಞೆಯ ಪುನರುಜ್ಜೀವನದ ಅಂಶಗಳಾಗಿ ಆಯ್ದುಕೊಂಡಿದ್ದಾರೆ. ಕೋಮುವಾದದ ಬಗೆಗಿನ ಲಂಕೇಶರ ನಿಲುವು, ಸಂಘ ಪಾರಿವಾರದವರ ಬಗ್ಗೆ ಕನ್ನಡಿಗರು ಅಂದೇ ವಹಿಸಬೇಕಿದ್ದ ಎಚ್ಚರ, ಪ್ರಸುತ್ತ ರಾಜಕೀಯ ಪ್ರಕ್ಷುಬ್ಧತೆಗೆ ಬೆಳಕಾಗಬಹುದಾದ, ನಕ್ಸಲ್ ಚಳವಳಿಯನ್ನು ನೋಡಬೇಕಾದ ದೃಷ್ಟಿಕೋನಗಳ ಹಾಗೂ ಅಭಿವೃದ್ಧಿ ಕುರಿತ ಜಿಜ್ಞಾಸೆಗಳನ್ನು ರಂಗದ ಮೇಲೆ ತಂದು 'ಅವತ್ತೇ ಕಣ್ಣು ತೆರೆದಿದ್ದರೆ ಇವತ್ತು ನಾವೆಲ್ಲಾ ಪರಿತಪಿಸಬೇಕಾದ ಸಂದರ್ಭ ಬರುತ್ತಿರಲಿಲ್ಲ.' ಎಂಬುದನ್ನು ಕನ್ನಡಿಗರ ಮುಂದಿಟ್ಟಿದ್ದಾರೆ ಬಸು.

ಇದನ್ನು ಕೇವಲ ಒಂದು ರಂಗಪ್ರಯೋಗವಾಗಿ ನೋಡುವವರಿಗೆ ನಿರೂಪಣೆಯಲ್ಲಿನ ಮನೋಟನಿ, ಲಂಕೇಶರ ಪಾತ್ರದ ಅಷ್ಟು ಬಿಗಿಯಿಲ್ಲದ ನಿರೂಪಣೆ, ಅಷ್ಟು ಪ್ರಭಾವಿಯಲ್ಲದ ಭಾಷಾ ಉಚ್ಚಾರಣೆ, ಅನಗತ್ಯ ಹಾಸ್ಯಗಳು ದೊಡ್ಡ ತಪ್ಪುಗಳಾಗಿ ಕಾಣಬಹುದು. ಆದರೆ ಇವನ್ನೆಲ್ಲಾ ಸರಿಪಡಿಸುವುದು ಬಸವಲಿಂಗಯ್ಯರಂತ ರಂಗತಜ್ಞರಿಗೆ ದೊಡ್ಡದೇನಲ್ಲ. ಚಾಪ್ಲಿನ್‌ನ ನಡಿಗೆಯ ಶೈಲಿಯೇ ಅವನ ದೊಡ್ಡ ಬಂಡವಾಳವಾಗುವಂತೆ ನಟರಲ್ಲಿರುವ ಅವರದೇ ಶೈಲಿಗಳನ್ನು, ಸಾಮರ್ಥ್ಯಗಳನ್ನು ಬಳಸಿ ಅವನ್ನು ಸಮರ್ಥವಾಗಿ ಕಟ್ಟಬಲ್ಲ ಪ್ರತಿಭೆ ಬಸವಲಿಂಗಯ್ಯನವರದ್ದು. ಅದು ಈ ಪ್ರಯೋಗದ ಹಿನ್ನೆಲೆಯಲ್ಲಿ ಬಳಸಿಕೊಂಡಿರುವ ನಟರ ದೈಹಿಕ ಕಸರತ್ತು, ಮರದಿಂದ ಕಟ್ಟಲ್ಪಟ್ಟ ಸಜ್ಜಿಕೆಯನ್ನೇ ಹಲವು ಸಾಧ್ಯತೆಗಳಾಗಿ ಬಳಸಿಕೊಳ್ಳುವ ಅದ್ಭುತ ಕಲ್ಪನೆ, ಆಪ್ಯಾಯಮಾನವಾದ ಸಂಗೀತಗಳನ್ನು ಗಮನಿಸಿದರೆ ಆ ಅಂಶ ಸ್ಪಷ್ಟವಾಗುತ್ತದೆ. ಹಾಗೇ ಕ್ರಾಂತಿ ಬಂತು ಕ್ರಾಂತಿ ಏಕಾಂಕ ಭಾಗದ 'ಹೊಡಿಮಗ' ಹಾಡು, 'ತೆರಗಳು' ಭಾಗದ ಫ್ಯಾಷನ್ ಶೋ ಕೊಂಚ ಅತಿಯಾಗಿ, ಪ್ರೊಸೀನಿಯಂ ರಂಗಭೂಮಿಯ ಮಡಿವಂತಿಕೆಯನ್ನು ಮೀರುತ್ತವೆ ಅನ್ನಿಸಿದರೂ, ಇಂಥ ಭಾಗಗಳನ್ನು ರಂಗಭೂಮಿಯನ್ನು ಜೀವಂತವಾಗಿಸುವ ಹೊಸ ಸಾಧ್ಯತೆಗಳಾಗಿ ಹಾಗೂ ಇವತ್ತಿನ ಚಲನಚಿತ್ರ, ಟಿ.ವಿ. ಮಾಧ್ಯಮದ ವ್ಯಂಗ್ಯ ವಿಡಂಬನೆಯಾಗಿ ನೋಡಿದರೆ ಅವುಗಳನ್ನು ರೂಪಿಸಿರುವ ಬಸವಲಿಂಗಯ್ಯನವರ ಪ್ರತಿಭೆ ಅರ್ಥವಾಗುತ್ತದೆ. ಈ ಬಗ್ಗೆ ಅವರನ್ನೇ ಕೇಳಿದರೆ "ನೋಡಿ, ಸಿನಿಮಾದಲ್ಲಿ ಟಿ.ವಿ. ಮುಂದೆ ಬಹಳ ಕುತೂಹಲದಿಂದ, ಆಸೆಯಿಂದ, ಗಂಭಿರವಾಗಿ ಲೈಂಗಿಕ ದೃಶ್ಯಗಳನ್ನು ನೋಡುವ ಜನ, ಅಂಥಾದ್ದೇ ನಾಟಕದಲ್ಲಿ ಬಂದರೆ, ನಾಚಿಕೆಪಟ್ಟುಕೊಳ್ಳುತ್ತಾರೆ; ನಗುತ್ತಾರೆ. ನಾವು ಈ ಮೂಲಕ ಅವರ ಅಭಿರುಚಿಯನ್ನು ವ್ಯಂಗ್ಯಮಾಡುತ್ತೇವೆ" ಎಂದು ತಾತ್ವಿಕವಾಗಿ ಮಾತನಾಡುತ್ತಾರೆ. "ಅಲ್ಲಾ ಸಾರ್ ಕನ್ನಡದಲ್ಲಿ ಅಷ್ಟೊಂದು ನಾಟಕಗಳು ಇರುವಾಗ ಗದ್ಯ ಬರಹಗಳನ್ನೆಲ್ಲಾ ಯಾಕೆ ನಾಟಕ ಮಾಡ್ಬೇಕು" ಅಂದರೆ "ನಮ್ಮ ಇವತ್ತಿನ ನಾಟಕಕಾರರು ಕತೆಯನ್ನು ಕಟ್ಟಲ್ಲ; ಇರೋದನ್ನೇ ವ್ಯಾಖ್ಯಾನ ಮಾಡ್ತಾರೆ; ವರ್ತಮಾನವನ್ನು ಎದುರಿಸಲ್ಲ; ಯಾವುದೋ ಕಾಲದ ನಾಟಕ ಮಾಡಿ ಪಲಾಯನ ಮಡ್ತಾರೆ" ಅನ್ನುತ್ತಾರೆ. ಬಸವಲಿಂಗಯ್ಯನವರಿಗೆ ರಂಗಭೂಮಿಯ ರೀತಿ-ರಿವಾಜು, ಮಡಿವಂತಿಕೆಗಳಿಗಿಂತ ಪ್ರಸುತ್ತ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ತಲ್ಲಣಗಳು ಮುಖ್ಯವಾಗುವುದರಿಂದಲೇ ಅವರು ಭಿನ್ನವಾಗಿ ನಿಲ್ಲುತ್ತಾರೆ. ಇದಲ್ಲದೆ ಶಬ್ದದೊಳಗೆ ನಿಶ್ಯಬ್ದವನ್ನು ನಿಶ್ಯಬ್ದದೊಳಗೆ ಶಬ್ದವನ್ನೂ ಹಿಡಿದಿಡುವಲ್ಲಿ ಬಸು ನಿಸ್ಸೀಮರು.

ರಂಗಾಯಣ ಒಂದು ತಿಂಗಳ ಕಾಲ ನಡೆಸಿದ ಯುವ ಶಿಬಿರಕ್ಕೆ ರಂಗ ಪ್ರಯೋಗವೊಂದನ್ನು ನಿರ್ದೇಶಿಸುವಂತೆ ಬಸವಲಿಂಗಯ್ಯರನ್ನು ಕರೆದದ್ದಕ್ಕೂ ಕಾರಣವಿದೆ. ಈ ಹಿಂದೆ ಬಸವಲಿಂಗಯ್ಯನವರು ನೀನಾಸಂ ತಿರುಗಾಟಕ್ಕೆ 'ದ್ಯಾವನೂರು' ಮಾಡಿಸಿ 'ಕಥಾರಂಗಭೂಮಿಯ' ಹುಟ್ಟಿಗೆ ಕಾರಣರಾಗಿದ್ದರು. ಆ ಪ್ರಯೋಗ ಎಲ್ಲೆಡೆ ಹೆಚ್ಚು ಪ್ರಸಿದ್ಧಿಯಾದಷ್ಟೇ ವಿವಾದ ಕೂಡಾ ಎಬ್ಬಿಸಿತ್ತು, ಈ ರೀತಿಯ ವಿವಾದ- ಪ್ರಸಿದ್ಧಿ-ವಿರೋಧಿಸುವವರೂ ಕೊನೆಯವರೆಗೂ ಕುಳಿತು ನೋಡುವ ನಾಟಕ ಮಾಡುವುದು ಅವರಿಗೇ ಸಾಧ್ಯ ಎಂದು ರಂಗಾಯಣ ಅವರನ್ನು ಆಹ್ವಾನಿಸಿತು.

ಈಗಾಗಲೇ ನಾಡಿನಾದ್ಯಂತ ಹಲವಾರು ಪ್ರಯೋಗ ಕಂಡಿರುವ 'ಲಂಕೇಶರಿಗೆ ನಮಸ್ಕಾರ' ದ ಬೇಡಿಕೆ ಹೆಚ್ಚುತ್ತಿದೆ. ಬಿಸಿ ಬಿಸಿ ಚರ್ಚೆಯೂ ಆಗುತ್ತಿದೆ. ಅದರ ಬಗ್ಗೆ ಬರೆಯುವವರೂ ಹಿಂದು ಮುಂದು ನೋಡುತ್ತಿದ್ದಾರೆ. ಏಕೆಂದರೆ ನಾಟಕ ಚೆನ್ನಾಗಿದೆ ಎಂದರೆ ಬಸವಲಿಂಗಯ್ಯ "ಏನು ಚೆನ್ನಾಗಿದೆ?" ಅನ್ನುತ್ತಾರೆ. ಚೆನ್ನಾಗಿಲ್ಲ ಅಂತ ಬರೆದರೆ "ಯಾಕೆ ಚೆನ್ನಾಗಿಲ್ಲ?" ಎಂದು ಕೇಳುತ್ತಾರೆ.

ಒಟ್ಟಾರೆ ಲಂಕೇಶರದ್ದು 'ರಾವಣ ಪ್ರತಿಭೆ' ಎನ್ನುವ ಬಸು ಅವರನ್ನು ಇವತ್ತಿನ ಆತಂಕದ ಸನ್ನಿವೇಶದಲ್ಲಿ ನಮ್ಮೆದುರು ತಂದು ನಿಲ್ಲಿಸಿದ್ದಾರೆ. ಹೊಸ ಹುಡುಗ-ಹುಡುಗಿಯರು ಮೊದಲ ಪ್ರಯೋಗದಲ್ಲೇ ಗಮನ ಸೆಳೆದಿದ್ದಾರೆ. ಇವರಲ್ಲಿ ಲಂಕೇಶರ ಪಾತ್ರ ಹಾಗು ಇತರ ಪಾತ್ರಗಳನ್ನು ಮಾಡಿದ ರಮೇಶ ಪಾಲಸಂದ್ರ ಆಂಗಿಕ ಅಭಿನಯ, ಭಾಷಾ ಉಚ್ಚಾರಗಳನ್ನು ಕೊಂಚ ತಿದ್ದಿಕೊಂಡರೆ ಉತ್ತಮ ಭವಿಷ್ಯವಿದೆ. ಉಳಿದಂತೆ ಸುಮನ್, ಭಾವನಾ ಎಸ್. ಘಂಟಿ, ರೋಹಿಣಿ, ಸುಷ್ಮಿತಾ, ಸಂದೀಪ್, ಶ್ಯಾಂಪ್ರಸಾದ್, ಅಕ್ಕಮಹಾದೇವಿ ಗಮನ ಸೆಳೆಯುತ್ತಾರೆ.



ವಿಶಿಷ್ಟ ಅನುಭವ ನೀಡುವ ಸಂಗೀತ, ನೀಲು ಪದ್ಯಗಳನ್ನು ಅಕ್ಕನ ವಚನಗಳಂತೆ ಮಾರ್ಪಡಿಸುವ ಸುಮನ ಅವರ ಚೆಂದದ ಹಾಡುಗಾರಿಕೆ, ಸುಂದರ ಬೆಳಕು, ವಸ್ತ್ರವಿನ್ಯಾಸ, ರಂಗಪರಿಕರ, ರಂಗ ಸಜ್ಜಿಕೆ, ಪ್ರಸಾಧನ ಎಲ್ಲವೂ ಹಿತ ನೀಡುತ್ತವೆ.

ಈ ರಂಗಪ್ರಯೋಗದ ಸಹನಿರ್ದೇಶನ ವಾಸುದೇವ್ ವಿ.ಗಂಗೇರ್‌ರವರದ್ದು. ಅಂತೂ ಲಂಕೇಶರನ್ನು ಓದಿ ಸುಮ್ಮನಾಗುವ ನಮ್ಮ ವಿಸ್ಮೃತಿಗಳಿಗೆ ಲಂಕೇಶರದ್ದೇ ಮಾತುಗಳಿಂದ ತಿವಿದು ಎಚ್ಚರಿಸುವ ಬಸವಲಿಂಗಯ್ಯನವರನ್ನು ಅಭಿನಂದಿಸಲೇಬೇಕು. ಬಸವಲಿಂಗಯ್ಯ ಹೇಳುತ್ತಾರೆ "ಇವತ್ತು ಯುವಕ-ಯುವತಿಯರ ಕೈಗೆ ಬಂದೂಕು, ತ್ರಿಶೂಲ ಕೊಡುತ್ತಿದ್ದಾರೆ; ನಾನು ರಾಗಗಳನ್ನು ಕೊಡುತ್ತೇನೆ".

ಅಂದಹಾಗೆ ಕಂಡದ್ದೆಲ್ಲದಕ್ಕೂ ರಂಗದ ಸ್ಪರ್ಶ ನೀಡುವ ಬಸು ಕಲಾಕ್ಷೇತ್ರದಲ್ಲಿ ನಡೆದ ಕಿ.ರಂ.ನಾಗರಾಜ್, ಕೆ.ಮರುಳಸಿದ್ದಪ್ಪ ಬಂಜಗೆರೆ ಜಯಪ್ರಕಾಶ, ಚಿದಂಬರರಾವ್ ಜಂಬೆ, ಗೌರಿಮೇಡಂರನ್ನು ಒಳಗೊಂಡು ನಡೆದ ವಿಚಾರ ಸಂಕಿರಣವನ್ನು ನಾಟಕದ ಭಾಗವಾಗಿಯೇ ನಡೆಸಿದರು ಎಂದರೆ ತಪ್ಪಾದೀತೆ? ಮತ್ತೆ ಕಲಾಕ್ಷೇತ್ರದೊಳಗೆ ವಿಚಾರ ಸಂಕಿರಣ ಮಾಡುವುದೆಂದರೆ ತಮಾಷೆಯ ಮಾತೇ? ಬಸು ಇದನ್ನು ಸುಮ್ಮನೆ ಆಯೋಜಿಸಿರುತ್ತಾರೆಯೇ? ಇರಲಿ, 'ಲಂಕೇಶರಿಗೆ ನಮಸ್ಕಾರ' ಎಂಬ ವಿಶಿಷ್ಟ ರಂಗಪ್ರಯೋಗವನ್ನು ನಮ್ಮ ಮುಂದಿಟ್ಟ ಬಸವಲಿಂಗಯ್ಯನವರಿಗೆ ನಮ್ಮ ಪ್ರೀತಿಯ ನಮಸ್ಕಾರ.

-ಹುಲಿಕುಂಟೆ ಮೂರ್ತಿ

'ಲಂಕೇಶರಿಗೆ ನಮಸ್ಕಾರ' ರಂಗಪ್ರಯೋಗದ ಭಾಗವಾಗಿ 27 ರಂದು 'ಲಂಕೇಶ್: ರಂಗಭೂಮಿ ಮತ್ತು ಸಾಹಿತ್ಯ' ಕುರಿತು ವಿಚಾರ ಸಂಕಿರಣ ನಡೆಯಿತು. ರಂಗಾಯಣ, ಕರ್ನಾಟಕ ನಾಟಕ ಅಕಾಡೆಮಿ ಹಾಗು ನಮ್ಮ 'ಲಂಕೇಶ್' ವಾರಪತ್ರಿಕೆಯ ಸಹಯೋಗದೊಂದಿಗೆ ಆಯೋಜಿಸಿದ್ದ ಈ ಸಭೆ ಕಲಾಕ್ಷೇತ್ರದ ಲೌಂಜ್‌ನಲ್ಲಿ ನಡೆಯಬೇಕಿತ್ತು, ಆದರೆ ನಿರೀಕ್ಷಿಸಿದ್ದ ನೂರು ಜನರ ಬದಲಾಗಿ ಐನೂರಕ್ಕೂ ಹೆಚ್ಚು ಜನ ಬಂದಿದ್ದರಿಂದ ವಿಚಾರ ಸಂಕಿರಣವನ್ನು ಮುಖ್ಯರಂಗಮಂದಿರದಲ್ಲೇ ನಡೆಸಿದ್ದು ವಿಶೇಷ.

ಗೌರಿ ಲಂಕೇಶರ ಸ್ವಾಗತದೊಂದಿಗೆ ಆರಂಭವಾದ ವಿಚಾರ ಸಂಕಿರಣದಲ್ಲಿ ಸಿ. ಬಸವಲಿಂಗಯ್ಯ, ಚಿದಂಬರರಾವ್ ಜಂಬೆ, ಕಿ.ರಂ. ನಾಗರಾಜ್, ಕೆ. ಮರುಳಸಿದ್ಧಪ್ಪ ಹಾಗೂ ಬಂಜಗೆರೆ ಜಯಪ್ರಕಾಶ್ ಭಾಗವಹಿಸಿದ್ದರು. ಅವರ ಮಾತುಗಳ ಮುಖ್ಯಾಂಶಗಳು ಇಲ್ಲಿವೆ.




ಸಿ. ಬಸವಲಿಂಗಯ್ಯ: ಆಯಾಕಾಲದ ಸಾಮಾಜಿಕ ತಲ್ಲಣಗಳನ್ನು ನಾಟಕವಾಗಿಸಿದ ಲಂಕೇಶ್, ಕೈಲಾಸಂ ನಂತರದ ಮಹತ್ವದ ಬರಹಗಾರ. ಅವರ ಸಂಕ್ರಾಂತಿ, ಗುಣಮುಖಗಳಂತೆಯೇ ಅನುವಾದಗಳಾದ ಈಡಿಪಸ್, ಅಂತಿಗೊನೆಗಳೂ ಕೂಡಾ ಹವ್ಯಾಸಿ ರಂಗಭೂಮಿಗೆ ಹೊಸ ಚೈತನ್ಯ ನೀಡಿದವು. ಅವರು ಬರಹಗಾರ ಮಾತ್ರವಾಗಿರದೇ ಅದ್ಭುತ ಸಂಘಟಕರೂ ಆಗಿದ್ದರು. ದೆಹಲಿಯಿಂದ ಕಾರಂತರನ್ನು ಕರೆತಂದು ನಿರ್ದೇಶನಕ್ಕೆ ಹಚ್ಚಿದರು. ಕಾರ್ನಾಡರಿಗೆ ಬಣ್ಣ ಹಾಕಿಸಿದರು; ಕಂಬಾರರಿಂದ ಸಂಗೀತ ನಿರ್ದೇಶನ ಮಾಡಿಸಿದರು. ಅವರದ್ದು ದೈತ್ಯ-ರಾವಣ ಪ್ರತಿಭೆ.



ಕಿ.ರಂ. ನಾಗರಾಜ: ಆಧುನಿಕ ನಾಟಕಕ್ಕೆ ಯಾವ ಶಾಸ್ತ್ರವೂ ಇಲ್ಲ; ಒಂದು ಕೃತಿಯಿಂದ ಶಾಸ್ತ್ರ ಹುಟ್ಟುತ್ತೆ ಹೊರತು ಶಾಸ್ತ್ರದಿಂದ ಕೃತಿ ಹುಟ್ಟಲ್ಲ. ಇದು ಪ್ರಭೇದಗಳನ್ನು ಒಡೆಯುವ ಕಾಲ. ಹೀಗೆ ಒಡೆದು ಕಟ್ಟದಿದ್ದರೆ ನಿರ್ಮಿತಿ ಸಾಧ್ಯವಿಲ್ಲ. ಈ ಕಾರಣಕ್ಕೇ ಲಂಕೇಶ್ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಬಹಳ ಮುಖ್ಯವಾಗಿ ನಿಲ್ಲುತ್ತಾರೆ. ಅವರ ಬರಹಗಳು ಎಲ್ಲವೂ ಆಗುತ್ತವೆ. ಬಿರುಕು ಕಾದಂಬರಿಯೂ ಹೌದು, ನಾಟಕವೂ ಹೌದು. ಇದರಿಂದಾಗಿ ಕಾದಂಬರಿಯೊಂದು ನಾಟಕವಾಗಿ **translate** ಆಗುವ ಸಾಧ್ಯತೆ ಗೋಚರಿಸುತ್ತೆ. ಸಿದ್ಧ ಸಾಮಾಜಿಕ ನಿಲುವುಗಳನ್ನು ನಿರಾಕರಿಸಿದ ಲಂಕೇಶರ ಬರವಣಿಗೆಯನ್ನು ಪ್ರಭೇದಾತ್ಮಕವಾಗಿ ವಿಂಗಡಿಸುವುದು ಸರಿಯಲ್ಲ. ಆದ್ದರಿಂದ 'ಲಂಕೇಶರಿಗೆ ನಮಸ್ಕಾರ' ನಾಟಕದ ಮೂಲಕ ಬಸವಲಿಂಗಯ್ಯ ತಮ್ಮ ಪ್ರತಿಭೆ ತೋರಿಸಿದ್ದಾರೆ. ಅಗಾಧ ನೋವಿನಿಂದ ಕೂಡಿದ ಚೈತನ್ಯ ಹೊಂದಿದ್ದ ಲಂಕೇಶ್ 'ದೈನಿಕ ಮಹಾಕಾವ್ಯ' ಬರೆದರು. ಅಂತರಂಗ ಮತ್ತು ಬಹಿರಂಗದ ಕಲ್ಪನೆಯನ್ನು 20 ನೇ ಶತಮಾನದಲ್ಲಿ ಬಹಳ ಅರ್ಥಪೂರ್ಣವಾಗಿ ತೋರಿಸಿದವರು ಲಂಕೇಶ್.



ಬಂಜಗೆರೆ ಜಯಪ್ರಕಾಶ್: ನನಗೆ ವಾಸ್ತವ ರಾಜಕಾರಣದ ಸೂಕ್ಷ್ಮ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಕಲಿಸಿದ್ದು ಲಂಕೇಶ್. ಕರ್ನಾಟಕದ ಸಾವಿರಾರು ಯುವಜನರ ಆತ್ಮವನ್ನು ತಿದ್ದುವ ಕ್ರಿಯೆಯ ಮೂಲಕ ಲಂಕೇಶರು ನಮ್ಮಲ್ಲಿ ಮೌಲ್ಯಪ್ರಜ್ಞೆಯನ್ನು ಬೆಳೆಸಿದರು. ಆದರ್ಶದ ರಾಜಕಾರಣ, ಸಿದ್ಧಾಂತದ ರಾಜಕಾರಣ ಹಾಗೂ ನಿತ್ಯದ ರಾಜಕಾರಣಗಳು ಬೇರೆ ಎಂದು ತೋರಿಸಿಕೊಡುವ, ಆಯಾಘಟ್ಟದಲ್ಲಿ ಎದುರಾಗುವ ರಾಜಕೀಯಕ್ಕೆ ನಮ್ಮ ನಿಲುವು ಏನಾಗಿರಬೇಕು ಎಂಬುದನ್ನು ಲಂಕೇಶ್ ಹೇಳಿಕೊಟ್ಟರು. ಟಿ.ಎಸ್. ಎಲಿಯಟ್ ಸತ್ತಾಗ ಎಜ್ರಾಪೌಂಡ್ ಹೇಳಿದ್ದು "ಆತನನ್ನು ಓದಿರಿ". ಈಗ ಕರ್ನಾಟಕದಲ್ಲಿ ಸಂವೇದನೆ, ಮೌಲ್ಯಪ್ರಜ್ಞೆ ರೂಪಿಸಿಕೊಳ್ಳಬೇಕಾದರೆ ನಾವೆಲ್ಲರೂ ಪ್ರಾಮಾಣಿಕವಾಗಿ ಲಂಕೇಶರನ್ನು ಓದಲೇಬೇಕು.



ಕೆ. ಮರುಳಸಿದ್ಧಪ್ಪ: ಲಂಕೇಶ್ ಕನ್ನಡದ ಅತ್ಯಂತ ಶ್ರೇಷ್ಠ ನಾಟಕಕಾರ. ಆದರೆ ಅವರನ್ನು ಶ್ರೇಷ್ಠ ನಾಟಕಕಾರ ಎಂದು ಒಪ್ಪಿಕೊಳ್ಳಲು ನಮ್ಮ ರಂಗಕರ್ಮಿಗಳು ಇನ್ನೂ ಸಿದ್ಧರಿಲ್ಲ. ಇಲ್ಲಿ ಅವರನ್ನು ಹಾಡಿ ಹೊಗಳುವ ಜನ ವಿಮಾನ ಹತ್ತಿದೊಡನೆ ಅವರನ್ನು ಮರೆತೇಬಿಡುತ್ತಾರೆ. ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳ ಬಗ್ಗೆ ಅತ್ಯಂತ ಸ್ಪಷ್ಟ, ನಿಷ್ಠುರ ಪ್ರಶ್ನೆಗಳಿರಬೇಕೆಂಬುದನ್ನು ಕಲಿಸಿಕೊಟ್ಟ ಲಂಕೇಶ್ ದಲಿತರು, ಮಹಿಳೆಯರು ಮತ್ತು ಮುಸ್ಲಿಮರನ್ನು ಸಮಾನವಾಗಿ ಕಕ್ಕುಲಾತಿಯಿಂದ ಬೆಳೆಸಿದವರು. ಹಾಗೇ ಅವರಲ್ಲಿ ಯಾರು ತಪ್ಪು ಮಾಡಿದರೂ ಅಷ್ಟೇ ನಿಷ್ಠುರತೆ, ನಿರ್ದಾಕ್ಷಿಣ್ಯವಾಗಿ ಬುದ್ಧಿ ಹೇಳುತ್ತಿದ್ದರು.

ಈ ಸಲ ಲಂಕೇಶರ ಅಲ್ಲಲ್ಲಿಯ ಮಾತುಗಳನ್ನು ಸೂಕ್ತಿಗಳಾಗಿ ನೀಡುತ್ತಿದ್ದೇವೆ.

ಬರಹಗಾರ, ಚಿಂತಕರೊಬ್ಬರ ಕನಸ್ಸು-ಕಾಣ್ಕೆ-ಮಾತುಗಳು ಎಲ್ಲ ಕಾಲದ ತಲ್ಲಣಗಳಿಗೂ ಸ್ಪಂದಿಸುವ ಶಕ್ತಿ ಹೊಂದಿದ್ದರೆ, ಆ ಸಾಲಿನಲ್ಲಿ ಲಂಕೇಶ್ ಪ್ರಮುಖರಾಗಿ ನಿಲ್ಲುತ್ತಾರೆ. ಆ ಕಾರಣಕ್ಕೆ ಗದ್ಯ, ಪದ್ಯ, ಹಾಡು ಎಲ್ಲವೂ ಆಗಬಹುದಾದ ಅವರ ಮಾತುಗಳು ಇಲ್ಲಿ ಸೂಕ್ತಿಗಳಾಗಿವೆ.

ಕಳೆದ ಸಂಚಿಕೆಯ ಸೂಕ್ತಿಗಳು ಟಾಲ್‌ಸ್ಟಾಯ್ ಹೇಳಿಕೆಗಳು. ಅವುಗಳನ್ನು ವಿಜಯ ಅಮೃತರಾಜ್ ಸಂಗ್ರಹಿಸಿ ಕಳಿಸಿದ್ದರು. ನಮ್ಮ ಕಣ್ತಪ್ಪಿನಿಂದ ಇದು ಬಿಟ್ಟು ಹೋಗಿತ್ತು ಕ್ಷಮೆಯಿರಲಿ.

-ಸಂ

ಸಿದ್ಧರಾಮಯ್ಯ ಮುತ್ಸದ್ದಿಯಂತೆ ಚಿಂತಿಸುವಂತಾಗಲಿ...

"ದೇವೇಗೌಡರನ್ನು ರಾಜಕೀಯವಾಗಿ ಮುಗಿಸುವುದೇ ನನ್ನ ಗುರಿ..."

-ಇದು ಕಾಂಗ್ರೆಸ್ ಪಕ್ಷ ಸೇರಿದ ಮೇಲೆ ಸಿದ್ಧರಾಮಯ್ಯನವರು ಪದೇ ಪದೇ ಹೇಳುತ್ತಿರುವ ಮಾತು. ಕರ್ನಾಟಕದ ಜನರ ಪ್ರಬುದ್ಧತೆಯನ್ನು ಬಲ್ಲವರಿಗೆ ಈ ಹೇಳಿಕೆ ಕೊಂಚ ತಮಾಷೆಯಾಗಿ ಕಾಣಿಸಿದರೆ ಆಶ್ಚರ್ಯವಿಲ್ಲ, ಏಕೆಂದರೆ ದೇವೇಗೌಡ ಮತ್ತವರ ಮಕ್ಕಳನ್ನು ಸೋಲಿಸಲು ಬೇರೆ ಯಾರೂ ಬೇಕಿಲ್ಲ. ಸ್ವತಃ ಅವರೇ ಅಷ್ಟು ಆತ್ಮಹತ್ಯಾತ್ಮಕ ಭ್ರಷ್ಟ ರಾಜಕೀಯದಲ್ಲಿ ಮುಳುಗಿ ಹೋಗಿದ್ದಾರೆ. ಈ ಕುಟುಂಬ ನಾಳೆ ರಾಜಕೀಯವಾಗಿ ಮೂಲೆಗುಂಪಾದರೆ ಅದಕ್ಕೆ ಜನ ಕಾರಣರಾಗುತ್ತಾರೆ, ಸಿದ್ಧರಾಮಯ್ಯ ಒಂದು ನೆಪವಾಗುತ್ತಾರಷ್ಟೆ.



ಈ ಮಾತು ಏಕೆ ಹೇಳಲೇಬೇಕಾಯಿತೆಂದರೆ ಸಿದ್ಧರಾಮಯ್ಯ ಮೊದಲು ಈ ಸೀಮಿತ ಚಿಂತನೆ, ವೈಯಕ್ತಿಕ ಸಿಟ್ಟು, ಹತಾಶೆಯ ರಾಜಕೀಯದಿಂದ ಹೊರಬರಬೇಕಿದೆ. ಪ್ರಬುದ್ಧ ನಾಯಕನೊಬ್ಬ ರೂಪ ತಾಳುವುದೇ ಈ ಪ್ರಕ್ರಿಯೆಯಲ್ಲಿ.

ಕರ್ನಾಟಕದ ಇವತ್ತಿನ ರಾಜಕೀಯ ಪರಿಸ್ಥಿತಿಯನ್ನೇ ನೋಡಿ... ಸಂಪದ್ಭರಿತ ರಾಜ್ಯವಾದರೂ ಕಷ್ಟಜೀವಿಗಳಿರುವ, ಮೈತುಂಬ ಸಮಸ್ಯೆಗಳಿರುವ ಕರ್ನಾಟಕದಲ್ಲಿ ನಿಜವಾದ ನಾಯಕತ್ವ ಗುಣಗಳಿರುವ ಒಬ್ಬರಾದರೂ ಇದ್ದಾರೆಯೇ ಎಂದು ನೋಡಿದರೆ ನಿರಾಶೆಯಾಗುತ್ತದೆ.

ಅಧಿಕಾರ ಸಿಗುತ್ತಿದ್ದಂತೆ ದೇವೇಗೌಡರು ಯಥಾಪ್ರಕಾರ ಕರ್ನಾಟಕವನ್ನು ತಮ್ಮ ಕುಟುಂಬದ ಅಭಿವೃದ್ಧಿಗೆ ಬಳಸಿಕೊಳ್ಳುತ್ತಾರೆ. ಇನ್ನು ಅವರ ಪುತ್ರರತ್ನ ಕುಮಾರಸ್ವಾಮಿ ಕರ್ನಾಟಕ ಕಂಡ ಅತಿ ಬಾಲಿಶ, ಹಾಸ್ಯಾಸ್ಪದ ಮುಖ್ಯಮಂತ್ರಿ ಎಂಬುದರ ಬಗ್ಗೆ ಈಗ ಯಾವ ಅನುಮಾನವೂ ಇಲ್ಲ. ಇನ್ನು ಸಮಾಜವಾದಿ ಎಂ.ಪಿ. ಪ್ರಕಾಶ್ ತನ್ನ ಬೆನ್ನೆಲುಬನ್ನು ಮಾತ್ರವಲ್ಲ ತಮ್ಮ ಅಸ್ಥಿಪಂಜರವನ್ನೇ ಇಲ್ಲದಂತಾಗಿಸಿಕೊಂಡಿದ್ದಾರೆ.

ಕಂಡಹಾಗೆ



ಕಾಂಗ್ರೆಸ್, ಬಜೆಪಿ, ಜೆಡಿಎಸ್ ಎಂದೆಲ್ಲ ಅಲೆದಾಡಿದ ರಾಜಶೇಖರಮೂರ್ತಿ ಈಗ ಯಾವ ಪಕ್ಷದಲ್ಲಿದ್ದಾರೆ ಎಂಬುದು ಜನರಿಗೇ ಬೇಡವಾಗಿದೆ.

ಇದು ದಳದ ನಾಯಕರ ಪರಿಸ್ಥಿತಿಯಾದರೆ ಬಜೆಪಿ ಪಕ್ಷದ ಪರಿಸ್ಥಿತಿ ಇನ್ನೂ ಹೆಚ್ಚಿನ ವ್ಯಂಗ್ಯಗಳಿಂದ ಕೂಡಿದೆ. ಯಡಿಯೂರಪ್ಪ ನಿಷ್ಪ್ರಯೋಜಕ, ಈಶ್ವರಪ್ಪ ಹುಂಬ, ಇನ್ನುಳಿದವರು ಭೂಗಳ್ಳರು....

ಈ ಮಧ್ಯೆ ಕಾಂಗ್ರೆಸ್ ಕಡೆ ನೋಡಿದರೆ ಮತ್ತದೇ ವ್ಯಕ್ತಿತ್ವರಹಿತ ಮುಖಗಳು ಕಾಣಿಸುತ್ತವೆ. ಭ್ರಷ್ಟ ಧರಂ ಸಿಂಗ್, ಜನರಲ್ಲಿ ನಿರುತ್ಸಾಹ ಮೂಡಿಸುವ ಖರ್ಗೆ, ಪುಂಡ ಡಿಕೆಶಿ.... ಇಂತಹವರೇ ಕಾಂಗ್ರೆಸ್ ನಾಯಕರು...

ಇವರಲ್ಲಿ ಒಬ್ಬರಿಗಾದರೂ ನಮ್ಮ ಕರ್ನಾಟಕದ ಜನಜೀವನ, ಕಾಡು-ನದಿ, ಕೈಗಾರಿಕೆ, ಕೃಷಿಯ ಅಭಿವೃದ್ಧಿ ಬಗ್ಗೆ ಒಂದು ಕನಸು-ಕಲ್ಪನೆಗಳೂ ಇಲ್ಲ, ಜಾತಿ ದೌರ್ಜನ್ಯ ದಲಿತರ ಸಂಕಟ, ಮುಸ್ಲಿಂ-ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಅಸಹಾಯಕತೆಗಳಿಗೆ ಸ್ಪಂದಿಸುವ ಸೂಕ್ಷ್ಮತೆಯೂ ಇಲ್ಲ.

ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಸಿದ್ಧರಾಮಯ್ಯ ತರಹದವರು ಯೋಚಿಸಬೇಕಾದ, ಕೈಗೊಳ್ಳಬೇಕಾದ ನೂರೆಂಟು ಕೆಲಸಗಳಿವೆ. ಸ್ವತಃ ಹಿಂದುಳಿದ ವರ್ಗದಿಂದ ಬಂದಿರುವ ಸಿದ್ಧರಾಮಯ್ಯ ಕರ್ನಾಟಕದ ಮೇಲುಜಾತಿ ರಾಜಕಾರಣಿಗಳ ಪುಂಡಾಟಿಕೆಗೆ ಉತ್ತರವಾಗಬೇಕಿದೆ. ಜನಜಾಗೃತಿ ಮೂಡಿಸುವ ಮೂಲಕ ಕೋಮುವಾದಿ ಶಕ್ತಿಗಳನ್ನು ಸದೆಬಡಿಯಬೇಕಿದೆ. ಸ್ವತಃ ಆರ್ಥಿಕ ಖಾತೆ ಸಚಿವರಾಗಿ ಕೆಲಸ ಮಾಡಿರುವ ಸಿದ್ಧರಾಮಯ್ಯನವರಿಗೆ ಈ ನಮ್ಮ ರಾಜ್ಯದ ಆದಾಯ-ವೆಚ್ಚ ಸಂಪತ್ತಿನ ಮಿತಿಗಳು, ತೆರಿಗೆಯ ಸಾಧ್ಯತೆಗಳು ಅರ್ಥವಾಗಿರುವುದೇ ನಿಜವಾದರೆ ಅವರೀಗ ನಿಜಕ್ಕೂ ಓರ್ವ ಮುತ್ಸದ್ದಿಯಂತೆ ವರ್ತಿಸಬೇಕಿದೆ. ಹೊರನೋಟಕ್ಕೆ ಸಿದ್ಧರಾಮಯ್ಯ ಗಂಟುಮೋರೆ, ಸಿಡುಕಿನ ಮನುಷ್ಯನಂತೆ ಕಂಡರೂ ವಾಸ್ತವವಾಗಿ ಅವರು ಸೂಕ್ಷ್ಮಮನಸ್ಸಿನ, ರೈತ ಹೋರಾಟದಿಂದ ರಾಜಕೀಯಕ್ಕೆ ಪ್ರವೇಶ ಪಡೆದ ಅವರು ಎಂ. ಪಿ. ಪ್ರಕಾಶರಂತೆ ಬುದ್ಧಿಜೀವಿಯಂತೆ ಪೋಸು ಕೊಡದಿದ್ದರೂ ತಮ್ಮೊಳಗೆ ಲೋಹಿಯಾವಾದವನ್ನು, ಸಮಾಜವಾದವನ್ನು ಕರಗತ ಮಾಡಿಕೊಂಡಿರುವವರು.

ಇಲ್ಲಿಯವರೆಗೂ ಯಾವುದೇ ಹಗರಣಗಳಲ್ಲಿ ಸಿಲುಕದೆ, ಭ್ರಷ್ಟಾಚಾರ ನಡೆಸದೆ ಮೂರು ದಶಕಗಳ ಕಾಲ ರಾಜಕೀಯ ಜೀವನ ಸವೆಸಿರುವ ಸಿದ್ಧರಾಮಯ್ಯನವರು ಇವತ್ತಿನ ಕರ್ನಾಟಕದ ಭ್ರಷ್ಟ, ಅವಿವೇಕಿ ರಾಜಕಾರಣಿಗಳ ನಡುವೆ ಭಿನ್ನವಾಗಿ ಕಾಣಿಸುತ್ತಾರೆ.

ಆದರೆ ಅವರು ನೆನಪಿಟ್ಟುಕೊಳ್ಳಲಿ; ಅವರೀಗ ಸೇರಿರುವ ಕಾಂಗ್ರೆಸ್ ಪಕ್ಷ ಮಹಾ ಭ್ರಷ್ಟಾಚಾರಿಗಳ, ಗುಲಾಮರ ಪಕ್ಷ. ಸಿದ್ಧರಾಮಯ್ಯನವರಂತೆ ಸ್ವಂತಿಕೆ ಹೊಂದಿದ್ದ ಎಷ್ಟೋ ನಾಯಕರನ್ನು ಆ ಪಕ್ಷ ಈಗಾಗಲೇ ನುಂಗಿ ಜೀರ್ಣಿಸಿಕೊಂಡಿದೆ. ಸಿದ್ಧರಾಮಯ್ಯನವರೂ ಕಾಂಗ್ರೆಸ್‌ನಲ್ಲಿ ಕಳೆದು ಹೋಗದೆ, ರಾಜ್ಯಕ್ಕೆ ಈಗ ಅವಶ್ಯವಾಗಿರುವ ಓರ್ವ ಮುತ್ಸದ್ದಿ ನಾಯಕರಾಗಿ ಹೊಮ್ಮಲಿ ಎಂಬುದು ಜನರ ಆಶಯವಾಗಿದೆ. ಅದೇ ನಮ್ಮ ಆಶಯವೂ ಕೂಡ.

ಆದ್ದರಿಂದ "ದೇವೇಗೌಡರ ವಂಶ ರಾಜಕಾರಣವನ್ನು ನಾಶಪಡಿಸುತ್ತೇನೆ" ಎನ್ನುವ ಬದಲಾಗಿ, "ಈ ಭ್ರಷ್ಟರಿಂದ ಕರ್ನಾಟಕವನ್ನು ಉಳಿಸುತ್ತೇನೆ" ಎಂದು ಸಿದ್ಧರಾಮಯ್ಯ ಹೇಳಬೇಕಿದೆ. ಮತ್ತು ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಬೇಕಿದೆ.

ದೇವೇಗೌಡ ಮತ್ತವರ ಕುಟುಂಬ ನಮ್ಮ ರಾಜ್ಯಕ್ಕೆ ಅನಿವಾರ್ಯವೇನಲ್ಲ. ಅವರು ನಾಳೆ ಮೂಲೆ ಗುಂಪಾದರೆ ಇಲ್ಲಿ ಯಾರೂ ಅಳುವುದಿಲ್ಲ. ಸಿದ್ಧರಾಮಯ್ಯ ಇದರಾಚೆಗೆ ಯೋಚಿಸುವಂತಾಗಲಿ.... ಮುತ್ಸದ್ದಿಯಂತೆ!

-ಗೌರಿ ಲಂಕೇಶ್

'ಲಂಕೇಶ್' ಸ್ಕೂಪ್!

ಎಚ್.ಡಿ. ದೇವೇಗೌಡರ ಕುಟುಂಬ ಗಣಿ ಧಂದೆಯಲ್ಲಿ ಭಾಗಿಯಾಗಿದೆ ಎಂದೂ, ಬಿಎಸ್‌ಕೆ ಎಂಬ ಕಂಪನಿಯ ಮಾಲೀಕರು ಗೌಡರ ಮಕ್ಕಳಾದ ಬಾಲಕೃಷ್ಣ ಮತ್ತು ರಮೇಶ್ ಎಂಬುದೂ ರಾಜ್ಯದ ಜನತೆಗೆ ಪ್ರಥಮ ಬಾರಿ ತಿಳಿಸಿದ್ದೇ ಈ ನಿಮ್ಮ ನೆಚ್ಚಿನ 'ಲಂಕೇಶ್' ವಾರಪತ್ರಿಕೆ.

ನಾವು ಕಳೆದ ವಾರ ಮುಖಪುಟದಲ್ಲಿ ಸ್ಫೋಟಿಸಿದ ಈ ಸುದ್ದಿಯನ್ನೇ ಇವತ್ತು ಡಿ.ಕೆ. ಶಿವಕುಮಾರ್ ಹೇಳುತ್ತಿದ್ದಾರೆ, ಇತರೆ ಪತ್ರಿಕೆಗಳು ವರದಿ ಮಾಡುತ್ತಿವೆ. ಈ ಸಂಚಿಕೆಯಲ್ಲಿ ಗೌಡರ ಕುಟುಂಬದ ಇತರೆ ಹಗರಣಗಳನ್ನೂ ಪ್ರಕಟಿಸಿದ್ದೇವೆ.


ಈ ಮಧ್ಯೆ ನಾಲ್ಕು ಸಂಚಿಕೆಗಳ ಹಿಂದೆ ಶಬರಿಮಲೈನಲ್ಲಿ ಅವ್ಯವಹಾರ, ವ್ಯಭಿಚಾರ, ಹೆಂಡ-ಗಾಂಜಾ ಸೇವನೆ ನಡೆಯುತ್ತಿದ್ದು, ಅದನ್ನೆಲ್ಲ ಮುಚ್ಚಿ ಹಾಕಲು ಜಯಮಾಲಾರನ್ನು ಬಲಿ ಹಾಕಲಾಗುತ್ತಿದೆ ಎಂದೂ ನಾವು ಮುಖಪುಟ ವರದಿಯಲ್ಲಿ ಪ್ರಕಟಿಸಿದ್ದೆವು. ಅಂದು ನಾವು ಹೇಳಿದ್ದೆಲ್ಲವೂ ಸತ್ಯ ಎಂದು ಮೊನ್ನಿನ ತಂತ್ರಿ ಕಂಡಾರು ಮೋಹನಾರು ಪ್ರಕರಣ ಸಾಬೀತುಪಡಿಸಿದೆ. ಅಂದಹಾಗೆ ಶಬರಿಮಲೈನಲ್ಲಿ ನಡೆಯುತ್ತಿದ್ದ ಅನೈತಿಕ ವ್ಯವಹಾರಗಳ ಬಗ್ಗೆ ಬರೆದ ಏಕೈಕ ಕನ್ನಡ ಪತ್ರಿಕೆ 'ಲಂಕೇಶ್'!

ಇದು ನಮ್ಮ ಓದುಗರಿಗೂ ಹೆಮ್ಮೆಯ ವಿಷಯ ಎಂದು ನಾವು ನಂಬಿದ್ದೇವೆ.

ಸೂರಿಲ್ಲದ ಕೊರಗಿನಲ್ಲಿ ಕಣ್ಮರೆಯಾದ ಕರೀಂಖಾನ್

ಕರೀಂಖಾನರ ನಿಧನ ಕನ್ನಡ ಸಾಂಸ್ಕೃತಿಕ ಲೋಕದ ಆದರ್ಶವೊಂದರ ಕಣ್ಮರೆಯಂತೆ ಕಾಣತೊಡಗಿದೆ. ಅವರನ್ನು ನೋಡಿದರೆ ಶಕ್ತಿಯಿದ್ದಾಗ ದುಡಿಸಿಕೊಂಡು ನಂತರ ಹಗ್ಗವೂಗುದಾರ ಬಿಚ್ಚಿಕೊಂಡು ಬೀದಿಗೆ ನೂಕಿರುವ ಎತ್ತಿನಂತೆ ಕಾಣುತ್ತಿದ್ದರು. ಅವರ ಬದುಕನ್ನು ಗಮನಿಸಿದರೆ ಈ ಮಾತಿಗೆ ಅರ್ಥ ಹೊಳೆಯುತ್ತದೆ.

ರಾಗಿ ಬೀಸುವ ಪದದಿಂದ ಹಿಡಿದು ಹೆಣ್ಣು ತವರು ಮನೆ ಬಿಟ್ಟು ಹೋಗುವಾಗ ಅನುಭವಿಸುವ ತಳಮಳದ ಹಾಡಿನವರೆಗೆ ಮನಮಿಡಿಯುವಂತೆ ಹಾಡುತ್ತಿದ್ದ ಕರೀಂಖಾನರನ್ನು ಸ್ವಾತಂತ್ರ್ಯ ಚಳವಳಿಯ ಜನ ಚೆನ್ನಾಗಿ ಬಳಸಿಕೊಂಡರು. ಸ್ವಾತಂತ್ರ್ಯ ಹೋರಾಟದ ಸಭೆಗೆ ಮುನ್ನ ಜನ ಸೇರುವವರೆಗೆ ಕರೀಂಖಾನರು ಹಾಡುತ್ತಿದ್ದರು. ಅವರ ಹಾಡಿನ ಮೋಡಿಗೆ ಜನ ಸೇರಿದ ನಂತರ, ನಾಯಕರುಗಳ ಭಾಷಣ ಆರಂಭವಾಗುತ್ತಿತ್ತು.



ಅಂತೂ ಸ್ವಾತಂತ್ರ್ಯ ಬಂತು. ಹೋರಾಡಿದ್ದವರು ಅದೂ ಇದು ಸವಲತ್ತು, ಮಾಶಾಸನಕ್ಕೆ ಕುತ್ತಾದರು. ಇನ್ಯಾರೋ ಬಂದು ಅಧಿಕಾರ ಹಿಡಿದರು. ಕರೀಂಖಾನರು ಮತ್ತೆ ಬೀದಿಗೆ ಬಿದ್ದರು.

ಖಾನರು ತಾರುಣ್ಯದಲ್ಲಿ ಬಹಳ ಸುಂದರವಾಗಿದ್ದ ಯುವಕ. ಮಿಂಚುವ ಗೋದಿಬಣ್ಣದ ಈ ಯುವಕನ ಕಣ್ಣು ಬಹು ಮಾದಕವಾಗಿದ್ದವು. ಆಗ ಸುರಸುಂದರಿಯಂತಿದ್ದ ಯುವತಿಯೊಬ್ಬಳು ಖಾನರನ್ನು ನೋಡತೊಡಗಿದಳು. ಅಷ್ಟರಲ್ಲಾಗಲೇ ಜಂಗಮದೀಕ್ಷೆ ಪಡೆದಿದ್ದ ಖಾನರು ಆ ಯುವತಿಯ ನೋಟದಿಂದ ಗಲಿಬಿಲಿಯಾದರು. ಇವಳನ್ನು ಮದುವೆಯಾದರೆ, ತನ್ನ ಸ್ವಾತಂತ್ರ್ಯ ಹೋರಾಟ, ಜಾನಪದ ಸಂಗ್ರಹ ಸಾಧ್ಯವೇ ಇಲ್ಲ ಎನ್ನಿಸಿ ಊರನ್ನೇ ಬಿಟ್ಟು ಹೋದರು.

ಹೀಗೆ ಹೋದವರ ಸಿದ್ಧಾಂತವೂ ಕೂಡ ಎಷ್ಟು ಹಾಸ್ಯಾಸ್ಪದವಾಗಿತ್ತೆಂದರೆ, ಮನುಷ್ಯ ಲೈಂಗಿಕತೆಯಿಂದ ದೂರವಿದ್ದಷ್ಟು ಅವನ ಆಯುಸ್ಸು ಹೆಚ್ಚುತ್ತದೆ ಎಂದು ನಂಬಿದ್ದರು. ಇದರ ಜೊತೆಗೆ ಸಿಗರೇಟ್ ಮತ್ತು ಗುಂಡನ್ನು ಸೇರಿಸುತ್ತಿದ್ದರು. ಆದರೆ ಹೆಣ್ಣಿನ ಸಂಪರ್ಕದಿಂದ ಹರದಾರಿ ದೂರವಿದ್ದರೆ ಆಯುಸ್ಸು ಜಾಸ್ತಿ ಎಂಬುದು ಅವರ ಭಾಗಕ್ಕೆ ನಿಜವಾಗಿತ್ತೇನೋ. ಉಳಿದವರ ವಿಷಯದಲ್ಲಿ ಅದು ಒಪ್ಪತವಲ್ಲದ ಸಿದ್ಧಾಂತ.

ಅವರ ಜಾನಪದ ಲೋಕದ ಯಾತ್ರೆಯೂ ಅಂತಹ ಸಹ್ಯವಾದ ತಾಣವಾಗಿರಲಿಲ್ಲ, ಅಲ್ಲಾಗಲೇ ಗೂಳಿಯಂತಹ ಜನ ಮುತ್ತಿಕೊಂಡು ಮೆರೆಯುತ್ತಿದ್ದರು. ಕ.ರಾ.ಕೃ. ಅಂತಹ ಅಪರೂಪದ ಜಾನಪದ ಸಂಗ್ರಹಕರೇ ಮೂಲೆಗುಂಪಾಗಿದ್ದಾಗ, ಕರೀಂಖಾನರದ್ದು ಯಾವ ಲೆಕ್ಕ ಎನ್ನುವಂತಾಗಿತ್ತು. ಆದ್ದರಿಂದ ಸಿನಿಮಾ ಲೋಕದಲ್ಲಿ ಅವರ ಪ್ರತಿಭೆ ಬೆಳೆಯತೊಡಗಿತು.

'ಸ್ವರ್ಣಗೌರಿ'ಗೆ ಅವರು ಬರೆದ ಹಾಡು, ಸಂಭಾಷಣೆ ಅವರಿಗೆ ಖ್ಯಾತಿಯನ್ನು ತಂದುಕೊಟ್ಟಿತು. ಅದರಲ್ಲೂ "ನುಡಿಮನ ಶಿವಗುಣ ಸಂಕೀರ್ತನ ಮತ್ತು ನಟವರ ಗಂಗಾಧರ, ಬಾರಾ ಚಂದ್ರಮ," ಹಾಡುಗಳು ಎಂದೆಂದಿಗೂ ಕೇಳುವ ಹಾಡುಗಳಾಗಿ ಉಳಿದಿವೆ. ಅವರ 'ಬಾರೇ ನೀ ಚೆಲುವೆ' ಇಂದಿಗೂ ತರುಣರು ಗುನುಗುವ ಹಾಡಾಗಿ ಉಳಿದಿದೆ. ಅದರಲ್ಲೂ ಬಾಲಮುರಳಿ ಹಾಡಿರುವ ನಟವರ ಗಂಗಾಧರ ಉಮಾಶಂಕರ ಹಾಡು ಸಿನಿಮಾರಂಗ ಇರುವವರೆಗೂ ಬದುಕಿರುವ ಹಾಡಾಗಿದೆ.

ಸರಳವಾಗಿ ಮನಮುಟ್ಟುವಂತೆ ಬರೆಯುತ್ತಿದ್ದ ಕರೀಂಖಾನರನ್ನು ನಮ್ಮ ಚಿತ್ರರಂಗ ಚೆನ್ನಾಗಿ ನಡೆಸಿಕೊಂಡಿದ್ದರೆ ಕನ್ನಡದ ಶೌಕತ್ ಆಗುತ್ತಿದ್ದರೇನೋ. ಆದರೆ ಕನ್ನಡ ಚಿತ್ರರಂಗ ಅವರಿಗೆ ಎಷ್ಟು ನೋವು ಮಾಡಿತ್ತೋ ಏನೋ, 'ನಿಮ್ಮ ಜೀವನದಲ್ಲಿ ಮಾಡಿರುವ ತಪ್ಪು ಯಾವುದು' ಎಂದು ಕೇಳಿದ. 'ನಾನು ಆ ಚಿತ್ರರಂಗಕ್ಕೆ ಹೋದದ್ದು' ಎನ್ನುತ್ತಿದ್ದರು. ಮತ್ತೆ ಎರ ಯಾವುದೆಂದು ಕೇಳಿದರೆ ಅದೂ ಕೂಡ ಚಿತ್ರರಂಗ ಪ್ರವೇಶವೇ ಎಂದು ಹೇಳುತ್ತಿದ್ದರು. ಒಬ್ಬ ಮಹಾಪ್ರತಿಭಾವಂತ, ಅದರಲ್ಲೂ ಹಾಲಿನಂಥ ಮನಸ್ಸಿನವನಿಗೆ ಇಂತಹ ಆಘಾತವಾಗಿರಬೇಕಾದರೆ, ಅವರು ಇನ್ನೆಂತಹ ಅನ್ಯಾಯವನ್ನ ಅನುಭವಿಸಿರಬಹುದು ಅನ್ನಿಸಿತ್ತು. ಆದರೆ ಖಾನರು ತಮಗೆ ಅನ್ಯಾಯ ಮಾಡಿದವರ ಹೆಸರನ್ನು ಕಡೆಗೂ ಹೇಳಲಿಲ್ಲ. ಹೇಳಿದ್ದರೆ ಅವರೆಷ್ಟು ಕೀಳುಮಟ್ಟದಲ್ಲಿ ಪ್ರತಿಕ್ರಿಯಿಸುತ್ತಿದ್ದರು ಎಂಬುದು ಖಾನರಿಗೆ ಗೊತ್ತಿತ್ತೋ ಏನೋ?

ಕರೀಂಖಾನರ ಪೂರ್ವಿಕರು ಈ ನೆಲದವರಲ್ಲ, ವಲಸೆ ಬಂದವರು. ಅದರಲ್ಲೂ ಅಫ್ಘಾನಿಸ್ತಾನದವರು. ಹೀಗೆ ವಲಸೆ ಬಂದವರ ಮಗ ಕೈಹಾಕಿದ ಕೆಲಸವೆಂದರೆ ನಮ್ಮ ನೆಲದ ಜನಪದ ಹಾಡಿನ ಸಂಗ್ರಹ. ಜೊತೆಗೆ ನಮ್ಮ ಪುರಾಣ, ಕಾವ್ಯ, ಸಾಹಿತ್ಯ ಶಾಸ್ತ್ರಗಳಲ್ಲಿ ಗಳಿಸಿದ ಪಾಂಡಿತ್ಯದ ಫಲವೇ ನಟವರ ಗಂಗಾಧರ ಹಾಡು ಹುಟ್ಟಲು ಸಾಧ್ಯವಾದದ್ದು. ವಲಸೆ ಬಂದ ರೆವರೆಂಡ್ ಕಿಟ್ಟಲ್ ಹೇಗೆ ನಮ್ಮ ಸಂತೆಗಳಿಗೆ ಹೋಗಿ ಕನ್ನಡದ ಭಾಷೆ ಅರ್ಥ ಸಂಗ್ರಹಿಸಿ, ಅರ್ಥಕೋಶ ಕೊಟ್ಟರೊ, ಹಾಗೆ ಕರೀಂಖಾನರು ನಮ್ಮ ಹೆಣ್ಣುಮಕ್ಕಳು ಹಾಡುವ ಜನಪದವನ್ನು ಸಂಗ್ರಹಿಸಿದರು.

ಆ ಸಮಯದಲ್ಲಿ ಅವರಿಗೆ ಒಂದು ನೆಲೆ ಬೇಕೆಂದು ಅನ್ನಿಸಿರಲೇ ಇಲ್ಲ, ಆದರೆ ಎಲ್ಲರೂ ತಾತ್ಸಾರ ಮಾಡಿದ ಮೇಲೆ 'ತನಗೆ ತನ್ನದೇ ಆದ ಒಂದು ಗೂಡುಬೇಕು' ಅನ್ನಿಸತೊಡಗಿತು. ತುಂಬ ಸ್ವಾಭಿಮಾನಿಯಾದ ಕರೀಂಖಾನರು ಸರ್ಕಾರದ ಎದುರು ಅಂಗಲಾಚುವ ಸ್ಥಿತಿಯಲ್ಲಿರಲಿಲ್ಲ, ಆದರೂ ತಮ್ಮ ಸುತ್ತ ... ರುವ ಜನ ಒಡಾಡಿ ತಮ್ಮ ಅಪೇಕ್ಷೆ ಪೂರೈಸುತ್ತಾರೆಂದು ... ವಿಸಿದ್ದರು.

ಹೆಗಡೆ ಸರ್ಕಾರದ ಸಮಯದಲ್ಲಿ ಪ... ರು ಮತ್ತು ಎಂ.ಪಿ. ಪ್ರಕಾಶರ ಕಾಳಜಿಯಿಂದಾಗಿ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಅವರ ಅವಧಿ ಮುಗಿಯುವಷ್ಟರಲ್ಲಿ ಅವರಿಗೊಂದು ನಿವೇಶನ ಅಥವಾ ಮನೆ ತೆಗೆದುಕೊಡಬಹುದಿತ್ತು, ಆ ಕೆಲಸವೂ ಆಗಲಿಲ್ಲ. ಎಸ್.ಎಂ. ಕೃಷ್ಣರ ಸರ್ಕಾರ ಮನೆ ತೆಗೆದುಕೊಟ್ಟರೆ ಖಾನರ ನಂತರ ಅವರ ಸಂಬಂಧಿಗಳ ಪಾಲಾಗುತ್ತದೆಂದು ಸಣ್ಣತನದಲ್ಲಿ ಯೋಚಿಸಿದರು. ಇದೇ ಸಮಯದಲ್ಲಿ ಕೃಷ್ಣರ ಸಂಬಂಧಿಗಳು ಸೈಟು ಮನೆಗಳ ಖರೀದಿಯಲ್ಲಿ ತೊಡಗಿದ್ದರು. ಆದರೆ ಖಾನರು ಕೃಷ್ಣರ ಸಂಬಂಧಿಯಾಗಿರಲಿಲ್ಲವಲ್ಲ.


ಖಾನರು ನಿಧನರಾದ ಕೂಡಲೇ ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಕೋಟಿ ಕೋಟಿ ಸಂಪಾದಿಸುತ್ತ ಕಟ್ಟಡಗಳನ್ನೇ ಖರೀದಿಸುತ್ತಾ ಸಾಗಿರುವ ಟೀಮೊಂದು ಖಾನ್ ಶವದ ಬಳಿ ನಿಂತು ಈ ಸಾವನ್ನು ತುಂಬಲಾರದ ನಷ್ಟವೆಂದು ವ್ಯಾಖ್ಯಾನಿಸಿದೆ. ಈ ಬಾಯಿಗಳಿಗೆ ಇನ್ಯಾವ ಪದಪುಂಜಗಳು ಸಿಗಲು ಸಾಧ್ಯವಿಲ್ಲ.

ಆದರೆ ಖಾನ್ ಕೇಳಿದ್ದು ಕೇವಲ ಒಂದು ಪುಟ್ಟ ಮನೆ. "ಕನ್ನಡದ ಜನ ಒಮ್ಮೆ ತಾತ್ಸಾರ ಮಾಡಿದಾಗ ನನ್ನನ್ನು ಚೆನ್ನಾಗಿ ನೋಡಿಕೊಂಡವರಿಗೆ ತನ್ನ ಭಾಗದ ಕಾಣಿಕೆಯಾಗಿ ಬಿಟ್ಟು ಹೋಗಲು ಒಂದು ಮನೆ ಕೇಳಿದ್ದೆನಷ್ಟೇ" ಎಂದಿದ್ದರು ಖಾನ್. ಅದನ್ನು ಕೊಡಿಸಲಾಗದ ಈ ಕೋಟ್ಯಾಧಿಪತಿಗಳು ಕರೀಂಖಾನ್ ಶವದ ಎದುರು ದುಃಖಪೂರಿತ ಮುಖ ಮಾಡಿದ್ದೊಂದು ವಿಪರ್ಯಾಸ.

ಕರೀಂಖಾನ್ ನಿಧನದಿಂದ ಗಾಂಧಿ ಕಾಲದ ಆದರ್ಶವೊಂದು ಕಣ್ಮರೆಯಾಗಿದೆ. ಹಾಸಿಗೆಯಲ್ಲಿ ಸುರುಟಿ ಮಲಗಿದ್ದರೂ ಜಾನಪದ ಹಾಡಲು ಯತ್ನಿಸುತ್ತಿದ್ದ ಈ ಜೀವ ಸಾವನ್ನು ಯಾತನಾಮಯವಾಗಿಸಿಕೊಳ್ಳದೆ, ಜಾನಪದ ಲೋಕದಲ್ಲಿ ವಿಹರಿಸಲು ಯತ್ನಿಸಿದ್ದೊಂದು ವಿಶೇಷ. ಖಾನ್ ಅಪ್ಪಟ ಮಾನವತಾವಾದಿ, ಹಿಂದೂ ಮುಸ್ಲಿಮರು ಒಟ್ಟಾಗಿ ಸಂಪಾದಿಸಿದ್ದ ನಿಧಿಯಂತಿದ್ದರು. ಅವರಿಗೆ ಸಲ್ಲಬೇಕಿದ್ದ ಪ್ರಶಸ್ತಿಗಳು ಸಂದರೂ ಕೂಡ ಒಂದು ಸಣ್ಣ ಮನೆ ಕೊಡದಿದ್ದುದು ಅಕ್ಷಮ್ಯ. ಏಕೆಂದರೆ ಅಂತಹ ಒಂದು ಕೊರಗನ್ನೇ ಅವರು ಇಟ್ಟುಕೊಂಡು ಹೋಗಿದ್ದಾರೆ!

-ಬಿ. ಚಂದ್ರೇಗೌಡ

ಮಂಡ್ಯ : ಮೆಡಿಕಲ್ ಕಾಲೇಜ್ ನೌಕರಿಗಳು ಹರಾಜಿಗಿವೆ!



ಕಂಪ್ಯೂಟರ್ ಆಪರೇಟರ್, ಲ್ಯಾಬ್ ಟೆಕ್ನೀಶಿಯನ್‌ನಂತಹ ಆರ್ಡಿನರಿ ಜಾಬಿಗೂ ಒಂದೂವರೆ ಲಕ್ಷ ದಕ್ಷಿಣೆ ಫಿಕ್ಸ್ ಮಾಡಲಾಗಿದೆ. ಕಿದ್ವಾಯಿಯ ಫಾರ್ಮಾಸಿಸ್ಟ್ ಚಂದ್ರಶೇಖರ್, ಬಯೋಕೆಮಿಸ್ಟ್ರಿ ಲೆಕ್ಚರ್ ಮಹದೇವ, ಮೈಸೂರು ಮೆಡಿಕಲ್ ಕಾಲೇಜಿನ ರಿಟೈರ್ಡ್ ಸೂಪರಿಂಟೆಂಡೆಂಟ್ ಗಂಗಾಧರ್... ಈ ಮೂವರು ಬ್ರೋಕರ್‌ಗಳ ತಂಡ ಇಡೀ ಎರಡು ಕೋಟಿ ಡೀಲು ಕುದುರಿಸಿಕೊಟ್ಟಿದೆ.

"ನೀವು ಬೇಕಾದ್ದು ಮಾಡಿಕೊಳ್ಳಿ. ನಾನು ನಿಮ್ಗೆ ಮಾಹಿತಿ ಕೊಡೋದಿಲ್ಲ. ಮಂಡ್ಯದವ್ರು. ನೀವು. ನಿಮ್ ಎಮ್ಮೆಲ್ಲೆಗಳು ಅದೇನ್ ಕಿತ್ಕೋತಿರೋ ನಾನು ನೋಡ್ಕೋತಿನಿ."

ಇದು ಆರಂಭವಾಗಬೇಕಾಗಿರುವ ಮಂಡ್ಯದ ಮೆಡಿಕಲ್ ಕಾಲೇಜಿನ ಡೈರೆಕ್ಟರ್ ಚಿದಾನಂದನ ವರಸೆಗಳಿಗೆ ಉದಾಹರಣೆ. "ಮಂಡ್ಯ ಮೆಡಿಕಲ್ ಕಾಲೇಜಿಗೆ ನೀವು ಅಪಾಯಿಂಟ್‌ಮೆಂಟ್ ಮಾಡಿಕೊಂಡಿರುವ ನೌಕರರ ವಿವರ ಕೊಡಿ" ಅಂತಾ ಮಂಡ್ಯದ ಪ್ರಗತಿಪರ ಸಂಘಟನೆಗಳ ಮುಖಂಡರು ಕೇಳಿದರೆ ಮೈಮೇಲೆ ದೆವ್ವ ಹೊಕ್ಕವನಂತೆ ಚಿದಾನಂದ ಎಗರಾಡುತ್ತಾನೆ. ಆತನೊಂದಿಗೆ ಮಂಡ್ಯದ ಸರ್ಕಾರಿ ಆಸ್ಪತ್ರೆಯ ಹಲವು ಪುಡಿಪುಕ್ಕ ಡಾಕ್ಟರ್‌ಗಳು ಸೇರಿಕೊಂಡು ಮಾಹಿತಿ ಕೇಳಿದವರ ಮೇಲೆ ಅಕ್ಷರಶಃ ಗೂಂಡಾಗಿರಿ ನಡೆಸುತ್ತಾರೆ. "ನೀವ್ಯಾರ್ರಿ ಮಾಹಿತಿ ಕೇಳೋಕೆ? ನಿಮಗ್ಯಾಕೆ ಕೊಡಬೇಕು, ನಾವು ಬೇಕಾದ್ದು ಮಾಡ್ಕೊತೀವಿ. ಯಾರಿಗೆ ಬೇಕಾದ್ರೂ ಕೆಲ್ಸ ಕೊಡ್ತಿವಿ"... ಇದು ಮೆಡಿಕಲ್ ಕಾಲೇಜ್ ಡೈರೆಕ್ಟರ್ ಚಿದಾನಂದ ಅಂಡ್ ಗ್ಯಾಂಗ್‌ನ ವರಸೆ! ಅಸಲು ಮಂಡ್ಯ ಮೆಡಿಕಲ್ ಕಾಲೇಜ್ ಅಂದರೆ ಸದರಿ ಚಿದಾನಂದ ಮತ್ತವನ ಲಂಪಟ ಡಾಕ್ಟರ್ ಸಿಂಡಿಕೇಟ್‌ನ ಖಾಸಗಿ ಆಸ್ತಿ ಎಂಬಂತಾಗಿದೆ. ಇದರಿಂದಾಗಿ ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ನೌಕರಿಗೆ ಆಸೆಪಟ್ಟು ಅರ್ಜಿ ಹಾಕಿದ ಅರ್ಹರಿಗೆ ತಿರುಪತಿ ನಾಮ ಎಳೆದು ದುಡ್ಡು ಕೊಟ್ಟವರಿಗೆ ಇದ್ದಬದ್ದ ಹುದ್ದೆಗಳನ್ನು ಧಾರೆ ಎರೆಯಲಾಗಿದೆ. ಇದನ್ನು ಕಂಡು ಇಲ್ಲಿನ ಅರ್ಹ ನಿರುದ್ಯೋಗಿಗಳೆಲ್ಲಾ ಲಬೋ ಲಬೋ ಬಾಯಿ ಬಡಿದುಕೊಳ್ಳುತ್ತಿದ್ದರೆ, ಮಂಡ್ಯದ ಯಾವನೇ ಜನಪ್ರತಿನಿಧಿ ಕಮಕ್ ಕಿಮಕ್ ಅನ್ನುತ್ತಿಲ್ಲ. ವಾಸ್ತವವಾಗಿ ಈ ಕಾಲೇಜು ಪ್ರಾರಂಭವಾಗುವ ಮುನ್ನವೇ ಅದಕ್ಕೆ ಬಾಲಗ್ರಹ ಬಡಿದುಕೊಂಡಿತ್ತು.

ದೇವೇಗೌಡರ ಅಡ್ಡಿ!


ಕರ್ನಾಟಕದಲ್ಲಿ ಆರು ಹೊಸ ಸರಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಬೇಕು ಎಂದು ಯೋಚಿಸಲಾಗಿತ್ತು. ಆದರೆ ಅದೇ ಹೊತ್ತಿಗೆ ಮಂಡ್ಯ ಜಿಲ್ಲೆಯ ಬೆಳ್ಳೂರಿನ ಆದಿಚುಂಚುನಗಿರಿ ಮೆಡಿಕಲ್ ಕಾಲೇಜ್ ಬೆಂಗಳೂರು ಗ್ರಾಮಾಂತರ ಪ್ರದೇಶಕ್ಕೆ ಟೆಂಟ್ ಕೀಳುತ್ತಿತ್ತು. ರಾಜಕಾರಣಿಗಳ ಕಾಟದ ನಡುವೆಯೂ ಹೊಸ ಮೆಡಿಕಲ್ ಕಾಲೇಜುಗಳಿಗೆ ಅನುಮತಿ ಸಿಕ್ಕಿದ್ದು ಬೆಳಗಾವಿ ಮತ್ತು ಮಂಡ್ಯ ಜಿಲ್ಲೆಗಳಿಗೆ ಮಾತ್ರ. ಈ ಮಧ್ಯೆ ಇದನ್ನು ಮಂಡ್ಯ ಜಿಲ್ಲೆಯಿಂದ ಹಾಸನಕ್ಕೆ ಹೈಜಾಕ್ ಮಾಡುವುದಕ್ಕೆ ಮಾಜಿ ಪ್ರಧಾನಿ ದೇವೇಗೌಡರು ಮಸಲತ್ತು ನಡೆಸಿದ್ದರು.

ಇದರ ಸುಳಿವರಿತ ಮಂಡ್ಯ ಜಿಲ್ಲೆಯ ಜೆ.ಡಿ.ಎಸ್‌ನ ಆರು ಶಾಸಕರಲ್ಲಿ ಯಾವೊಬ್ಬರಿಗೂ ದೇವೇಗೌಡರ ಈ ಕುತಂತ್ರದ ವಿರುದ್ಧ ದನಿ ಎತ್ತುವ ಛಾತಿಯಿರಲಿಲ್ಲ; ಕಡೆಗೆ ಜೆ.ಡಿ.ಎಸ್‌ನ ಶಾಸಕರೊಬ್ಬರು ಇದನ್ನು ಅಂಬರೀಶ್ ಗಮನಕ್ಕೆ ತಂದರು. ಅಂಬರೀಶ್ ಅಕ್ಷರಶಃ ರಾತ್ರೋರಾತ್ರಿ ಆಡ್ಡಾಡಿ ಮಂಡ್ಯ ಜಿಲ್ಲೆಗೆ ಈ ಮೆಡಿಕಲ್ ಕಾಲೇಜ್ ಬರುವಂತೆ ನೋಡಿಕೊಂಡರು. ಇದಿಷ್ಟು ಮೆಡಿಕಲ್ ಕಾಲೇಜ್ ಕುರಿತಂತೆ. ಜನತಾದಳ ಮತ್ತು ಕಾಂಗ್ರೆಸ್ ನಡುವೆ ನಡೆದ ಅಸಹ್ಯ ರಾಜಕಾರಣ! ಇದೆಲ್ಲ ಮುಗಿಯುತ್ತಿದಂತೆ ಶುರುವಾದದ್ದೇ ಚಿದಾನಂದನ ತಲೆಹರಟೆ.

ಮಂಡ್ಯದಲ್ಲಿ ಮೆಡಿಕಲ್ ಕಾಲೇಜ್ ಶುರುವಾಗುತ್ತಿದ್ದಂತೆ ಅದರ ಪ್ರಿನ್ಸಿಪಾಲ್ ಅಂತಾ ಬಂದವರು ಬೆಂಗಳೂರು ಮೆಡಿಕಲ್ ಕಾಲೇಜಿನ ಡಾ|| ಚಂದ್ರಶೇಖರ್. ಇದ್ದುದರಲ್ಲಿ ಕ್ಲೀನ್ ಹ್ಯಾಂಡ್, ಯಾವೊತ್ತೂ ಇತರೆ ಅದ್ನ ಕಸುಬಿಗಳಂತೆ ಪ್ರೈವೇಟ್ ಪ್ರಾಕ್ಟಿಸ್ ಮಾಡಿದವರಲ್ಲ. ಹೆಚ್ಚು ಕಡಿಮೆ ಮಂಡ್ಯ ಮೆಡಿಕಲ್ ಕಾಲೇಜಿಗೆ ಫಿಟ್ ಪರ್ಸನ್ ಅಂತ ಜನ ಸಂತೋಷಪಡುತ್ತಿರುವಾಗಲೇ ಈ ಪ್ರಿನ್ಸಿಯ ಹಾದಿ ತಪ್ಪಿಸಿದವರೇ ಮಂಡ್ಯದ ಖತರ್‌ನಾಕ್ ವೈದ್ಯರು! ಇಲ್ಲಿನ ಬೋಧಕರ ಹುದ್ದೆಗೆ ಅರ್ಜಿ ಕರೆದಾಗ ಶಿವಮೊಗ್ಗ ಕಾಲೇಜಿಗಿಂತಾ ಹೆಚ್ಚು ಅರ್ಜಿ ಬಂದದ್ದು ಮಂಡ್ಯ ಮೆಡಿಕಲ್ ಕಾಲೇಜಿಗೆ. ಆದರೆ, ಮಂಡ್ಯದ ನಟೋರಿಯಸ್ ಡಾಕ್ಟರ್‌ಗಳಾದ ಡಾ. ಜಗದೀಶ್, ಡಾ. ನಂದೀಶ್, ಡಾ. ಬಿ.ಕೆ.ಸುರೇಶ್ ಮತ್ತು ಡಾ. ವಿದ್ಯಾಪ್ರಸಾದ್ ಅದೇನು ಮಸಲತ್ತು ಮಾಡಿದರೋ, ಅವರೆಲ್ಲ ಬೋಧಕರ ಹುದ್ದೆಗೆ ಅಪಾಯಿಂಟ್ ಆದರು. ವಾಸ್ತವವಾಗಿ ಬೋಧಕರ ಹುದ್ದೆಗೆ ಕನಿಷ್ಠ ಹತ್ತು ವರ್ಷ ಯಾವುದಾದರೂ ಕಾಲೇಜಿನಲ್ಲಿ ಪಾಠ ಹೇಳಿದ ಅರ್ಹತೆ ಇರಬೇಕು. ಹಾಗೆಯೇ ಈ ಹುದ್ದೆಗೆ ಆಯ್ಕೆ ಆಗುವವರಿಗೆ ವಯಸ್ಸಿನ ಇತಿಮಿತಿ ಇದೆ. ಆದರೆ ಇದ್ಯಾವ ಅರ್ಹತೆಯಿಲ್ಲದ ಇವರು ಸುಳ್ಳು ಅನುಭವದ ಸರ್ಟಿಫಿಕೇಟ್‌ಗಳನ್ನು ಮಡಗಿ ಬೋಧಕರ ಹುದ್ದೆಗೆ ತಗುಲಿಕೊಂಡರು. ಯಾವಾಗ ಡಾ. ಚಂದ್ರಶೇಖರ್‌ಗೆ ತಾವು ದಾರಿ ತಪ್ಪಿದ ಅರಿವಾಯಿತೋ ಅವರು ಕಾಲೇಜಿಗೆ ರಾಜೀನಾಮೆ ಬಿಸಾಕಿ ಎದ್ದು ಹೊರನಡೆದರು.

ಸಿದ್ಧರಾಮಯ್ಯನ ನೆಂಟ ಅಂದಾ

ಮಂಡ್ಯ ಮೆಡಿಕಲ್ ಕಾಲೇಜಿನಿಂದ ಡಾ. ಚಂದ್ರಶೇಖರ್ ಹೊರಹೋಗುತ್ತಿದ್ದಂತೆ ಚುನಾವಣೆಗಳು ನಡೆದು ರಾಜ್ಯದಲ್ಲಿ ಕಾಂಗ್ರೆಸ್, ಜೆ.ಡಿ.ಎಸ್‌ನ ಸಮ್ಮಿಶ್ರ ಸರ್ಕಾರ ಶುರುವಾಗಿತ್ತು. ಮೈಸೂರಿನ ಎಂ.ಎಂ.ಸಿ.ಯಲ್ಲಿದ್ದ ಚಿದಾನಂದ, ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಪಂಚೆ ಹಿಡಿದುಕೊಂಡೆ ಮಂಡ್ಯ ಮೆಡಿಕಲ್ ಕಾಲೇಜಿಗೆ ಡೈರೆಕ್ಟರ್ ಆಗಿ ವಕ್ಕರಿಸಿದ. ಅಷ್ಟಕ್ಕೂ ಮೆಡಿಕಲ್ ಕಾಲೇಜೊಂದರ ಡೈರೆಕ್ಟರ್ ಆಗುವ ಯಾವ ಕ್ವಾಲಿಫಿಕೇಶನ್ ಚಿದಾನಂದನಿಗಿರಲಿಲ್ಲ-ಸಿದ್ಧರಾಮಯ್ಯನ ಭಂಟ ಎಂಬುದೊಂದನ್ನು ಬಿಟ್ಟರೆ. ಆದ್ದರಿಂದಲೇ ಚಿದಾನಂದನನ್ನು ಮೊದಲು ಮನೆಗಟ್ಟಿ ಅಂತಾ ಸ್ವತಃ ಎಂ.ಸಿ.ಐ. ಅಧಿಕಾರಿಗಳೇ ರಿಪೋರ್ಟ್ ಕೊಟ್ಟಿದ್ದಾರೆ. ಆದರೆ ಅದರ ಬಗ್ಗೆ ಸರಕಾರ ಇಲ್ಲಿಯವರಿಗೂ ತಲೆ ಕೆಡಿಸಿಕೊಂಡಿಲ್ಲ.



ಈ ಮಧ್ಯೆ ಮಂಡ್ಯದ ಜಿಲ್ಲಾಸ್ಪತ್ರೆಯ ಜಿಲ್ಲಾ ಸರ್ಜನ್ ವಿಶ್ವನಾಥ್‌ಕುಮಾರ್ ರವರ ಎತ್ತಂಗಡಿಗೆ ಇಲ್ಲಿನ ಮೆಡಿಕಲ್ ಮಾಫಿಯಾದಂತಿರುವ ಎಂ.ಡಿ.ಸಿ. ವೈದ್ಯರ ಗುಂಪು ತೆರೆಮರೆಯಲ್ಲಿ ಪ್ರಯತ್ನಿಸಲಾರಂಭಿಸಿತು. ಆಗ ಸಚಿವ ಚೆಲುವರಾಯಸ್ವಾಮಿ ಡಾ. ರಾಮಲಿಂಗೇಗೌಡರನ್ನು ಡಿ.ಎಸ್ ಆಗಿ ನೇಮಕ ಮಾಡಿದರು. ಆದರೆ ಎಂ.ಡಿ.ಸಿ.ಗ್ಯಾಂಗ್ ಎಂದಿನಂತೆ ರಾಮಲಿಂಗೇಗೌಡರನ್ನು ತುಳಿಯಲು ಅವುಡುಗಚ್ಚಿ ನಿಂತಿತು. ಆಗ ಮಂಡ್ಯ ಮೆಡಿಕಲ್ ಕಾಲೇಜಿಗೆ ಡೈರೆಕ್ಟರ್ ಆಗಿ ವಕ್ಕರಿಸಿದ ಚಿದಾನಂದ ಮಂಡ್ಯದ ಡಾಕ್ಟರ್‌ಗಳನ್ನೇ ಎತ್ತಿಕಟ್ಟಿ ಎರಡು ಗುಂಪು ಸೃಷ್ಟಿಸಿದ. ಆಮೇಲೆ ಶುರುವಾದದ್ದೇ ಚಿದಾನಂದನ ಅಸಲಿ ವರಸೆ.

ಎರಡು ಕೋಟಿ ಎತ್ತಿದ್ದಾನೆ

ಇವತ್ತು ಮಂಡ್ಯ ಮೆಡಿಕಲ್ ಕಾಲೇಜಿನ ಬೋಧಕೇತರ ಸಿಬ್ಬಂದಿ ಆಯ್ಕೆಯಲ್ಲಿ ನಡೆದಿರುವ ವಹಿವಾಟಿನ ಟರ್ನ್ ಓವರ್ ಎರಡು ಕೋಟಿ ದಾಟುತ್ತದೆ. ಅದರಲ್ಲಿ ಏನಿಲ್ಲವೆಂದರೂ ಒಂದೂ ಕಾಲು ಕೋಟಿ ಚಿದಾನಂದನ ಕೈ ಸೇರಿದೆ. ಮಂಡ್ಯ ಮೆಡಿಕಲ್ ಕಾಲೇಜಿಗೆ ಎಂ.ಸಿ.ಐ. ತಂಡ ಪರಿಶೀಲನೆಗೆ ಅಂತಾ ಬರುತ್ತಿದ್ದಂತೆ ಮೂರೇ ದಿನದಲ್ಲಿ ಅರ್ಜಿ ಕರೆದು ನೇಮಕಾತಿ ಪಟ್ಟಿ ಘೋಷಿಸಿದ. ಪಟ್ಟಿ ನೋಡಿದರೆ ಬರಿ ಹೊರ ಜಿಲ್ಲೆಯವರೇ ತುಂಬಿಕೊಂಡಿದ್ದರು. ಜೊತೆಗೆ ಮೆರಿಟ್ ಇದ್ದವರನ್ನು ಕೈಬಿಟ್ಟು, ಜಸ್ಟ್‌ಪಾಸ್ ಆಗಿದ್ದವರನ್ನು ನೌಕರಿಗೆ ತುಂಬಲಾಗಿತ್ತು. ಇದರ ಬಗ್ಗೆ ಮಂಡ್ಯ ಶಾಸಕ ಶ್ರೀನಿವಾಸ್ ಕಿರಿಕ್ ಮಾಡುತ್ತಿದ್ದಂತೆ, "ಇಲ್ಲ, ಇದು ತಾತ್ಕಾಲಿಕ ಪಟ್ಟಿ. ಮೆಡಿಕಲ್ ಕಾಲೇಜಿಗೆ ಅನುಮತಿ ಬೇಕಾದ್ರೆ ಎಂ.ಸಿ.ಐ. ತಂಡಕ್ಕೆ ನೇಮಕಾತಿ ಪಟ್ಟಿ ತೋರಿಸಬೇಕಿತ್ತು. ಅದಕ್ಕೆ ಹೀಗೆ ಆತುರಾತುರವಾಗಿ ನೇಮಕಾತಿ ಪಟ್ಟಿ ಮಾಡಿದ್ದೀನಿ ನಿಜವಾದ ನೇಮಕಾತಿಯೇ ಶುರುವಾಗಿಲ್ಲ" ಅಂತ ಬೂಸಿ ಬಿಟ್ಟ ಚಿದಾನಂದ.

ಆನಂತರ ಈತ ಈ 'ತಾತ್ಕಾಲಿಕ' ಪಟ್ಟಿಯಲ್ಲಿದ್ದ ಅನರ್ಹರಿಗೆ ಸದ್ದಿಲ್ಲದೆ ನೇಮಕಾತಿ ಪತ್ರ ಕೊಟ್ಟ! ಅದು ಸಾಲದೆಂಬಂತೆ ಈಗ ಮತ್ತೆ ಎರಡನೇ ನೇಮಕಾತಿ ಪಟ್ಟಿ ಸಿದ್ಧಮಾಡಿ, ಒಬ್ಬೊಬ್ಬರನ್ನೇ ಆಯ್ಕೆಮಾಡಿಕೊಳ್ಳಲು ಶುರುಹಚ್ಚಿದ್ದಾನೆ. ಕಂಪ್ಯೂಟರ್ ಆಪರೇಟರ್, ಲ್ಯಾಬ್ ಟೆಕ್ನೀಶಿಯನ್‌ನಂತಹ ಆರ್ಡಿನರಿ ಜಾಬಿಗೂ ಒಂದೂವರೆ ಲಕ್ಷ ದಕ್ಷಿಣೆ ಫಿಕ್ಸ್ ಮಾಡಲಾಗಿದೆ. ಕಿದ್ವಾಯಿಯ ಫಾರ್ಮಾಸಿಸ್ಟ್ ಚಂದ್ರಶೇಖರ್, ಬಯೋ ಕೆಮಿಸ್ಟ್ರಿ ಲೆಕ್ಚರ್ ಮಹದೇವ, ಮೈಸೂರು ಮೆಡಿಕಲ್ ಕಾಲೇಜಿನ ರಿಟೈರ್ಡ್ ಸೂಪರಿಂಟೆಂಡೆಂಟ್ ಗಂಗಾಧರ್... ಈ ಮೂವರು ಬ್ರೋಕರ್‌ಗಳ ತಂಡ ಇಡೀ ಎರಡು ಕೋಟಿ ಡೀಲು ಕುದುರಿಸಿಕೊಟ್ಟಿದೆ. ಚಂದ್ರಶೇಖರನ ನಾದಿನಿಗೆ ಈಗಾಗಲೇ ಕಂಪ್ಯೂಟರ್ ಆಪರೇಟರ್ ಹುದ್ದೆ ದಯಪಾಲಿಸಲಾಗಿದೆ. ಆಯ್ಕೆಯಾಗಿರುವ ಒಂಬತ್ತು ಜನ ಅಟೆಂಡರ್‌ಗಳಲ್ಲಿ ಏಳು ಜನ ಮೈಸೂರಿನವರು. ಇವರೆಲ್ಲಾ ಚಿದಾನಂದನಿಗೆ ಕಪ್ಪ ಕೊಟ್ಟೇ ನೌಕರಿಗೆ ಸೇರಿರುವವರು.

ಇದೆಲ್ಲದರಲ್ಲಿ ಮಂಡ್ಯದ ಡಾ. ವಿ.ಎಲ್.ನಂದೀಶನ ಪಾತ್ರವೂ ಇದೆ. ಅಂಬರೀಶ್ ಅಭಿಮಾನಿಗಳ ಸಂಘದ ಹಂಡೆ ಶಿವರಾಮನ ಮೂಲಕ ಅಂಬರೀಶರಿಗೆ ಚಿದಾನಂದನನ್ನು ಪರಿಚಯಿಸಿದ್ದೇ ಡಾ. ನಂದೀಶ್. ಇದೇ ಜಿಲ್ಲಾಸ್ಪತ್ರೆಯ ಡಾಕ್ಟರ್‌ಗಳಿಗೆ ಅಮರಾವತಿಯಲ್ಲಿ ಪಾರ್ಟಿಕೊಟ್ಟ ಸಂದರ್ಭದಲ್ಲಿ "ನೀವು ಕೆಲ್ಸಮಾಡಿ, ನಾನಿದ್ದೇನೆ" ಅಂತಾ ಅಂಬಿ ಹೇಳಿದ್ದನ್ನೇ ಅಪಾರ್ಥ ಮಾಡಿಕೊಂಡ ಚಿದಾನಂದ "ಮಂಡ್ಯದವ್ರು ಏನು ಕಿತ್ಕೋತಾರೆ. ಅವನ್ಯಾವನ್ ಎಮ್ಮೆಲ್ಲೆ ನನ್ನ ಪ್ರಶ್ನೆ ಮಾಡೋಕೆ. ಬರಲಿ ಸಿದ್ದರಾಮಯ್ಯ ಅಧಿಕಾರಕ್ಕೆ, ಇವರಿಗೆಲ್ಲಾ ಸರಿಯಾಗ್ ಮಾಡಿಸ್ತೀನಿ" ಅಂತ ಹೇಳಿ ಮಂಡ್ಯ ಜಿಲ್ಲೆಯ ನಿರುದ್ಯೋಗಿಗಳ ತಲೆ ಮೇಲೆ ಚಪ್ಪಡಿ ಎಳೆಯಲು ನಿಂತ.

ಈಗಾಗಲೇ ಪ್ರಭಾವಿ ವೈದ್ಯ ಡಾ. ಸಿದ್ದೇಗೌಡನ ನಾದಿನಿ, ಅಣ್ಣನ ಮಗಳು ಹೀಗೆ ಈ ಕುಟುಂಬವೊಂದಕ್ಕೆ ನಾಲ್ಕು ನೌಕರಿಗಳನ್ನು ದಯಾಪಾಲಿಸಲಾಗಿದೆ. ಈಗಾಗಲೇ ಮಂಡ್ಯ ಮೆಡಿಕಲ್ ಕಾಲೇಜಿನ ಬೋಧಕೇತರ ಸಿಬ್ಬಂದಿ ಆಯ್ಕೆಗೆ ಏನಿಲ್ಲವೆಂದರೂ ಮೂರು ಸಾವಿರ ಅರ್ಜಿಗಳು ಬಂದಿದ್ದರೂ ಈವ್ಯಾವಕ್ಕೂ ಸ್ವೀಕೃತಿ ಪತ್ರ ಕೊಟ್ಟಿಲ್ಲ. ಅಷ್ಟಕ್ಕೂ ಈ ಅರ್ಜಿಗಳನ್ನು ರೆಕಾರ್ಡ್ ಮಾಡಿಕೊಂಡಿಲ್ಲ.

ಇದನ್ನು ಕುರಿತಂತೆ ಪ್ರಗತಿಪರ ಸಂಘಟನೆಗಳು ಗಲಾಟೆ ಮಾಡಿದ ಮೇಲೆ "ಬರೀ 529 ಅರ್ಜಿಗಳು ಬಂದಿವೆ" ಅಂತ ಹೊಸ ಪಟ್ಟಿ ತಯಾರಿಸಿದ್ದಾನೆ. ಆದರೆ ಎಂ.ಸಿ.ಐ. ತಂಡ ಬರುವ ಮುನ್ನ ಪ್ರಕಟಿಸಿದ್ದ ಆಯ್ಕೆ ಪಟ್ಟಿಯಲ್ಲಿದ್ದವರ ಹೆಸರುಗಳೇ ಈಗಿನ ಅರ್ಜಿಗಳ ಲೇಟೆಸ್ಟ್ ಪಟ್ಟಿಯಲ್ಲಿಲ್ಲ. ಅರ್ಜಿಗಳಿಗೆ ಅಕ್‌ನಾಲ್ಜ್‌ಮೆಂಟ್ ಇಲ್ಲದ್ದನ್ನೇ ಬಂಡವಾಳ ಮಾಡಿಕೊಂಡು ಎರಡು ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ರಾತ್ರೋರಾತ್ರಿ ಸುಟ್ಟುಹಾಕಿದ್ದಾರೆ.

ದುಡ್ಡು ಕೊಟ್ಟವರ ರಕ್ಷಣೆಗಾಗಿ ಮಾರ್ಕ್ಸ್, ಪರ್ಸಂಟೇಜ್‌ಗಳನ್ನೇ ತಿದ್ದಲಾಗಿದೆ. ಬ್ರೋಕರ್‌ಗಳೇ ಈ ದಂಧೆಯಲ್ಲಿ ಲಕ್ಷಗಟ್ಟಲೇ ದುಡ್ಡು ದೋಚಿದ್ದಾರೆ. ಮೈಸೂರಿನಲ್ಲಿ ದಿವಿನಾದ ಬಂಗಲೆ ಕಟ್ಟಿಸುತ್ತಿರುವ ಚಿದಾನಂದ ಎಂಥದ್ದೋ ಒಂದು ನೇಮಕಾತಿ ಪಟ್ಟಿಮಾಡಿ ತಲೆಮರೆಸಿಕೊಳ್ಳಲು ಹೊರಟಿದ್ದಾನೆ. ಈ ರಂಪಾಟವನ್ನು ನೋಡಿ ಸಂಸದ ಅಂಬರೀಶ್ ತಾವು ನೀಡಿದ್ದ 16 ಜನರ ಪಟ್ಟಿ ವಾಪಸ್ಸ್ ಪಡೆದು ಅರ್ಹರಿಗೆ ಕೆಲಸ ಕೊಡಿ ಅಂದಿದ್ದಾರೆ. ಆದರೆ ಜಿಲ್ಲೆಯ ಇತರೆ ದಳಪತಿಗಳು ಇಂತಹ ಗಂಡೆದೆ ತೋರುತ್ತಿಲ್ಲ. ಈಗಾಗಲೇ ಕಾಲೇಜಿಗೆ ಫರ್ನಿಚರ್, ಹಾಳೂಮೂಳು ಅಂತ ಸಿಕ್ಕಿದ್ದನ್ನೆಲ್ಲಾ ಖರೀದಿಸುತ್ತಾ ಬಯೋಕೆಮಿಸ್ಟ್ರಿ ಮಹದೇವ ಮತ್ತು ಚಿದಾನಂದ ಒಂದು ಸುತ್ತಿನ ಜಂಟಿ ಭೋಜನ ಮುಗಿಸಿದ್ದಾರೆ. ಈ ಎಲ್ಲಾ ಹಗರಣಗಳು ಹೊರಬರುತ್ತಿದ್ದಂತೆ ಇಲ್ಲಿನ ಕಿರಾತಕ ವೈದ್ಯರು ಮತ್ತು ಡೈರೆಕ್ಟರ್ ಚಿದಾನಂದ ಸಾಮೂಹಿಕ ರಾಜೀನಾಮೆ ನೀಡುವುದಾಗಿ ಬೆದರಿಸುತ್ತಿದ್ದಾರೆ. ಸಚಿವ ಚೆಲುವರಾಯಸ್ವಾಮಿಯ ಉಸ್ತುವಾರಿಯಲ್ಲಿ ಮಂಡ್ಯದ ಮಣ್ಣಿನ ಮಕ್ಕಳ ಗೋರಿ ಸಿದ್ಧವಾಗುವುದಂತೂ ಖಚಿತವಾಗಿದೆ.

-ವರದಿಗಾರ

ಚಿದಾನಂದನ ಜತೆಯಲ್ಲಿ ಎಂ.ಡಿ.ಸಿ.ಯೆಂಬ ಮೆಡಿಕಲ್ ಮಾಫಿಯಾ

ಇವತ್ತು ಮಂಡ್ಯ ಮೆಡಿಕಲ್ ಕಾಲೇಜಿನ ಡೈರೆಕ್ಟರಾಗಿರುವ ಚಿದಾನಂದನ ಕೌಟುಂಬಿಕ ಇತಿಹಾಸವೇ ಭ್ರಷ್ಟಾಚಾರದಿಂದ ಕೂಡಿದೆ. ಅಸಹ್ಯ. ಈತನ ಹೆಂಡತಿ ಈಗ ಸಸ್ಪೆಂಡಾಗಿರುವ ಸರ್ಕಾರಿ ನೋಟರಿ. ಫ್ರಿಡೇಟ್ ದಾಖಲೆಗಳು, ಸುಳ್ಳು ಅಫಿಡವಿಟ್‌ಗಳನ್ನು ಮಾಡಿದ್ದಕ್ಕೆ ಈಕೆ ಸಸ್ಪೆಂಡ್ ಆಗಿದ್ದಾಳೆ. ಪಾಂಡವಪುರ ಶಾಸಕ ಪುಟ್ಟರಾಜ್ ಮೂಲಕ ಅಮಾನತ್ತನ್ನು ರದ್ದು ಮಾಡಿಸಿಕೊಳ್ಳಲು ಹೆಣಗುತ್ತಿರುವ ಈಕೆಯದು ಈ ಕಥೆಯಾದರೆ ಚಿದಾನಂದನ ಮಗ ಡಾ. ರವಿ ಬೆಂಗಳೂರಿನ ರಾಜೀವ್ ಗಾಂಧಿ ಹೆ[illegible] ಯೂನಿವರ್ಸಿಟಿಯ ಅಸಿಸ್ಟೆಂಟ್ ರಿಜಿಸ್ಟ್ರಾರ್. ಈತನೂ [illegible] ಪ್ರಶ್ನೆ ಪತ್ರಿಕೆ ಹಗರಣದಲ್ಲಿ ಸಿಕ್ಕಿಬಿದ್ದಿದ್ದಾನೆ. ಸ್ವತಃ ಎಂ[illegible]ಐ. ತಂಡ ಈ ಚಿದಾನಂದನಿಗೆ ಮೆಡಿಕಲ್ ಕಾಲೇಜೊ[illegible]ರ ಡೈರೆಕ್ಟರ್ ಆಗುವ ಅರ್ಹತೆ ಯಿಲ್ಲ ಅಂತಾ ರಿಪೋರ್ಟ್ ಕೊಟ್ಟಿದೆ. ಆದಿನ್ನೂ ಚಿದಾ ನಂದನ ಅಂಡಿನ ಕೆಳಗಿದೆ.

ಇಷ್ಟೆಲ್ಲ ಗೊತ್ತಿದ್ದರೂ ಸುಮ್ಮನೆ ಕುಂತಿರುವ ಮಂಡ್ಯ ರಾಜಕಾರಣಿಗಳ ನಿರ್ಲಜ್ಜತನವನ್ನು ಜನ ಹೇಗೆ ಸಹಿಸಿಯಾರು? ಈ ಬ್ಲೇಡ್ ಚಿದಾನಂದನ ಜತೆ ಕೈ ಜೋಡಿಸಿರುವ ಡಾಕ್ಟರ್‌ಗಳು ಅಕ್ಷರಶಃ ಮಂಡ್ಯ ಮೆಡಿಕಲ್ ಮಾಫಿಯಾದ ಪ್ರತಿರೂಪದಂತಿದ್ದಾರೆ. ಇಲ್ಲಿನ ಜನರ ರಕ್ತ ಹೀರಲೆಂದೇ ಇವರೆಲ್ಲ 'ಮಂಡ್ಯ ಡಯೊಗ್ನಸ್ಟಿಕ್ ಲ್ಯಾಬ್' ಎಂಬ ಕೇಂದ್ರವನ್ನು ಕಟ್ಟಿಕೊಂಡಿದ್ದಾರೆ. ಮಂಡ್ಯದಲ್ಲಿ ಒಳ್ಳೆ ಲ್ಯಾಬಿಲ್ಲಾ ಅಂತಾ ಶುರುಮಾಡಿದ ಈ ಸಂಸ್ಥೆಯಲ್ಲಿ ಜನರ ಜೇಬಿಗೆ ನಿತ್ಯ ಮಚ್ಚು ಮಡುಗುತ್ತಾರೆ ಈ ಕಿರಾತಕ ವೈದ್ಯರು.

ಸ್ವತಃ ಸರ್ಕಾರಿ ಆಸ್ಪತ್ರೆಯ ಲ್ಯಾಬ್ ಸರಿಯಿಲ್ಲ, ಕ್ಲಿಯಾರಿಟಿಯಿಲ್ಲ, ಮಣ್ಣು ಮಸಿ ಇಲ್ಲಾ ಅಂತ್ಹೇಳಿ ರೋಗಿಗಳನ್ನು ಈ ಲ್ಯಾಬಿಗೆ ದಬ್ಬುತ್ತಾರೆ. ಅಲ್ಲಿಗೆ ಲ್ಯಾಬಿಗೆ ಹಾಕಿದ ಬಂಡವಾಳದ ಮೇಲೆ ಲಾಭ ಗ್ಯಾರಂಟಿ, ಗಿರಾಕಿ ಕಳುಹಿಸಿದ್ದಕ್ಕೆ ಸರಕಾರಿ ವೈದ್ಯರಿಗೆ ಕಮಿಷನ್. ಈಗಂತೂ ಸಿ.ಟಿ ಸ್ಕ್ಯಾನ್ ಹೆಸರಲ್ಲಿ ಹಗಲುದರೋಡೆ ನಡೆಯುತ್ತಿದೆ. ತಲೆನೋವೆಂದರೂ 1500 ರೂ. ಕೊಟ್ಟು ಸಿಟಿ ಸ್ಕ್ಯಾನ್ ಮಾಡಿಸಿ ಅಂತಾರೆ. ಮನೆ ಮುಂದೆ ಫ್ರೀ ಸರ್ವಿಸ್ ಕೊಡುವ ಹೆಸರಿನಲ್ಲಿ ಇಲ್ಲದ ಲ್ಯಾಬ್ ಟೆಸ್ಟಿಂಗ್ ಮಾಡಿಸಿ ಕನ್ಸಲ್‌ಟೆನ್ಸಿ ಫೀಗೆ ಹತ್ತು ಪಟ್ಟು ಸುಲಿಯುತ್ತಾರೆ. ಇಂತಹ ಧಂದೆಗಳಿಂದ ಮಜಬೂತಾಗಿ ಬೆಳೆದಿರುವ ಡಾಕ್ಟರ್‌ಗಳು ಸರ್ಕಾರಿ ಆಸ್ಪತ್ರೆಯಲ್ಲಿ ಡ್ಯೂಟಿ ಮಾಡುವುದಕ್ಕಿಂತ ಬಡ್ಡಿ ವ್ಯಾಪಾರ, ಚೀಟಿ ದಂಧೆಯಲ್ಲಿ ಬ್ಯುಸಿಯಾಗಿದ್ದಾರೆ. ಇಂಥಾ ಖದೀಮರು ಚಿದಾನಂದನ ಜತೆ ಸೇರಿದರೆ ಮಂಡ್ಯ ಮೆಡಿಕಲ್ ಕಾಲೇಜ್ ಇನ್ನೆಲ್ಲಿ ಉದ್ಧಾರವಾಗುತ್ತದೆ?

"ಕಳ್ಳರೆಲ್ಲ ಸತ್ಯ ಹೇಳುತ್ತಿದ್ದಾರೆ ...."

ಇದು ಈ ರಾಜ್ಯದ ಮುಖ್ಯಮಂತ್ರಿಯ ಉಡಾಫೆ ೇಳಿಕೆ. ಡಿ.ಕೆ. ಶಿವಕುಮಾರ್ ಕುಮಾರಸ್ವಾಮಿಯ ಹೋದರರ ಮೈನಿಂಗ್ ಉದ್ಯಮದ ಕುರಿತು ಸತ್ಯ ೇಳಿದ್ದನ್ನು ಅರಗಿಸಿಕೊಳ್ಳಲಾಗದ ಸಿ.ಎಂ. ಸಾಹೇಬರು ಾಯಿಗೆ ಬಂದಂತೆ ಮಾತಾಡುತ್ತಿದ್ದಾರೆ.

ಡಿ.ಕೆ.ಶಿವಕುಮಾರ್ ಕಳ್ಳ ಎನ್ನುವುದು ನಮಗೆಲ್ಲ ೊತ್ತೇ ಇದೆ. ಆದರೆ ಕಳ್ಳ ಸತ್ಯ ಹೇಳಬಾರದೆ ಕುಮಾರ ್ವಾಮಿಯವರೆ? ಅಂದಂತೆ ಅವರು 'ಸತ್ಯ' ಹೇಳುತ್ತಿದ್ದಾರೆ ಂಬುದರ ಮೂಲಕ ನೀವೇ ನಿಮ್ಮ ಸಹೋದರರ ಕ್ರಮ ದಂಧೆಯನ್ನು ಒಪ್ಪಿಕೊಂಡಂತಾಗಲಿಲ್ಲವೆ ಸಿ.ಎಂ. ಾಹೇಬರೆ?

ಕರ್ನಾಟಕ ಕಂಡ ಅತಿ ಉಡಾಫೆಯ, ಹುಂಬ, ಾಲಾಯಕ್ ಮುಖ್ಯಮಂತ್ರಿ ಎಂಬ 'ಕುಖ್ಯಾತಿ' ಯ ುಮಾರಸ್ವಾಮಿಗೆ ಪ್ರಜಾಪ್ರಭುತ್ವದಲ್ಲಿ ಆಡಳಿತ ಹೇಗೆ ಡೆಸಬೇಕೆಂಬುದೇ ಗೊತ್ತಿರುವಂತಿಲ್ಲ. ಬದಲಾಗಿ ತನ್ನ ್ಯೂಡಲ್ ಮನೋಧರ್ಮವನ್ನೇ ಪಾಲಿಸಿಕೊಂಡು ಂದಿದ್ದಾರೆ. ಆರಂಭದಲ್ಲೇ ಸಂವಿಧಾನವನ್ನೇ ಅಣಕಿಸು ಂತೆ "ಸೆಕ್ಯುಲರ್ ಎಂದರೇನು? ಆ ಪದದ ಅರ್ಥ ನಗೆ ಯಾವ ಡಿಕ್ಷನರಿಯಲ್ಲೂ ಸಿಗಲಿಲ್ಲ" ಎಂದು ಲೆಕೆಟ್ಟವರಂತೆ ಮಾತಾಡಿದಾಗಲೇ ಕುಮಾರಸ್ವಾಮಿ ುವರ ಮುಂದಿನ ಆಡಳಿತದ ದಿನಗಳು ಹೇಗಿರಲಿವೆ ಂಬುದು ಪ್ರಜ್ಞಾವಂತರಿಗೆ ಅರ್ಥವಾಗಿ ಹೋಗಿತ್ತು. ಪಾರ್ಟ್ ರಾಜಕೀಯದ ಮೂಲಕ ಕೋಮುವಾದಿಗ ೊಂದಿಗೆ ಕೈ ಜೋಡಿಸಿದ ತಂದೆ-ಮಗ ಇಬ್ಬರು ಾಜ್ಯಸಭೆ ಚುನಾವಣೆಯಲ್ಲಿ ತಾವೆಷ್ಟು ಕರ್ನಾಟಕ ್ರೀತಿಸುತ್ತೇವೆ ಎಂಬುದನ್ನು ಬಹಿರಂಗಗೊಳಿಸಿಬಿಟ್ಟರು.

ಫ್ಯೂಡಲ್ ಸಿ.ಎಂ.

ರಾಜ್ಯಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಅನಂತಮೂರ್ತಿಯವರ ಕುರಿತು ಮಾತಾಡುತ್ತಾ "ಯಾರ್ರೀ ಈ ಅನಂತಮೂರ್ತಿ" ಎಂದು ಹೇಳುವ ಮೂಲಕ ಹಣಕ್ಕಾಗಿ ಮೂರೂ ಬಿಡಬಲ್ಲ ಮುಖ್ಯಮಂತ್ರಿ ತಾನೆಂಬುದನ್ನು ಕುಮಾರಸ್ವಾಮಿ ಸಾಬೀತುಗೊಳಿಸಿದ್ದರು. ಬಿ.ಪಿ.ಎಲ್.ನ ರಾಜೀವ್ ಚಂದ್ರ ಶೇಖರ್‌ನ ಪಾದದಡಿ ಇಡೀ ಜೆಡಿಎಸ್ ಪಾರ್ಟಿಯನ್ನು ಹಾಕಿದ ಕೀರ್ತಿಯೂ ಈ ವ್ಯಾಪಾರಿ ಮನೋಭಾವದ ಸಿ.ಎಂ.ಗೇ ಸಲ್ಲಬೇಕು.

ರಾಜ್ ಶವಸಂಸ್ಕಾರದ ವೇಳೆ ಕುಮಾರಸ್ವಾಮಿಯ ಅಪ್ರಬುದ್ಧತೆ, ಹೊಣೆಗೇಡಿತನ, ಬಾಲಿಶತನಗಳಿಂದಾಗಿ ಇಡೀ ಬೆಂಗಳೂರೇ ರಣರಂಗವಾಗಿ ಪೊಲೀಸರು, ನಾಗರಿಕರು ಪರಸ್ಪರ ಬಡಿದಾಡಿ ಸಾಯುವಂತಾಗಿತ್ತು.

ಹಿಂದೆಲ್ಲಾ ಬಿ.ಡಿ.ಎ.ಯ ಅರ್ಕಾವತಿ ಯೋಜನೆಗೆ ಅಧಿಕ ಭೂಮಿ ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ಬೊಬ್ಬೆ ಹಾಕುತ್ತಲೇ ಬಂದಿದ್ದರಲ್ಲವೆ ಗೌಡರು? ಇತ್ತೀಚೆಗೆ ಅವರ ಮಗನ ನೇತೃತ್ವದಲ್ಲೇ ಮರುವಿನ್ಯಾಸಗೊಂಡ ಅರ್ಕಾವತಿ ಯೋಜನೆ ಉದ್ಘಾಟನೆಗೊಂಡಾಗ 900 ಎಕರೆ ಜಮೀನು ಸದ್ದಿಲ್ಲದೇ ಅದೃಶ್ಯವಾಗಿಬಿಟ್ಟಿತು. ಗೌಡರು ಮಾತ್ರ ಮೌನ! 20 ಸಾವಿರ ಸೈಟುಗಳಿಗೆ ಬದಲಾಗಿ ಕೇವಲ 8 ಸಾವಿರ ಸೈಟುಗಳನ್ನು ವಿತರಿಸಲಿದ್ದಾರೆ ಕುಮಾರಸ್ವಾಮಿ (ಅವರು ಅಧಿಕಾರದಲ್ಲಿ ಇರುವುದೇ ಅನುಮಾನ ಬಿಡಿ!)

ನಂತರ 'ನೈಸ್' ಕಂಪನಿಯ ಅಶೋಕ್ ಖೇಣಿ ವಿರುದ್ಧ ಕೆಂಗಣ್ಣು ಮಾಡಿಕೊಂಡಿತು ಗೌಡರ ಕುಟುಂಬ. ಇಡೀ ಯೋಜನೆಯನ್ನು ಸರಕಾರವೇ ವಹಿಸಿಕೊಳ್ಳುವ ನಿರ್ಧಾರ ಮಾಡಿ ಸುಮ್ಮನೇ ಕುಳಿತಿತು. ಯಕಶ್ಚಿತ್ ಒಬ್ಬ ಬ್ಯುಸಿನೆಸ್ ಮ್ಯಾನ್ ಖೇಣಿ ಸುಪ್ರಿಂ ಕೋರ್ಟಿಗೆ ಹೋಗಿ ಇಡೀ ಸರ್ಕಾರದ ಮಾನವನ್ನು ಹರಾಜು ಹಾಕಿಬಿಟ್ಟ. ಈ ಮೊದಲೇ 'ನೈಸ್' ಕಂಪನಿಗೆ 5 ಲಕ್ಷ ದಂಡ ತೆರಬೇಕೆಂದು ಕೋರ್ಟ್ ಹೇಳಿದ್ದನ್ನು ಉಪೇಕ್ಷಿಸಿತ್ತು ಈ ಸರ್ಕಾರ. ಸರ್ಕಾರದ 5ಲಕ್ಷ ರೂ.ಗಳ ಚೆಕ್ ಬೌನ್ಸ್ ಆದಾಗ ಮತ್ತೆ ಬೀದಿಯಲ್ಲಿ ಬೆತ್ತಲಾಗಿತ್ತು ಈ ಸರ್ಕಾರ.



'ನೈಸ್'ಕಂಪನಿಯ ವಿರುದ್ಧ ನ್ಯಾಯಾಂಗ ತನಿಖೆ ನಡೆಸುವುದಾಗಿ ಹೇಳಿದ ಸರ್ಕಾರಕ್ಕೆ ಸುಪ್ರಿಂ ಕೋರ್ಟ್ ಹೀನಾಮಾನವಾಗಿ ಉಗಿಯತೊಡಗಿತು. ತಕ್ಷಣವೇ ನ್ಯಾಯಾಂಗ ತನಿಖೆಯ ಗಿಮಿಕ್‌ನಿಂದ ಹಿಂದೆ ಸರಿಯುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಮತ್ತೊಮ್ಮೆ ನಾಚಿಕೆಗೇಡಿಯಾಗಿದ್ದು ಇದೇ ಸರ್ಕಾರವೇ.

ಕೇವಲ 5 ತಿಂಗಳಲ್ಲಿ ಕೋರ್ಟ್‌ಗಳಿಂದ ಇಷ್ಟೊಂದು ಉಗಿಸಿಕೊಂಡ ಸರ್ಕಾರವೆಂದರೆ ಈ ಕೋ-ಜಾ ಸರ್ಕಾರವೇ.

ಬಳ್ಳಾರಿಯ ಅಕ್ರಮ ಗಣಿಗಾರಿಕೆಯ ಪಾಪದ ದುಡ್ಡು ಹೊಡೆಯಲು ಚೆಪ್ಪಗಲ್ಲ ಎಂಬ ಹುಂಬ ಮುಂತ್ರಿಯನ್ನು ಛೂ ಬಿಟ್ಟ ಕುಮಾರಸ್ವಾಮಿಗೆ ಅದೇ ಈಗ ತಿರುಗುಬಾಣವಾಗಿದೆ. ಸಹೋದರರ ಬಿ.ಎಸ್.ಕೆ. ಕಂಪನಿಯ ಲೂಟಿಕೋರತನ ಈಗ ಕುಮಾರಸ್ವಾಮಿಯ ಬುಡಕ್ಕೆ ಬಂದು ನಿಂತಿದೆ.

ಹಾಗೆಯೇ 'ಪತ್ರಿಕೆ' ಈ ಸಂಚಿಕೆಯಲ್ಲಿ ಸಿಡಿಸಿರುವ ಬಾಂಬ್ ರಾಜ್ಯ ರಾಜಕೀಯದಲ್ಲಿ ಕೋಲಾಹಲ ಮೂಡಿಸಲಿದೆ. ಅಲ್ಲಿಗೆ ಬಹುಷ ಕುಮಾರಸ್ವಾಮಿಯ..... ಅಷ್ಟೇ ಏಕೆ ದೇವೇಗೌಡರ ಕುಟುಂಬದ ರಾಜಕೀಯ ವನವಾಸ ಆರಂಭವಾಗಲಿದೆ. ಕನ್ನಡದ ದಿನಪತ್ರಿಕೆಗಳು, ವಾರಪತ್ರಿಕೆಗಳು ಇಷ್ಟು ದಿನ ಕುಮಾರಣ್ಣನ ಪರ ಸಾಫ್ಟ್ ಆಗಿ ಬರೆಯುತ್ತ ಬಂದಿದ್ದವಲ್ಲವೆ? ಈಗ ದಿಢೀರ್ ಎಚ್ಚರಗೊಂಡವರಂತೆ ಒಂದಿಷ್ಟು ವಿರೋಧಿಸಿ ಬರೆಯುತ್ತಿವೆ.

ಆದರೆ ಆರಂಭದಿಂದಲೂ ಈ ಕೋ-ಜಾ ಸರ್ಕಾರದ ವಿರುದ್ಧ ದಾಳಿ ಮಾಡುತ್ತಲೇ ಬಂದ 'ಲಂಕೇಶ್' ಕಳೆದ ವಾರವಷ್ಟೇ ಬಿ.ಎಸ್.ಕೆ. ಕಂಪನಿಯ ಮರ್ಮವನ್ನು ಬಯಲಿಗೆಳೆದಿತ್ತು. ಈ ಸಂಚಿಕೆಯಲ್ಲಿ ಈ ಸರ್ಕಾರಕ್ಕೆ ಚರಮಗೀತೆ ಹಾಡುವ ವರದಿಗಳನ್ನು ಪ್ರಕಟಿಸುವ ಮೂಲಕ 'ಲಂಕೇಶ್' ವಾರಪತ್ರಿಕೆ ಕರ್ನಾಟಕದ ಖಾಯಂ ವಿರೋಧ ಪಕ್ಷ ಎಂಬುದನ್ನು ಮತ್ತೊಮ್ಮೆ ದೃಢಪಡಿಸುತ್ತಿದೆ.

-ಪಿ.ಕೆ. ಮಲ್ಲನಗೌಡರ್

ಕೋ-ಜಾ ಸರ್ಕಾರದ ಕಾವಲು ನಾಯಿ ಕೊಲ್ಲದೆ ಬೇರೆ ದಾರಿಯಿಲ್ಲ!

ತನ್ನ ಮುದ್ದು ಮರಿಗಳನ್ನು ಆಟವಾಡಲು ಬಿಟ್ಟು ರೆಗಣ್ಣಿನಿಂದ ಅವಲೋಕಿಸುತ್ತ ಮಲಗಿದ್ದ ಮುದಿ ುಲಿ ತನ್ನ ಮುದ್ದು ಮರಿಗಳಿಗೆ ಇತರ ಮೃಗಗಳಿಂದ ದರಿಕೆ ಬಂದ ಕೂಡಲೇ ಘರ್ಜಿಸುವಂತೆ ನಮ್ಮ ೇವೇಗೌಡರು ಕುಮಾರಣ್ಣನ ರಕ್ಷಣೆಗೆ ದಾವಿಸಿದ್ದಾಂತಲ್ಲಾ. ಕುಮಾರಣ್ಣನ ರಕ್ಷಣೆಗೆಂದು ಹೊರಟ ಗೌಡರು ಮಾಡು ಇಲ್ಲವೆ ಮಡಿ" ಎಂಬ ಸಂದೇಶವನ್ನು ವಾನಿಸಿದ ಕೂಡಲೇ ಗೌಡರ ಮಕ್ಕಳಲ್ಲಿ ಸ್ಫೂರ್ತಿ ುಕ್ಕಿ ಹರಿಯಿತಂತಲ್ಲಾ. ಕೂಡಲೇ ರೇವಣ್ಣ ಮೈಸೂರು ಲ್ಲೆ ಕಡೆಗೆ ಹೋಗಿ "ಇದೆಲ್ಲಾ ನಮ್ಮಪ್ಪನಿಗೆ ಸೇರಿದ್ದು. ಲ್ಲಿ ಯಾರಾದರೂ ಬಾಲ ಬಿಚ್ಚಿದರೆ ಮಡಿಯುವ ರೆಗೂ ಹೋರಾಡುತ್ತೇವೆ" ಎಂದರಂತಲ್ಲಾ. ಇದರಿಂದ ದರಿ ಹೋದ ಮಾಜಿ ಅಹಿಂದ ು "ಯಾಕೋ ಯಡವಟ್ಟಾಗಂಗೆ ್ತ ಅದೆ. ನಮ್ಮ ಸಿದ್ಧರಾಮಯ್ಯನ್ನ ುರುಬರ ಮಂದೆಯಂತಿರುವ ಪ್ಪಳದ ಕಡೆಗೆ ಎಳೆದುಕೊಂಡು ೋಗಿ ನಿಲ್ಲಿಸಿದರೆ ಹೇಗೆ" ಎಂದು ೋಚಿಸುತ್ತಿದ್ದಾರಂತಲ್ಲಾ, ೂತ್ತೇರಿ!



****

'ಮಾಡು ಇಲ್ಲವೆ ಮಡಿ' ಎಂಬ ಸಂದೇಶ ಾಟ್ಟಿರುವ ಪಿತಾಮಹರು ಇನ್ನೂ ಒಂದು ಹೆಜ್ಜೆ ುಂದೆ ಹೋಗಿ "ಬಳ್ಳಾರಿ ಗಣಿ ಕದಡಿದ ನೀರಿನಲ್ಲಿ ೀನು ಹಿಡಿಯಲು ಗಾಳ ಹಾಕಿಕೊಂಡು ಕಾಂಗ್ರೆಸ್ಸಿನವರು ಳಿತಿವೆ" ಎಂದರಂತಲ್ಲಾ. ಇದನ್ನ ಕೇಳಿಸಿಕೊಂಡ ದಕ್ಷಿಣ ್ನಡದ ರಾಣಿ ಆಧುನಿಕ ಅಬ್ಬಕ್ಕ ಮನೋರಮ ಧ್ವರಾಜ್ "ಈ ಗೌಡರಿಗೆ ಮಂಡೆ ಸಮಯಿಲ್ಲ ಾರಾಯರೆ. ಕದಡಿದ ನೀರಿನಲ್ಲಿ ಗಾಳ ಹಾಕುವುದಕ್ಕೆ ್ಟದ? ಕದಡಿದ ನೀರಿನಲ್ಲಿ ಮೀನಿಗೆ ಕಣ್ಣು ಕಾಣಿಸ್ತದ? ೋಗಲಿ ಗಾಳ ಕಾಣಿಸ್ತದ? ಕಂಡರೂ ಕೂಡ ಾರಾದರೂ ಕದಡಿದ ನೀರಿಗೆ ಗಾಳ ಹಾಕುವುದಕ್ಕೆ ದಲು ಹೊಂಡ ತೋಣಕುವುದುಂಟು. ಆಗ ಬದಿ ೀರಿನಿಂದ ಸುಸ್ವಾದ ಮೀನು ಕೈಗೆ ಸಿಗ್ತವೆ. ಅದು ೋಗಲಿ, ಈಗ ಬದಿ ನೀರಿನಲ್ಲಿ ಕಾಂಗ್ರೆಸ್ಸಿನವರು ೀನು ಹಿಡಿಯುವುದೇ ಬೇಡ, ಜನಾರ್ಧನ ರೆಡ್ಡಿಯೇ ಿಯಾದ ಮೀನು ಹಿಡಿದಿದ್ದಾರೆ. ಅದರ ಬೆಲೆ ಾರಬಿವತ್ತು ಕೋಟಿಯಾಗ್ತವುಂಟು. ನಾಗಾರ್ಜುನ ಪಹಾರದಲ್ಲಿ ಹಣ ಮಾಡಿದ ಗೌಡರ ಮನೆಗೆ ಮತ್ತೆ ಾ ಬೇಕಿರುವುದು ಹಣೆಬರ ಕೆಟ್ಟವರ ಕೆಲಸ ಾರಾಯ್ರೆ" ಎಂದರಂತಲ್ಲಾ, ಧೂತ್ತೇರಿ!!

****

ಸದರಿ ಕೋಜಾ ಸರ್ಕಾರದ ಕಾವಲು ನಾಯಿ ಸನ್ನು ಯಾವ ಸಂಭಾವನೆಯೂ ಇಲ್ಲದೆ ನಿರ್ವ ುತ್ತಿದ್ದ ವ್ಯಕ್ತಿಗೆ ಈಗ ಶಾಣ ಆಘಾತವಾಗಿ "ಸದರಿ ವಲು ನಾಯಿಯನ್ನು ಹುಚ್ಚುನಾಯಿ ಎಂದು ರ್ಮಾನಿಸಿ ಅದಕ್ಕೆ ಗುಂಡಿಟ್ಟು ಕೊಂದುಬಿಡುವ ುಟ ನಡೆದಿದೆ" ಎಂದು ಗೌಡರು ದೂರಿದ್ದಾರಂತಲ್ಲಾ, ಬಗ್ಗೆ ವಿಚಾರಿಸಿದರೆ ದಳದ ಅನಿಷ್ಟಾವಂತ ಕಾರ್ಯಕರ್ತರೆ ಹೇಳಿಕೆ ಕೊಟ್ಟು "ಹೌದು ಸಾರ್, ಕಾವಲು ನಾಯಿ ಸಾಯಿಸದೆ ಬೇರೆ ದಾರಿಯೇ ಇಲ್ಲ. ಆ ನಾಯಿ ಮಾಡಿದ ಅನಾಹುತ ಒಂದೆರಡಲ್ಲ. ತಮ್ಮ ಪಾರ್ಟಿಯವರನ್ನಲ್ಲದೆ ಎಲ್ಲಾ ಪಾರ್ಟಿಯವರನ್ನೂ ನಿರಂತರವಾಗಿ ಕಚ್ಚುವುದೇ ಅದರ ಕಾಯಕವಾಗಿದೆ. ಇದರಿಂದ ದಳದ ಘಟಾನುಘಟಿ ಲೀಡರುಗಳೆಲ್ಲಾ ರೇಬಿಸ್ ಕಾಯಿಲೆಗೆ ತುತ್ತಾಗಿ ಪಾರ್ಟಿಯನ್ನೇ ಬಿಟ್ಟು ಹೋದರು. ಮಹಿಮಾ ಮೌನಿಯಾದರು, ಸಿಂಧ್ಯಾ ಬೇರೆ ಔಷಧಿ ಹುಡುಕುವ ತಯಾರಿಯಲ್ಲಿದ್ದಾರೆ. ಕಚ್ಚಿಸಿಕೊಳ್ಳುವ ಭಯದಿಂದ ಎಂ.ಪಿ. ಪ್ರಕಾಶ್ ಆ ನಾಯಿಯ ಎಲ್ಲಾ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತಿದ್ದಾರೆ. ಸಿದ್ದು ಕಾಂಗ್ರೆ ಪಾಲಾದರು. ಈಗ ನಮಗುಳಿದಿರುವ ಮಾರ್ಗವೆಂದರೆ, ಕಡಿಸಿಕೊಂಡವರ ಜೊತೆ ಸೇರಿ ಈ ಕಾವಲುನಾಯಿಯನ್ನು ಮುಗಿಸುವುದೇ ಆಗಿದೆ" ಎಂದು ಗೋಳಾಡುತ್ತ ಹೋದರಂತಲ್ಲಾ, ಧೂತ್ತೇರಿ!!!

****

ನೋಡಿ ನೋಡುತ್ತಿದ್ದಂತೆ ಕುಮಾರಣ್ಣನ ಕಾರ್ಯಕ್ರಮ ಉಲ್ಟಾ ಆಗಿ ಹೋಗಿದೆಯಂತಲ್ಲಾ. "ಏನು ನಮ್ಮ ತಂದೆಯವರಿಗೆ ಒಂದು ಕೆಟ್ಟ ಹೆಸರನ್ನು ತಂದು ಏನು ಒಂದು ಅವರು ಒಂದು ಕೆಟ್ಟ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ನಮ್ಮ ಕುಟುಂಬಕ್ಕೆ ಮತ್ತು ನಮ್ಮ ತಂದೆಯವರಿಗೆ ಒಂದು ರೀತಿಯ ಕೆಟ್ಟ ಹೆಸರನ್ನು ತಂದು ಈ ರಾಜ್ಯದಲ್ಲಿ ಒಬ್ಬ ಮಣ್ಣಿನ ಮಗನ ಹೋರಾಟಕ್ಕೆ ಮಸಿ ಬಳಿಯಲಾಗಿತ್ತೋ, ಆ ಒಂದು ಕೆಟ್ಟ ಸಂಪ್ರದಾಯವನ್ನು ತಡೆದು, ನಮ್ಮ ತಂದೆ ಮುಖಕ್ಕೆ ಬಳಿದಿರುವ ಮಸಿಯನ್ನು ಅಳಿಸಿ, ಒಂದು ಉತ್ತಮವಾದ ಆಡಳಿತವನ್ನು ಕೊಟ್ಟು, ನಮ್ಮ ತಂದೆಯವರ ವಿಶ್ವಾಸವನ್ನು ಮತ್ತು ಆಶೀರ್ವಾದವನ್ನು ಗಳಿಸಿ ಏನು ಒಂದು ಈ ಇದನ್ನು ನಾವು ಕಾರ್ಯಕ್ರಮವಾಗಿ ರೂಪಿಸಿ" ಎಂದು ಬಹಿರಂಗ ಭಾಷಣ ಮಾಡುತ್ತಿದ್ದ ಕುಮಾರಣ್ಣ ಗೌಡರಿಗೆ ಬಂದ ಹೆಸರನ್ನು ಅಳಿಸಲು ಹೋಗಿ ತಾನೇ ಗಣಿ ದೂಳಿನಿಂದ ಅದ್ದಿ ಹೋದರಂತಲ್ಲಾ, ಇದನ್ನು ಕಂಡ ಪತ್ರಕರ್ತರು "ಇದೇನು ಸಾರ್, ಇಷ್ಟೊಂದು ಧೂಳು" ಎನ್ನಲಾಗಿ ಕುಮಾರಣ್ಣ, ಮುಖದಲ್ಲಿ ಯಾವುದೇ ಅಳುಕು ಆತಂಕವನ್ನು ತೋರದೆ "ಹೇ ಇದು ಮಸಿ ತರ ಅಲ್ಲ ಕಂಡ್ರಿ. ಕೊಡವಿದ್ರೆ ಹೊರಟೊಗತ್ತೆ" ಎಂದು ಹಲ್ಲು ಕಾಣದಂತೆ ನಕ್ಕರಂತಲ್ಲಾ, ಧೂತ್ತೇರಿ!!!

****

"ಮಂಡ್ಯದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನ ಭಲೇ ಮಜವಾಗಿತ್ತು" ಎಂಬುದು ಅಲ್ಲಿ ಕೈ ಸಡಿಲ ಬಿಟ್ಟು ಊಟ ಬಾರಿಸಿದವರ ಮೆಚ್ಚುಗೆಯ ಮಾತಾಗಿದೆಯಲ್ಲಾ. ಮುಖ್ಯವಾಗಿ ಸಮ್ಮೇಳನಾಧ್ಯಕ್ಷರಾಗಿದ್ದ ಕ್ಯಾತನಹಳ್ಳಿ ರಾಮಣ್ಣನೇ ಮೆರವಣಿಗೆಯಲ್ಲಿ ಕಾಣದಂತೆ ಸ್ಥಳೀಯ ಶಾಸಕ ಮತ್ತು ಜಿಲ್ಲಾ ಮಂತ್ರಿ ಚೆಲುವರಾಯ ಸ್ವಾಮಿ ಅಡ್ಡಗೋಡೆಯಾಗಿ ನಿಂತು ಕೈಬೀಸಿಕೊಂಡು ಬಂದರಂತಲ್ಲಾ! ಕಡೆಗೆ ಉದ್ಘಟನಾ ವೇದಿಕೆಯಲ್ಲಿ ಜನಪದ




ಸಾಹಿತಿ ರಾಮಣ್ಣನನ್ನು ಬಿಟ್ಟರೆ ಇನ್ಯಾವ ಸಾಹಿತಿಯೂ ವೇದಿಕೆಯಲ್ಲಿರದೆ ಬರೀ ಮಂಡ್ಯ ಜಿಲ್ಲೆಯ ಶಾಸಕರೇ ಆಸೀನರಾಗಿದ್ದರಂತಲ್ಲಾ, ಈ ಪೈಕಿ ಒಬ್ಬ ಶಾಸಕ "ಸಾಹಿತ್ಯ ಸಮ್ಮೇಳನದಲ್ಲಿ ನನ್ನನ್ನು ಕಡೆಗಣಿಸಿದ್ದಾರೆ" ಎಂದು ಇನ್ನೇನು ಅಳುವ ದನಿಯಲ್ಲಿ ಮಾತನಾಡುವವನಿದ್ದನಂತಲ್ಲಾ! "ಆಯ್ತು ಸ್ವಾಮಿ, ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಕೊಡುಗೆ ಏನು?" ಎಂದು ಅವನನ್ನು ಕೇಳಿದರೆ, "ಸಾಹಿತ್ಯಕ್ಕೆ ನನ್ನ ಕೊಡುಗೆ ಏನೂ ಇಲ್ಲದೆ ಇರಬಹುದು. ಆದರೆ ಕೆರೆಯಲ್ಲಿ ಗೋಡು ಗೋರುತ್ತಿದ್ದ ನಾನು ಇಷ್ಟು ಕಡಿಮೆ ಅವಧಿಯಲ್ಲಿ ಇಷ್ಟು ಶ್ರೀಮಂತನಾದುದನ್ನು ಜಿಲ್ಲೆ ಜನ ಗುರುತಿಸಬೇಕಿತ್ತು. ಆ ಜಫರುಲ್ಲಾ ಖಾನ್ ಎಂಬ ಸಾಬಿಯನ್ನು ಸನ್ಮಾನ ಮಾಡುವ ಇವರಿಗೆ ನಾನು ಕಾಣಲಿಲ್ಲವೆ? ಇವರು ಕೇಳಿದ್ದರೆ ನಾನೂ ಕಾಸು ಕೊಡುತ್ತಿದ್ದೆ, ನನ್ನನ್ನೂ ಸನ್ಮಾನ ಮಾಡಬೇಕಿತ್ತು" ಎಂದು ಅಳತೊಡಗಿದನಂತಲ್ಲಾ, ಧೂತ್ತೇರಿ!!!

****

ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನ ನೋಡಿದ ಸಾಹಿತ್ಯೋಪ ದಲಿತ ಜೀವಿಗಳು "ಇದು ಸಾಹಿತ್ಯದ ಸಭೆಯಲ್ಲ, ಖಂಡಿತ ಜೆಡಿಎಸ್ ಸಭೆ ಕಂಡ್ರಿ. ಸಾಹಿತ್ಯ ಸೃಷ್ಟಿ ಹೇಗೆ ಒಂದು ಸಮಾಜದ ಎಲ್ಲಾ ಅಂಗದ ಅಭಿವ್ಯಕ್ತಿಯೋ ಹಾಗೆ ಸಮ್ಮೇಳನವೂ ಎಲ್ಲಾ ಜನಾಂಗವೂ ಕೂಡಿ ಮಾಡುವಂತದು. ಈ ಸಾಹಿತ್ಯ ವೇದಿಕೆ ನೋಡಿದರೆ ದೇವೇಗೌಡರ ಅವಿಭಕ್ತ ಕುಟುಂಬದ ಸದಸ್ಯರನ್ನು ನೋಡಿದಂತಾಗುತ್ತದೆಯಲ್ರೀ, ಅಲ್ಪಸಂಖ್ಯಾತರು, ದಲಿತರನ್ನೆಲ್ಲಾ ದೂರವಿಟ್ಟು ಸಮ್ಮೇಳನ ಮಾಡಲು ಈ ಮೂರ್ಖರಿಗೆ ಮನಸ್ಸು ಬಂದುದು ಹೇಗೆ?" ಎಂದು ಹಲುಬುತ್ತಿದ್ದರಂತಲ್ಲಾ. ಆಗ ಅಲ್ಲೇ ಇದ್ದ ಇನ್ನೊಬ್ಬ ದಲಿತ ಕವಿ "ಅದೇ ಈ ಜಿಲ್ಲೆಯ ವಿಶೇಷ ಕಂಡ್ರಿ. ಸರ್ಕಾರವೇನಾದರೂ ಮೀಸಲಾತಿ ತರದಿದ್ದರೆ, ಜಿಲ್ಲಾ ಪಂಚಾಯ್ತಿ ತಾಲ್ಲೂಕು ಪಂಚಾಯ್ತಿ, ಮಂಡ್ಯ ಪಂಚಾಯ್ತಿಯಲ್ಲಿ ನೀವು ದುರ್ಬೀನು ಹಾಕಿ ಹುಡುಕಿದರೂ ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಇರದಂತೆ ನೋಡಿಕೊಳ್ಳುತ್ತಿದ್ದರು. ಈಗ ಈ ಸಾಹಿತ್ಯ ಸಮ್ಮೇಳನ ನೋಡಿದರೆ ಸರ್ಕಾರ ಕೂಡಲೇ ಇಲ್ಲಿಗೂ ಮೀಸಲಾತಿ ಅಳವಡಿಸಿಕೊಳ್ಳಬೇಕೆಂದು ಠರಾವು ಪಾಸು ಮಾಡುವ ಕಾಲ ಬರಬಹುದೇನೋ. ಅಲ್ಲಿಯವರೆಗೆ ನಾವು ಇಂತಹ ಸಮ್ಮೇಳನ ನಡೆಯುವಾಗ ಈ ಊರಿನಲ್ಲೇ ಇರುವುದಿಲ್ಲ" ಎಂದು ಹೆದರಿಸಿದರಂತಲ್ಲಾ, ಧೂತ್ತೇರಿ!

-ಯಾತೂ

ನಿಜವಾದ ಕನ್ನಡಿಗ ಅಂದ್ರೆ ಜಫರುಲ್ಲಾ ಖಾನ್ ಕಂಡ್ಯ



ಉಗ್ರಿ ಕಾಣಿಸಿಕೊಂಡ ಕೂಡಲೇ ಜುಮ್ಮಿ ಸಿಟ್ಟನಿಂದ.

"ಊರ್‍ನಲ್ಲಿ ಸೈಲೋ ಅಂತ ಬತ್ತೆ ಮಾಡುವಾಗ ನೀನೆಲ್ಲಿಗೋಗಿದ್ದ ಹಾಳಾಗಿ?" ಎಂದಳು.

"ಯಾರೋ ಕರದ್ರು ಅಂತ ಮುಂದೇವುಕೋಗಿದ್ದೆ ಕಣೆ."

"ಮುಂದೇವುದಲ್ಲೇನು ಕೇವಿತ್ತು? ಕರದಿದ್ರೆ ನಾನು ಬತ್ತಿರಿಲಲ್ವೆ."

"ನಿಜವಾಗ್ಲು ನಿನ್ನ ಕರಕಂಡೋಗಬೇಕಾದ ಸಭೇನೆ ಕಣೆ ಅದು. ನಾನು ಸಾಯಿತಿಗಳ ಸಭೆ ಅಂತ ಹೋಗಿದ್ದೆ. ಅಲ್ಲಿ ಅಷ್ಟಂತ ಸಾಯಿತಿವಬ್ರೂ ಇರಲಿಲ್ಲ."

"ಅಂಗರೆ ಸಾಯಿತಿಗಳ ಸಭೆ ಅನ್ನು?"

"ಊ. ಆಗೊಂದ ಸತಿ ಸಾಯಿತ್ಯ ಸಭೆ ನ್ಯಡದಿತ್ತು ನೋಡು. ಅಂತದೆ ಜಿಲ್ಲಾ ಮಟ್ಟದಲ್ಲಿ ಮಾಡಿದ್ರು. ಆದ್ರು ರಾಜ್ಯಮಟ್ಟದಲ್ಲಿ ನ್ಯಡಿತದಲ್ಲ ಅಂಗೇಯಿತ್ತು."

"ಅಂಗರೆ ಜೋರಾಗಿತ್ತು ಅನ್ನು?" ಎಂದ ಸೀರ.

"ಊ ಕಣ ಮಾವ ಜೋರಾಗಿತ್ತು. ಮ್ಯರವಣಿಗೆ ಉದ್ಘಾಟನೆಯಲ್ಲ ಒಂಥರಾ ಸಾಯಿತಿಗಳ್ಯಲ್ಲ ನಾಚಿಗ ಳಂಗಿತ್ತು."

"ಸಾಯಿತಿಗಳ್ಯಾಕೆ ನಾಚಿಗತ್ತರ್ಲ?" ಎಂದಳು ಜುಮ್ಮಿ.

"ಸಾಯಿತಿಗಳಿಗೆ ಅಲವೇನೆ ನಾಚಿಕೆ ಅನ್ನದು ಇರದು. ಅವುರು ಮ್ಯರವಣಗೆ ಒಪ್ಪದಿಲ್ಲ, ಆಡಂಬರ ಒಪ್ಪದಿಲ್ಲ, ಅವುರ ಬಗ್ಗೆ ಇಲ್ಲದ್ದನ್ಯಲ್ಲ ಹೊಗಳಿದ್ರೆ ಒಪ್ಪದಿಲ್ಲ. ಸಾಯಿತ್ಯ ಇರದೆ ಅಂಗಂತೆ. ಅದ ತಗಂಡೋಗಿ ಈ ರಾಜಕಾರಣಿಗಳು ಬೀದಿಲ್ಯಲ್ಲ ಮ್ಯರವಣಗೆ ಮಾಡಿ ತಾವು ಕೈ ಬೀಸಿ ಬಾಯಿಗೆ ಬಂದಂಗೆ ಮಾತಾಡಿದ್ರೆ ಸಾಯಿತಿಗಳು ಬ್ಯವುತೋಯ್ತರೆ."

"ಬ್ಯವುತೋಗೊ ಅಂತ ಸೂಕುಸ್ಮೆ ಜನ ರಾಜ ಕಾರಣಿಗಳ ಯಾಕ್ಲ ಕರುಸಬೇಕು?" ಎಂದ ಕಾಳಮಾವ.

"ಯಾಕ್ ಕರುಸಬೇಕು ಅಂದ್ರೆ ದುಡ್ಡು ಕೊಡೋರೆ ಅವುರು ಕಣಮಾವ."

"ದುಡ್ಡು ಕೊಡೋರು ಅಂದ್ರೆ, ಮದಿವಿಗೆ ಸಾಲ ಕೊಟ್ಟೋನ ಕೈಲೆ ತಾಲಿ ಕಟ್ಟಸಕ್ಯಾದತೆ. ಅವುನು ಬಂದು ನಾಕಕ್ಯಕಾಳ ಹಾಕಿಬುಟ್ಟು ಹೋಗಬೇಕೆ ವರತು, ಅವುನ್ನೆ ಮ್ಯರಸಿ ಬಾಸಣ ಮಾಡಿಸಿ ಅಂತ ಯಾರೇಳಿದ್ದೋರು?"

"ನಿನ್ನ ಬುದ್ಧಿ, ಸ್ವಾಭಿಮಾನ, ಸಾಯಿತ್ಯ ಸಮಾರಂಭ ಮಾಡೋರಿಗೆ ಇಲ್ಲವಲ್ಲ ಹೇಳು?"

"ಮಾಡೋರ ಮನಸೆ ಹಾಳಾದ್ರೆ ನಾವೇನು ಮಾಡನ ಹೋಗು."

"ನೀನು ಬ್ಯವುತೋಗಂಗೆ ಯಾರು ಮಾತಾಡಿದರ್ಲ?" ಎಂದಳು ಜುಮ್ಮಿ.

"ದುಬಾಯ್‌ಗೋಗಿ ಅಲ್ಲಿ ಕನ್ನಡ ಸಂಘ ಮಾಡಿರೊ ಜಫರುಲ್ಲಾ ಖಾನ್ ಕಣೆ. ಒಂಥರ ಚನ್ನಾಗೇ ಮಾತಾಡಿದ, ಆದ್ರು ಅವುರ್‍ಯಲ್ಲ ರಾಜಕಾರಣದ ಸಭೆಲಿ ಮಾತಾಡಕ್ಕೆ ಸರಿ. ಇಂತ ಸಾಯಿತ್ಯ ಸಮ್ಮೇಳನ ದಲ್ಲಿ ಮಾತಾಡುದ್ರೆ ಏನೊ ಒಂಥರ."

"ಅವುನೆ ಬಂದು ಮಾತಾಡಿದ್ನೊ, ಇವರು ಕರದಿದ್ರೊ?"

"ಅವುನೆ ಯಾಕೆ ಬಂದನೇ? ಇವುರೋಗಿ ಕರದು ಕರ್ಚಿಗೂ ಕಾಸೀಸಗಂಡಿರದ್ರಿಂದ ಬಂದವುನೆ."

"ಅಂಗನ್ನು ಮತ್ತೆ. ಚೆನ್ನಾಗಿ ಮಾತಾಡಿದ್ನೆ?"

"ಮಾತಾಡಿದ ಅಂತ ಕೇಳ್ತಿಯ? ಕ್ಯಕ್ಯಾದೋನೆ ಅವುನು."

"ಅಂತದೇನು ಮಾತಾಡಿದುನ್ಲ?"

"ನನ್ಗೆ ಜಾಸ್ತಿ ಮಾತಾಡಬೇಡಿ ಅಂತ ಹೇಳಿದಾರೆ. ಆದ್ರೆ ನಾನು ಯರಡು ಮಾತಾಡ್ತಿನಿ. ನಮ್ದು ಇಂಡಿಯಾ ವಳಗಡೆ ಮಂಡ್ಯ ಇದಿಯಲ್ಲಾ ಇದು ರಫ್ಫು (rough); ಅಂದ್ರೆ ಒರಟು. ಯಾಕೆ ಅಂದ್ರೆ ಇದು ಮಂಡ್ಯ."

"ಅಂಗಂದನೇನ್ಲ?"

"ಕೇಳೆ ಇನ್ನು ಮುಗಿದಿಲ್ಲಾ. ನಮ್ದು ಇಂಡಿಯಾದಲ್ಲಿ ಒಂದು ಕೇರಳಯಿದೆ. ಇನ್ನೊಂದು ಬಂಗಾಳ ಇದೆ. ಅಲ್ಲಿ ಎಲ್ಲಾ ಒಂದೆ. ಅಂದ್ರೆ ಹಿಂದೂಗಳು ಮುಸಲ್ಮಾನ್ರು ಕ್ರಿಶ್ಚಿಯನ್ರು ನೀವು ಯಾರ್‍ಗೆ ಗೊತ್ತಿಡಿಯಕ್ಕೆ ಆಗಲ್ಲ. ಯಾಕೆ ಹೇಳಿ?"

" !?"

"ಯಾಕೆ ಅಂದ್ರೆ ಇವತ್ತು ಕೇರಳದಲ್ಲಿ ಯಲ್ಲಾ ಮುಸ್ಲಿಂಸು ಮಲಯಾಳಿನಲ್ಲಿ ಮಾತಾಡ್ತರೆ. ಬಂಗಾಳದಲ್ಲಿ ಎಲ್ರೂ ಬಂಗಾಳದಲ್ಲಿ ಮಾತಾಡ್ತರೆ. ಆದ್ಕೆ ಅಲ್ಲಿ ಮುಸ್ಲಿಂಸು ಯಾರು ಹಿಂದೂಗಳು ಯಾರು ಗೊತ್ತಾಗಲ್ಲ. ಆದ್ರೆ ನಮ್ದು ಸ್ಟೇಟ್ ಕರ್ನಾಟಕದಲ್ಲಿ ಮುಸ್ಲಿಂಸು ಗೊತ್ತಾಗ್ತರೆ ಯಾಕೆ ಹೇಳಿ?"

" !?"

"ಇಲ್ಲಿ ಉರ್ದುನಲ್ಲಿ ಮಾತಾಡ್ತರೆ. ಇಲ್ಲಿ ಮುಸ್ಲಿಂಸು ಯಾಕೆ ಉರ್ದುನಲ್ಲಿ ಮಾತಾಡಬೇಕು? ಕನ್ನಡ ಇಲ್ವಾ? ನಮ್ದು ಭಾಸೆ ಕನ್ನಡ ಇರುವಾಗ ನೀವು ಉರ್ದುನಲ್ಲಿ ಮಾತಾಡಿದ್ರೆ ಆದ್ಕೆ ನಿಮ್ಗೆ ಮುಸ್ಲಿಂಸು ಅಂತ ಗುರುತು ಮಾಡಿಕೊಂಡಿ ಗಲಾಟೆ ಮಾಡ್ತರೆ. ಆದ್ಕೆ ಇನ್ನು ಮೇಲೆ ಕರ್ನಾಟಕದಲ್ಲಿ ಎಲ್ಲಾ ಮುಸ್ಲಿಮರು ಕನ್ನಡದಲ್ಲಿ ಮಾತಾಡಬೇಕು" ಎಂದು ಉಗ್ರಿ ಹೇಳುತ್ತಿರುವಾಗ ನಗಾಡಿದ ಜುಮ್ಮಿ,

"ನಿಜವಾಗ್ಲು ಕನ್ನಡಿಗ ಅಂದ್ರೆ ಅವುನೆ ಕಂಡ್ಯ" ಎಂದಳು.

"ಅಷ್ಟೇ ಅಲ್ಲ ಕಣೆ, ಇನ್ನೂ ಏನೇಳಿದ ಗೊತ್ತೆ? ನಮ್ದು ಮಂಡ್ಯಾದಲ್ಲಿ ಎರಡು ಬೆಳೆ ಬೆಳಿತಿವಿ. ಯಾವ್ದು ಹೇಳಿ?"

" !?"



"ಒಂದು ಬತ್ತ, ಎರಡ್ನೆದು ಕಬ್ಬು. ಬತ್ತ ಸಿಪ್ಪೆ ಸಮೇತ ಬಾಯಿಗೆ ಹಾಕಂಡ್ರೆ ನಾಲ್ಗೆ ಉರಿತದೆ. ಅದೆ ಸಿಪ್ಪೆ ಬಿಡಿಸಿ ಇಟ್ಟಗಂಡ್ರೆ ಎಷ್ಟು ಚೆಂದ, ಸ್ಮೂತಾಗಿ ಸಿಹಿ ಇದ್ದಂಗೆ ಇರತದೆ. ಅದೇ ರೀತಿ ಕಬ್ಬು ಕಬ್ಬು ನೋಡಿದ್ರೆ ದೊಣ್ಣೆ ತರ ಕಾಣ್ತದೆ. ಅಂದ್ರೆ ಲಾಟಿ ತರ ಕಾಣ್ತದೆ, ತುಂಬಾ ರಫ್ಫು. ಆದ್ರೆ ಅದನ್ನು ಸಿಗಿದಿ ಕಿತ್ತಿ ಬಾಯ್ನಲ್ಲಿ ಹಾಕಿ ನೋಡಿ ಸಿಹಿಯಾಗಿರತದೆ. ಅಂಗೆ ನಾವು ಮಂಡ್ಯ ಜನ ಒರಟಾಗಿ ರಫ್ಫಾಗಿ ಕಂಡ್ರು ಒಳಗಡೆ ಸಿಹಿಯಾಗಿರತಿವಿ, ಗೊತ್ತೂ?"

"ಅಂಗರೆ ಸಾಯಿತಿಗಳಿಗಿಂತ ಜೋರಾಗೆ ಮಾತಾಡ್ಯವುನೆ?"

"ಏ ಸಾಯಿತಿಗಳೆ ಬಾಯಿಮ್ಯಾಲೆ ಕೈ ಮಡಿಕಂಡ್ರು. ಇನ್ನು ಏನೇಳಿದ ಗೊತ್ತೆ? ಇಂಡಿಯಾದೇಸ ಒಂದು ಮನೆ ಇದ್ದಂಗೆ. ನಾವು ಒಂದು ಮನೆ ಕಟ್ಟಿದಿ[...] ಅಂಗೆ ಇಂಡಿಯಾದೇಸ ಒಂದು ಮನೆ. ಈ ಮನೆವಳ[...] ನಮ್ದು ಕರ್ನಾಟಕ ಎಲ್ಲಿ ಇದೆ ಹೇಳಿ?"

" !?"

"ಎಲ್ಲಿ ಇದೆ ಅಂದ್ರೆ, ಮನೆನಲ್ಲಿ ಯಾವುದ[...] ಜಾಗದಿಂದ ಗಂದದ ವಾಸನೆ ಬರ್ತದೆ ಅದರ[...] ಕರ್ನಾಟಕ ಇರೋದು. ಗಂದದ ವಾಸನೆ ಯಾ[...] ಮೂಲೆಯಿಂದ ಬರ್ತದೆ ಗೊತ್ತಾ? ದೇವರು ಮ[...] ಯಿಂದ ಬರ್ತದೆ. ಇಂಡಿಯಾ ಅನ್ನೋ ಮನೆವಳಗ[...] ದೇವ್ರು ಮನೆ ಯಾವುದೋ, ಅದೇ ನಮ್ದು ಕರ್ನಾಟ[...] ಗೊತ್ತಾ? ಕರ್ನಾಟಕ ದೇವುರದು ಮನೆಲಿದ್ರೆ ಅದ[...] ವಳಗಡೆ ಮಂಡ್ಯ ಎಲ್ಲಿದೆ ಗೊತ್ತಾ? ದೇವರದು ಮನೆ[...] ಮಂಗಳರಾತಿ ಮಾಡಿ ಪರಸಾದ ಕೊಡ್ತರೆ. ಆ ಪರಸಾ[...] ಸೀ ಇರತದೆ ಅಲ್ವ, ನಮ್ಮದು ಮಂಡ್ಯ ಸಕ್ಕರೆ ಲ್ಯಾಂಡ[...] ಅಂದ್ರೆ ಸಿಹಿ ಜಿಲ್ಲೆ. ಆದ್ರಿಂದ ಮಂಗಳಾರ್ತಿ ವಳಗ[...] ಮಂಡ್ಯ ಇರತದೆ. ಇಷ್ಟು ಹೇಳಿ ನನ್ದು ಮುಗುಸ್ತ[...] ನಾನು ಏನನ್ನು ಓದಿಲ್ಲ. ಓದಕ್ಕೆ ಟೈಂ ಕೂಡ ಇ[...] ಎಲ್ಲಾರ್ಗೆ ನಮಸ್ಕಾರ" ಎಂದು ಉಗ್ರಿ ಜಫರು[...] ಖಾನ್ ಶೈಲಿಯಲ್ಲಿ ಭಾಷಣ ಮುಗಿಸಿದಾಗ ನಗಾಡಿ[...] ಜುಮ್ಮಿ,

"ಲೇ ಅವುನ್ನ ನಮ್ಮೂರಿಗೊಂದು ಸತಿ ಕರುಸಬೇ[...] ಕಂಡ್ಯ" ಎಂದಳು.

ಆಗ ಕಾಳಮಾವ ಮೆಚ್ಚುಗೆ ಮುಖದಿಂದ,

"ಅಲ್ಲಾ ಕಂಡ್ಯ, ನಾವು ಸಾಬರು ಅಂತ ಹೀಯಾ[...] ಸ್ತೀವಿ. ಅವುರತ್ರುಯಿರೊ ಯಿದ್ಯೆ ನೋಡು. ಇವುನೇನ[...] ಓದಿದ್ನೆ, ಯಂತಾ ಸಾಯಿತಿ ಆಗೋನು, ಏನೇ[...] ಬರಿಯೋನು, ಇನ್ನೇನೇನು ಕತೆ ಕಟ್ಟೋನೊ."

"ಮಂಡ್ಯಾದ ಗಂಡು ಅಂದ್ರೆ ಇವುನೆ ಬುದ[...]" ಎಂದ ಸೀರ.

"ಅಂಬುರೀಸ ಬಂದಿರಲಿಲವೇನ್ಲ?" ಎಂದ[...] ಜುಮ್ಮಿ.

"ಗಲಾಟ ಆಯ್ತದೆ ಅಂತ ಬರಲಿಲ್ಲ ಕಣೆ."

"ಅದ್ಯಾಕ್ ಗಲಾಟಯಾದತೂ?"

"ಅಂಬುರೀಸ ಬಂದ ಅಂದೇಟಗೆ ಜನ ಮುತ್ತಿಗ[...] ಕೂಗ್ತವೆ, ಸೀಟವಡಿತವೆ, ಅವುನೋದೇಟಗೆ ಅ[...] ಎದ್ದು ಹೋಯ್ತವೆ. ಸಾಯಿತ್ಯದ ಸಭೇಲಿ ಅಂಗ[...] ಆಗಬಾರ್ದು ಅಂತ ತಿಳಕಂಡು ಅವುನೇ ಬರಲಿಲ[...]"

"ಅದು ವಳ್ಳೆ ಇದೆಯ ಬುಡು."

"ವಾಟಿಸ್ನೆ ಯಾಕೆ ಇನ್ನು ಬರಲಿಲ್ಲ?"

"ಆರು ಕಟ್ಟಿದ್ದನಂತೆ."


"ಅಂಗರೇನೊ ಕೇಡಗಾಲ ಬತ್ತು ಬುಡು."

" !?"

-ಬಿ. ಚಂದ್ರೇಗೌ[...]

Zero Hour ಮುನ್ನಿ

1. 'ಧರ್ಮ ಧರ್ಮಗಳ ನಡುವೆ LOC (ಲೈನ್ ಆಫ್ ಕಂಟ್ರೋಲ್) ಇರ್ಬೇಕು'–ಪೇಜಾವರ ಸ್ವಾಮಿ. ನೀವೇನಾದ್ರು ಹೇಳ್ತೀರಾ?



   a) LOCಯ ಆಚೆಈಚೆ ನಿಂತವರ ಕೈಲಿ ಗನ್ ಇರಬೇಕಾ ಕೇಳಿ ಆ ಸ್ವಾಮಿಗೆ.
   b) ಅಲ್ವಾ, ಈ ಚಡ್ಡಿ ಸ್ವಾಮಿ ಅದಾಗಲೇ ಬ್ರಾಹ್ಮಣ, ಶೂದ್ರ, ದಲಿತರ ಮಧ್ಯೆ ಗೆರೆ (LOC) ಎಳೆದು ಬಿಟ್ಟಿದ್ದಾನಲ್ಲ.
   c) LIC ಎನ್ನಲು ಹೋಗಿ LOC ಅಂದಿರಬೇಕು.
   d) ಪ್ಲೀಸ್ ಮುನ್ನಿ, ವಿಚಜಂತುಗಳ ಕುರಿತು ಈಗ ಚರ್ಚೆ ಬೇಡ.

2. ಅದ್ನಾಡಿ ಸೈಲೆಂಟ್ ಸುನೀಲನ 8 ಬಡಾಡಿ ಶಿಷ್ಯರು 4 ಲಾಂಗ್, 3 ಮಚ್ಚು, 5 ದೊಣ್ಣೆಗಳ ಸಮೇತ ನುಗ್ಗಿ ಅಡ್ಡ ಕಸುಬಿಯೊಬ್ಬನನ್ನು ಥಳಿಸಿ 79 ಸಾವಿರ ರೂಪಾಯಿ ತಂದರು. ಇದರಿಂದ ಸುನೀಲನಿಗಾದ ಲಾಭ ಎಷ್ಟು?



   a) 79 ಸಾವಿರ.
   b) ಪಂಟರುಗಳ ಖರ್ಚು ತೆಗೆದರೆ, 50 ಸಾವಿರ ಲಾಭ.
   c) ಡಾನ್ ಆಗಬೇಕೆನ್ನುವ ಸುನೀಲನ ಕನಸಿಗೆ ಒಂದು ಕೋಳಿ ಪುಚ್ಚ!
   d) 8 ಪಂಟರು, 4 ಲಾಂಗ್, 3 ಮಚ್ಚು, 5 ದೊಣ್ಣೆ.... ಫಲಿತಾಂಶ: 79 ಸಾವಿರ... ಇದೇನಾ ಬೆಂಗ್ಳೂರ್ ಅಂಡರ್‌ವರ್ಲ್ಡ್..... ಥೂತ್ತೇರಿ!

3. ಕೋ-ಜಾ ಸರ್ಕಾರ ನಾಳೆ ಏನಾಗಲಿದೆ?
   a) ಅದಿರಿನ ಗಣಿಯಲ್ಲಿ ಹೂತು ಹೋಗಲಿದೆ.
   b) ಏನೂ ಆಗಲ್ಲ; ಗಣಿಯಲ್ಲಿ 150 ಕೋಟಿ ಪ್ರಕರಣ ಮುಚ್ಚಿ ಹೋಗಿ, ಸರ್ಕಾರ ಕಂಟಿನ್ಯೂ ಆಗುತ್ತೆ.
   c) ಈ ಸರ್ಕಾರದಿಂದ 5 ಕೋಟಿ ಪ್ರಜೆಗಳಿಗೇ ಅಪಾಯ ಇರುವುದರಿಂದ, ಎಲ್ಲರೂ ಬೇಗ ಇನ್ಶೂರನ್ಸ್ ಮಾಡಿಸಿಕೊಳ್ಳಿ.
   d) ಸರ್ಕಾರದ ಶೇ. 51 ಪಾಲನ್ನು ಗಣಿ ಉದ್ಯಮಿಗಳು ಕೊಳ್ಳಲಿದ್ದಾರೆ.
   e) (c) ಮತ್ತು (d) ಎರಡೂ ಸರಿ

4. "ಋಗ್ವೇದದಲ್ಲಿ 'ಸರ್ವೇ ಜನಃ ಸುಖಿನೋ ಭವಂತು' ಎಂದು ಬರೆದಿರುವುದರಿಂದ ಸರ್ವಜನರ ಹಿತಾಸಕ್ತಿಯೇ ವೇದಗಳ ಗುರಿ ಎಂದರ್ಥ."- ರಾಮಾಜೋಯಿಸ್. ಪ್ಲೀಸ್ ಏನಾದ್ರೂ answer ಮಾಡಿ.
   a) ಮೊದ್ಲು ಈ ಜೋಯಿಸಭಟ್ಟ ಯಾರು ಹೇಳು ಮುನ್ನಿ?
   b) Mostly ಈ ಜೋಯಿಸಭಟ್ಟರು ಆ ಗೋಮೂತ್ರದ ಪ್ರಕಾಶ್ ಶಾಸ್ತ್ರಿ ಅಣ್ಣನೇ ಇರ್ಬೇಕಲ್ವಾ?
   c) ಗಿಣಿಶಾಸ್ತ್ರ ಹೇಳುವವರಿಗೂ ವೇದಶಾಸ್ತ್ರ ಗೊತ್ತಿದ್ದ ಅಂದಂಗಾಯ್ತು!
   d) (b) ಮತ್ತು (c) ಸರಿ

5. ಈ ಚಿತ್ರಕ್ಕೊಂದು ಟೈಟಲ್ ಬಿಸಾಕಿ




   a) ಜಾಗಟೆ ಹಿಡಿದವರು: ಶಂಖಾ ಹೊಡೆದವರು
   b) ಬೀದಿಗೆ ಬಿದ್ದ ಜಾಗಟೆದಾಸರು
   c) ರಾಮ ಭಜನಾ ನಾಟಕ ಮಂಡಳಿ
   d) (a) ಮತ್ತು (c) ಸರಿ

ಉತ್ತರಗಳು: 1.d 2.d 3.e 4.d 5.d

ಪ್ರೇಮ ಕಳೆದ ಎಲ್ಲ ದಿನಗಳೊಂದಿಗೆ ಒಪ್ಪಂದ ಮಾಡಿಕೊಂಡು ಕೈ ಕುಲುಕಿ ನಕ್ಕ ಹಾಗೆ

ದೇವೇಗೌಡರ ಪ್ರತ್ಯಕ್ಷ



ಜುಲೈ 23, 1994

ಒಂದು ನಾಟಕ ಬರೆಯಬೇಕೆಂದು ಮನಸ್ಸು ಮಾಡಿ ನನ್ನ ಮೆಚ್ಚಿನ ಪುಸ್ತಕಗಳನ್ನು ಓದಿ, ಎದೆ ಮೇಲೆ ಇಟ್ಟುಕೊಂಡಿದ್ದಾಗಲೇ....'ದೇವೇಗೌಡ್ರು ಬರ್ತಿದ್ದಾರೆ ಸಾರ್. ನಿಮ್ಮನ್ನು ನೋಡಲೇಬೇಕಂತೆ. ಮೊನ್ನೆ ನೀವು ಅವರಿಗೆ ಭೇಟಿ ಕೊಟ್ಟ ಮೇಲೆ ಹಿಂದಿರುಗಿ ನಿಮಗೆ ಅವರದನ್ನು ಕೊಡಲೇಬೇಕೆಂದು ಚಂಡಿಹಿಡಿದಿದ್ದರಿಂದ ಶಂಕರ್, ದತ್ತ ಪ್ರಕಾಶ್ ಅವರನ್ನು ಕರಕೊಂಡು ಬರ್ತಿದ್ದಾರೆ. ಅವರನ್ನು ಸ್ವಾಗತಿಸಲು ಸಿದ್ಧರಾಗಿ' ಅಂದು ನನ್ನ ಸಹಾಯಕ ಬಸವರಾಜು ಹೇಳಿದ. ಅವನು ಹೆದರಿಕೊಂಡಂತಿತ್ತು. ಮುಂಚೆಯೇ ನನ್ನೊಂದಿಗೆ ಏಗಿ ಬಡವಾಗಿ ಹೋಗಿರುವ ಈತ ತಮ್ಮೂರು ಕಡೆಯ ನಾಯಕ ಮತ್ತು ವಿಚಿತ್ರ ಸಂಪಾದಕ ಇಬ್ಬರನ್ನು ಒಟ್ಟಿಗೇ ನಿಭಾಯಿಸುವುದು ಹೇಗೆ ಎಂದು ದಿಕ್ಕೆಟ್ಟಂತಿದ್ದ. ಆದರೆ ನನ್ನ ದಿಗ್ಭ್ರಮೆ ಅವನಿಗೆ ಗೊತ್ತಿರಲಿಲ್ಲ. ಎಲ್ಲೋ ಓದಿಕೊಂಡು ಬರೆದುಕೊಂಡು ಹುಚ್ಚನಂತೆ ನನ್ನ ಬಗ್ಗೆ ನಾನೇ ಮೆಚ್ಚುಗೆಯಿಂದ ಮುಗುಳ್ನಕ್ಕೊಂಡು ಇರುವ ನಾನು ಇದ್ದಕ್ಕಿದ್ದಂತೆ ಒಬ್ಬ ನಾಯಕರನ್ನು ನೋಡುವುದೆಂದರೆ ಸಾಮಾನ್ಯವೆ. ಇಂಥ ತುರ್ತು, ಅನಿರೀಕ್ಷಿತ ಸಂದರ್ಭಗಳಿಗಾಗಿ ನಾನು ಈ ಗೌಡರ ಹುಡುಗ ಬಸವರಾಜನ ತಲೆತಿಂದು 'ನಾಯಕರ ಇತ್ತೀಚಿನ ರಾಜಕೀಯ, ಸಾಂಸ್ಕೃತಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕ ಚಟುವಟಿಕೆಗಳನ್ನು ಅಭ್ಯಸಿಸಿ **background material** ಸಿದ್ಧ ಮಾಡಿಡು' ಎಂದು ಕಟ್ಟಾಜ್ಞೆ ಮಾಡಿದ್ದೆ. ಆದ್ದರಿಂದ ಈಗ ಅವನಿಗೆ ನನ್ನ ಭಯ ತೋರಿಸಿಕೊಳ್ಳದೆ, "ಎಚ್.ಡಿ. ದೇವೇಗೌಡರು ಬರ್ತಾರೆ ಅಂತ ಆಯ್ತು. ಫೋನ್ ಮಾಡಿ 'ಇವತ್ತು ಬೇಡಿ' ಅನ್ನೋಹಂಗಿಲ್ಲ, ಆಗಲೇ ಹೊರಟುಬಿಟ್ಟಿದ್ದಾರೆ. ಬಂದೇ ಬರ್ತಾರೆ. ಬಸವರಾಜು,



ದೇವೇಗೌಡರ ಇತ್ತೀಚಿನ ಸಾಂಸ್ಕೃತಿಕ ಚಟುವಟಿಕೆ ಏನು?" ಅಂದೆ. ಆತ ಇನ್ನಷ್ಟು ದಿಗಿಲುಗೊಂಡು ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕಗಳೆಲ್ಲವೂ ಮಿಶ್ರಣಗೊಂಡಂತೆ ತೇಲುಗಣ್ಣು ಮೇಲುಗಣ್ಣು ಮಾಡುತ್ತಾ, 'ಆದಿಚುಂಚನಗಿರಿ ಮಠಕ್ಕೆ ಹೋಗ್ತಿದ್ದಾರಂತೆ' ಅಂದ. ನಾನು ಅದು ಧಾರ್ಮಿಕ ಚಟುವಟಿಕೆ ಎಂಬಂತೆ ಕಣ್ಣಗಲಿಸಿದ್ದರಿಂದ, 'ಹ್ಞಾ, ಇರಿ ಸಾರ್ ಹೇಳ್ತೀನಿ. ಮೊನ್ನೆ ಮಂಡ್ಯಾದಲ್ಲಿ ಗೌಡ್ರು ನೀಲೂ ಅವರನ್ನು ನೋಡಿದ್ರಂತೆ' ಎಂದೊಡನೆ ನಾನು ಹೊಟ್ಟೆಕಿಚ್ಚಿನಿಂದ ಹಲ್ಲು ಕಡಿಯುವುದನ್ನು ನೋಡಿ ಬೆವತುಹೋಗಿ, "ದೇವ್ರುದು ಅವರ 'ಮಹಾಬ್ರಾಹ್ಮಣ' ಕಾದಂಬರಿಯನ್ನು ಓದ್ತಿದ್ದಾರಂತೆ ಸಾರ್. ಒಂದ್ನಿಮಿಷ ಸೈತ ಬಿಡೋಲ್ಲವಂತೆ. ಟೈಮ್ ಸಿಕ್ಕಾಗಲೆಲ್ಲ ಓದಿ ತಲೆದೂಗ್ತಿದ್ದಾರಂತೆ. ಅದನ್ನ ಅವರಿಗೆ ಕೊಟ್ಟಿದ್ದು ಸಿದ್ರಾಮಯ್ಯ ಅಂತ ಕೆಲವರು, ಎಂ.ಪಿ.ಪ್ರಕಾಶ್ ಅಂತ ಕೆಲವರು ಹೇಳ್ತಿದ್ದಾರೆ. ಎಂ.ಪಿ.ಪ್ರಕಾಶ್ ಅವರೇ ಕೊಟ್ಟಿರಬೇಕು ಅನ್ಸುತ್ತೆ. ಅದು ಹೆಗಡೆ, ನರಸಿಂಹರಾವ್ ಇಬ್ಬರನ್ನೂ ಕುರಿತ ಮಹಾ ಕಾದಂಬರಿ ಅಂತ ಯಾರೋ ಹೇಳಿದ್ರಂತೆ. ಅದನ್ನ ಓದಿದರಾದ್ರೂ ತಮ್ಮ ದಾರಿ ಸುಗಮ ಆಗಬಹುದು ಅಂತ ತಿಳ್ಕೊಂಡು ಓದ್ತಿದಾರೆ ಪಾಪ. ಗೌಡರ ಸ್ಥಿತಿ ನೋಡಿದ್ರೆ ಕಣ್ಣೀರು ಬರುತ್ತೆ ಸಾರ್" ಎಂದು ಬಸವರಾಜು ಕಣ್ಣೀರು ಒರೆಸಿಕೊಳ್ಳ ತೊಡಗಿದ.

"ಸರಿ ಕಣಯ್ಯ, ನನಗೆ ಇದೆಲ್ಲ ಅರ್ಥವಾಗ್ತಿಲ್ಲ. ಯಾವ ದಾರಿ, ಎಲ್ಲಿಗೆ ಹೋಗಬೇಕೂಂತ ಇದ್ದಾರೆ, ಅದಕ್ಕಾಗಿ ಏನೇನು ಮಾಡ್ತಿದ್ದಾರೆ ಸರಿಯಾಗಿ ಹೇಳು. ನಾನು ಸಾಹಿತಿ ಅನ್ನೋದನ್ನ ಮರೀಬೇಡ. ನನಗೆ ಇವೆಲ್ಲ ಗೊತ್ತಾಗೊಲ್ಲ" ಅಂದೆ.

"ಯಾವ ದಾರಿ? ಎಲ್ಲಿಗೆ? ಅದೇ ಸಾರ್, ಮುಖ್ಯಮಂತ್ರಿ ಆಗೋದು. ಹೊಳೇನರಸೀಪುರ, ಗಂಡಸಿ, ಹಾಸನ, ಸಕಲೇಶಪುರದ ಕಡೆಯೆಲ್ಲ ಜನ ಈಸಲ ತೀರ್ಮಾನ ಮಾಡಿದ್ದಾರೆ. ಈ ಸಲ ನಮ್ಮ ಗೌಡರ ಗೌಡ ದೇವೇಗೌಡ್ರು ಮುಖ್ಯಮಂತ್ರಿ ಆಗಲೇಬೇಕು. ಇದು ನಮ್ಮ ಒಳ್ಳೇದಕ್ಕೆ, ಯಾಕೇಂದ್ರೆ ಆಗಲೇ ಅರವತ್ತು ತುಂಬಿರೋ ಗೌಡ್ರು ಮುಂದಿನ ಸಾಗಿ ಕಾಲದಲ್ಲಿ ಗೊಟಕ್ ಅಂದ್ರೆ ಗಾಳಿಯಾಗಿ ಬಿಟ್ಟು ನಮ್ಮ ಜಾತ್ರೆ, ಹೊಲ, ಬಯಲಾಟ, ಹಬ್ಬ-ಎಲ್ಲದರಲ್ಲಿ ನಿಂತು ಚಳ್ಳೆಹಣ್ಣು ತಿನ್ನಿಸಿಬಿಡ್ತಾರೆ. ಅದಕ್ಕಾಗಿ ಯಾದ್ರೂ ಗೌಡ್ರು ಮುಖ್ಯಮಂತ್ರಿಯಾಗಲೇಬೇಕು ಅಂತ ತೀರ್ಮಾನ ತಗೊಂಡವ್ರೆ. ಇದನ್ನು ಕೇಳಿದ ಗೌಡ್ರು ರೇಗಿಬಿಟ್ರು ಊರೂರಿಗೆ ಹೋಗಿ ಹೇಳವ್ರೆ. 'ನಾನು ದೆವ್ವ ಆಗಿ ಮುಖ್ಯಮಂತ್ರಿಯಾಗ್ತೀನಿ ಅಂತ ತಿಳ್ಕೋಬೇಡಿ ಕಣ್ರಲಾ. ಹಂಗಾದ್ರೆ ಪುಟ್ಟಸ್ವಾಮಿಗೌಡ್ರೂ ಕೂಡಲೇ ಸತ್ತು ದೆವ್ವ ಆಗಿ ಪ್ರಧಾನಿ ಆಗಬಿಡ್ತಾನೆ. ಖುರ್ಷಿದ್ ಆಲಂ ಖಾನ್ ದೆವ್ವ ಆಗೋಲ್ಲಂತೆ. ಅಂದಮೇಲೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡೋದು ಹ್ಯಂಗೆ. ನಿಮಗೆ ತಲೆ ಬ್ಯಾಡ್ವ, ಅದಕ್ಕೆ ಹೇಳ್ತಿದೀನಿ, ಕಿವಿಗೊಟ್ಟು ಕೇಳ್ರಿ, ಹಾಸನ ಜಿಲ್ಲೆಯಿಂದ ಲಕ್ಷಾಂತರ ಜನ ಕಾರ್ಯಕರ್ತರು ಹೊಂಟು ಹೆಗಡೆಯ ಸಿರಸಿ, ಸಿದ್ದಾಪುರ, ವೀರೇಂದ್ರ ಪಾಟೀಲರ ಗುಲ್ಬರ್ಗಾ, ಜತ್ತಿಯ ಬಿಜಾಪುರ ಎಲ್ಲ ಕಡೆ ಕೆಲಸ ಮಾಡಬೇಕು. ನೀವಿವತ್ತೇ ಕೆಲಸ ಮಾಡೋ ಭಾಷೆ ತಗೋಬೇಕು. ಹಂಗಾದ್ರೆ ಮಾತ್ರ ನೀವು ನನ್ನ ಜನ. ಇಲ್ಲದಿದ್ರೆ ಸಾಡೇಸಾತ್

(12 ನೇ ಪುಟಕ್ಕೆ)

ಹುಡುಗಿಯರೇಕೆ ಹೆಚ್ಚು ಐಸ್‌ಕ್ರೀಂ ಇಷ್ಟಪಡುತ್ತಾರೆ?

ಎಸ್. ಶಶಿಧರ, ಬೆಂಗಳೂರು
ಲಂಚದ ಬೆಂಕಿ ಹಚ್ಚಿರುವ ಚೆಡ್ಡಿ ಜನಾರ್ಧನ ರೆಡ್ಡಿ ಎಷ್ಟು ಸಾಚಾ?
* ಭಸ್ಮಾಸುರನಷ್ಟು.

ಕೆ.ಶ್ರೀನಿವಾಸ್, ಮಂಡ್ಯ
ಕುಮಾರಸ್ವಾಮಿ ಮತ್ತು ಯಡ್ಡಿಗೆ ಈಗ ಯಾವ ಕಾಲ?
* 'ಅನಂತ' ಕಾಟದ ಕಾಲ!

ಎ.ಕೆ.ಪಟ್ಟಾಭಿ, ಬೆಂಗಳೂರು
ಗಂಡನ ಎಲ್ಲವನ್ನೂ ಸಹಿಸಿಕೊಳ್ಳುವ ಹೆಂಡತಿ ಆತನ ಪರಸ್ತ್ರೀ ಸಂಗವನ್ನು ಮಾತ್ರ ಸಹಿಸಿಕೊಳ್ಳಲಾರಳು ಯಾಕೆ?
* ಈಕೆ ಉರಿದೆದ್ದಾಳು ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದಾಗ ಮಾತ್ರ.... ('ಅವ್ವ' ಕವನದಿಂದ)

ರವೀಂದ್ರನಾಥ ಯಡವಳ್ಳಿ, ಇಲಕಲ್ಲ
ಗಾಳಿಪಟಕ್ಕೆ ಬಾಲಂಗೋಚಿ ಇರುವಂತೆ ರಾಜಕೀಯಕ್ಕೂ ಬಾಲಂಗೋಚಿ ಇದ್ದರೆ ಹೇಗಿರುತ್ತೆ?
* BATFನಂತಿರುತ್ತದೆ.

ಹೇಮಂತ್ ಮೋರಿಗೇರಿ, ಹರಪನಹಳ್ಳಿ
ಗಣಿ ನಾಟಕದಲ್ಲಿ ಕಲಾವಿದ ಶರಣ ಎಂ.ಪಿ.ಪ್ರಕಾಶರ ಪಾತ್ರ ಯಾವುದಿರಬಹುದು?
* ಇವ ಯಾರವ, ಇವ ಯಾರವ ಎನ್ನದಿರಯ್ಯ, ಇವ ಎನ್ನ ಮಗನೆಂದೆನ್ನಿರಯ್ಯ

ಸುರೇಶ ಎಂ. ಶಿರೇಸೂರ, ಹುಬ್ಬಳ್ಳಿ
ವೆಂಕಟಾಚಲಗೆ ಹುಚ್ಚು ಹಿಡಿದರೆ ರಾಜಕೀಯಕ್ಕೆ ಸೇರುತ್ತಾರಂತೆ?
* ಅವರಿಗೆ ಆ ಹುಚ್ಚು ಹಿಡಿಸುವುದಕ್ಕೆ ಚೆಡ್ಡಿಗಳು ತಯಾರಿ ನಡೆಸುತ್ತಿದ್ದಾರೆ.

ಎಸ್. ಸುಶ್ಮಾ, ಭದ್ರಾವತಿ
ರೆಡ್ಡಿಯ ಅಂತರಂಗವನ್ನು ಬಲ್ಲವರಾರು?
* ಇದೇ ಚೆಡ್ಡಿಗಳ ಪ್ರಶ್ನೆಯೂ ಆಗಿದೆಯಲ್ಲಾ....

ಅನಾರ್ಕಲಿ ಸಲೀಂ ಚಿಣ್ಯ, ಶ್ರೀರಂಗಪಟ್ಟಣ
ಕೆಲವು ನಟಿಯರು ತೆರೆದೆದೆಯೊಂದಿಗೆ ಪುಟ್ಟ ಶಾಲಾ ಮಕ್ಕಳ ಜೊತೆ ಪೋಸು ನೀಡುತ್ತಾರಲ್ಲ?
* 'ಶಾಲೆಯತ್ತ ಸಮುದಾಯ' ಯೋಜನೆಯ ಗಿಮಿಕ್ಕು....

ಶ್ವೇತಾ, ಹರಪನಹಳ್ಳಿ
ವಿಶ್ವಸುಂದರಿ, ದೇಶದ ಸುಂದರಿ, ರಾಜ್ಯದ ಸುಂದರಿ ಎಂದೆಲ್ಲಾ ಆರಿಸುತ್ತಾರಲ್ಲಾ, ಉಳಿದ ಸ್ತ್ರೀಯರು ಸುಂದರಿಯರಲ್ಲವೇ?
* ಇಲ್ಲ, ಅವರೆಲ್ಲ ಕೇರಿ, ಗಲ್ಲಿ ಸುಂದರಿಯರು.



ಪಿ.ಸುರೇಶ್, ಅರಕೆರೆ
ಹುಡುಗಿಯರೇಕೆ ಹೆಚ್ಚು ಐಸ್‌ಕ್ರೀಂ ಇಷ್ಟಪಡುತ್ತಾರೆ?
* ತಮ್ಮ ಮುಂದೆ 'ಕರಗುವ' ವಸ್ತುಗಳನ್ನು ಕಂಡ್ರೆ ಅವರಿಗೆ ತುಂಬಾ ಲವ್.

ಡಿ.ಎಂ. ಶೇಖರ್, ದುದ್ದನಹಳ್ಳಿ
ಉದ್ಯೋಗ ಪುರುಷ ಲಕ್ಷಣ; ನಿರುದ್ಯೋಗ?
* ದೇಶದ ಲಕ್ಷಣ.

ಎಲಿಯಾಸ್ ಮೊರಾಸ್, ಮೂಡಿಗೆರೆ
ತಮ್ಮನಿಗಿಂತ ಅಕ್ಕನೇ ನಮ್ಮ ಜನರಿಗೆ ಇಷ್ಟವಾಗಲು ಕಾರಣ?
* ಯಾವ ಅಕ್ಕನ ಬಗ್ಗೆ ನೀವು ಕೇಳ್ತಾ ಇರೋದು?

ಬಿ.ಎಸ್. ಇಮ್ಮಾನುವೇಲ, ಮಸರಕಲ
ನೀರಿಗೆ ಪಾಚಿ ವೈರಿ, ಕುಲಕ್ಕೆ ಕುಲ ವೈರಿ, ರಾಜಕಾರಣಿಗೆ?
* ಗೌಡರನ್ನು ಕಂಡ ಕುಮಾರ 'ಅಪ್ಪಾ' ಅಂತಿದ್ದಾನಂತೆ.

ಕವಿತಾ ಮಧುಸೂಧನ್, ದಾವಣಗೆರೆ
ಮಣ್ಣಿನ ಮಗನಿಗೂ, ಗಣಿ ಮಗನಿಗೂ ಏನು ವ್ಯತ್ಯಾಸ?
* ಬಳ್ಳಾರಿಯ ಮಣ್ಣೇ ಗಣಿಯಾಗಿರುವಾಗ ವ್ಯತ್ಯಾಸ ಎಲ್ಲಿಂದ ಬಂತು.

ಟಿ.ಸ್ವಾಮಿ, ಅನಂತಶಯನ ಗುಡಿ
ಬಂಗಾರಪ್ಪಗೆ 'ಬಂ', ಗುಂಡೂರಾವ್‌ಗೆ 'ಗುಂ' ಕುಮಾರಸ್ವಾಮಿಗೆ?
* ಕೋ-ಜಾಗಳಿಗೆ ಬೇರೆ ಅನ್ವರ್ಥನಾಮ ಬೇಕಿಲ್ಲ.

ಎಂ.ನಿಸರ್ಗ, ದಾವಣಗೆರೆ
ಈ ಬಾರಿಯ ಸದನ ಕಲಾಪದಲ್ಲಿ ಬರಿ ಖೇಣಿ-ಗೇಣಿ-ಗಣಿ-ಧಣಿಗಳೇ ವಿಜೃಂಭಿಸಿದವಲ್ಲ?
* ಅದು ಗಣಿ ಗುಲಾಮರ ಆಲಾಪನೆ.

ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ಪೇದೆ ಚೆನ್ನಿಗಪ್ಪ ಪ್ಯಾದೆ ಚೆನ್ನಿಗಪ್ಪನಾದದ್ದೇಗೆ?
* ದ್ಯಾಟಿ ಕುಮಾರನ ಆದೇಶಗಳನ್ನು ಪಾಲಿಸಿದ್ದಕ್ಕೆ.

"ನಮ್ಮ ಪ್ರಶ್ನೆ, ನಿಮ್ಮ ಉತ್ತರ" ಕಾಲಂಗೆ ತುಂಬಾ ಜನ ಪ್ರತಿಕ್ರಿಯಿಸುತ್ತಿದ್ದಾರೆ. ಆದರೆ ನಮ್ಮ ಪತ್ರಿಕೆ ಹಲವರಿಗೆ ಮಂಗಳವಾರ/ ಬುಧವಾರ ಸಿಗುವುದರಿಂದ ಅವರು ಉತ್ತರಗಳನ್ನು ಬೇಗನೆ ಕಳುಹಿಸಲು ಸಾಧ್ಯವಾಗುತ್ತಿಲ್ಲ ಎಂದು ದೂರು ನೀಡಿದ್ದಾರೆ. ಆದ್ದರಿಂದ ಈ ವಾರದಿಂದ ಪ್ರತಿ ಪ್ರಶ್ನೆಗೆ ಎರಡು ವಾರಗಳ ಕಾಲಾವಕಾಶವನ್ನು ನೀಡುತ್ತಿದ್ದೇವೆ.

ಬಹುಮಾನಿತ ಪ್ರಶ್ನೆ

ಕಾಳೀಹುಂಡಿ ಶಿವಕುಮಾರ್, ಮೈಸೂರು
ಗಣಿ ಸಮಸ್ಯೆಗೂ, ಗಡಿ ಸಮಸ್ಯೆಗೂ ಇರುವ ವ್ಯತ್ಯಾಸ ಏನು?
* ಈಗಿನ 'ಗಣಿ' ಸಮಸ್ಯೆ ಹುಟ್ಟಿರುವುದೇ 'ಗಡಿ'ಯಾಚೆಯಿಂದ ಎಂದು ಚೆಡ್ಡಿಗಳು ಲಬೋ ಲಬೋ ಬಡಿದುಕೊಳ್ಳುತ್ತಿವೆ.

ಛೀ ತುಂಟಿ!

ಹುಡುಗ ಮತ್ತು ಹುಡುಗಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದ ಎರಡು ಕುದುರೆಗಳನ್ನು ಕಂಡರು.

"ಅವು ಏನು ಮಾಡುತ್ತಿವೆ?" ಆಕೆ ಕೇಳಿದಳು.

"ಪ್ರೀತಿಸುತ್ತಿವೆ" ಎಂದ ಹುಡುಗ.

"ಅಲ್ಲಿ ಉದ್ದಗಿದೆಯಲ್ಲ, ಅದೇನು?"

"ಅದು ಗಂಡು ಕುದುರೆಯ ಹಗ್ಗ."

"ಅದು ತುದಿಯಲ್ಲಿ ಗುಂಡಗಿದೆಯಲ್ಲ, ಅದೇನು?"

"ಅದು ಹಗ್ಗದ ಗಂಟು."

ಹುಡುಗಿಯ ಮನೆ ತಲುಪಿದಾಗ ಆಕೆ "ನೀನು ನನ್ನನ್ನು ಪ್ರೇಮಿಸುತ್ತೀಯಾ?" ಅಂತ ಕೇಳಿದಳು.

ಹುಡುಗ ಖುಷಿಯಿಂದ ಕಾರ್ಯೋನ್ಮುಖನಾದ. ಇದ್ದಕ್ಕಿದ್ದಂತೆ ಹುಡುಗಿ ಕೆಳಕ್ಕೆ ಕೈ ಚಾಚಿ ಜೋರಾಗಿ ಹಿಂಡಿದಳು.

"ಅಯ್ಯೋ, ಏನು ಮಾಡುತ್ತಿದ್ದೀಯಾ?" ಅಂತ ನೋವಿನಿಂದ ಕೇಳಿದ ಹುಡುಗ.

"ಗಂಟು ಬಿಚ್ಚಿದರೆ ಹೆಚ್ಚು ಹಗ್ಗ ಸಿಗುತ್ತಾ ಅಂತಾ ನೋಡಿದೆ" ಎಂದಳು ಹುಡುಗಿ.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ:

ದೇವೇಗೌಡರು "ಮಾಡು ಇಲ್ಲ ಮಡಿ" ಹೋರಾಟ ಪ್ರಾರಂಭಿಸಿದ್ದಾರಲ್ಲ....

ಕಳೆದ ವಾರದ ನಮ್ಮ ಪ್ರಶ್ನೆ: 'ರಾತ್ರಿ 10ರಿಂದ ಮುಂಜಾನೆ 5ರವರೆಗಿನ ಸಿನಿಮಾ' ಮಾಡುವ 'ಸ್ತ್ರೀವಸ್ತ್ರ'ನಿಗೆ ಯಾವ ಅವಾರ್ಡ್?

ನಿಮ್ಮ ಉತ್ತರ: ವಿವಸ್ತ್ರ ಕಲಾ ಸಾಮ್ರಾಟ್!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಪೂರ್ಣಿಮಾ, ಹಗರಿಬೊಮ್ಮನಹಳ್ಳಿ

ಗೋಲ್‌ಮಾಲ್ ಗೌಡ ಅಂಡ್ ಸನ್ಸ್



ದೇವೇಗೌಡರ ದೊಡ್ಡ ಮಗ ಬಾಲಕೃಷ್ಣೇಗೌಡ ಮತ್ತು ಕೊನೇ ಮಗ ಡಾ. ರಮೇಶ್ ಒಡೆತನದ ಬಿಎಸ್‌ಕೆ ಟ್ರೇಡಿಂಗ್ ಇಂಕ್ ಈತನಕ ಚೈನಾಕ್ಕೆ ರವಾನಿಸಿದ ಕಬ್ಬಿಣದ ಅದಿರಿನ ಒಟ್ಟು ಪ್ರಮಾಣವೆಷ್ಟು? ತಮ್ಮದು ಕಾನೂನುಬದ್ಧ ವ್ಯಾಪಾರ ಎಂದು ಈಗ ಬಾಯಿಬಡಿಯುತ್ತಿರುವ ಡಾ. ರಮೇಶ್ ಅದರ ವಿವರಗಳನ್ನೇಕೆ ಬಹಿರಂಗಪಡಿಸುತ್ತಿಲ್ಲ? ಅಂದಹಾಗೆ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಶ್ರೀಮತಿಯವರಾದ ಅನಿತಾ ಕುಮಾರಸ್ವಾಮಿಯವರಿಗೂ ಕುಖ್ಯಾತ ಅದಿರುಗಳ್ಳರಾದ ವಿಎಸ್‌ಎಲ್ ಕಂಪನಿಗೂ ಏನು ಸಂಬಂಧ? ದೇವೇಗೌಡರ ಕುಟುಂಬದ ಯಾರೆಲ್ಲ ಅದಿರುಗಳ್ಳತನದಲ್ಲಿ ಭಾಗಿಯಾಗಿದ್ದಾರೆ? ಅವರದೇ ಜೆಡಿ(ಎಸ್) ಪಕ್ಷದ ಸಂಡೂರು ಶಾಸಕ ಸಂತೋಷ್ ಲಾಡ್‌ನನ್ನೇ ಬದಿಗೊತ್ತಿ ಬಿಜೆಪಿಯ ಅನಿಲ್ ಲಾಡ್‌ನನ್ನು ಮುಖ್ಯಮಂತ್ರಿ ಕುಮಾರಸ್ವಾಮಿ ಅಪ್ಪಿಕೊಂಡಿದ್ದೇಕೆ? ಈ ಅನಿಲ್ ಲಾಡ್‌ನ ಬಲಗೈ ಬಂಟ ಭೂಪಾಲ್‌ಗೂ ಮುಖ್ಯಮಂತ್ರಿಯ ಪತ್ನಿ ಅನಿತಮ್ಮನವರಿಗೂ ಯಾವ ವ್ಯವಹಾರದ ನಂಟಿದೆ? ಈ ಗ್ರಾನೈಟ್ ಕುಮಾರ ಎಂಬಾತ ಯಾರು? ಮತ್ತು ಆತನಿಗೂ ಮಂತ್ರಿ ಚೆನ್ನಿಗಪ್ಪನವರಿಗೂ ಯಾವ ಥರದ ಸಂಬಂಧ?

ಇಂಥ ಅನೇಕ ಪ್ರಶ್ನೆಗಳನ್ನು ಕೆದಕುತ್ತಾ ಹೋದ 'ಲಂಕೇಶ್'ಗೆ ಸಿಕ್ಕ ವಿವರಗಳು ರಾಜ್ಯದ ಅತೀ ದೊಡ್ಡ ಭೂಸಂಪತ್ತಿನ ಲೂಟಿಯಲ್ಲಿ ಹೇಗೆ ಸರ್ಕಾರದ ಮುಖ್ಯಸ್ಥನೇ ಕೈಜೋಡಿಸಿದ್ದಾನೆಂಬುದಕ್ಕೆ ಪುರಾವೆಗಳನ್ನೊದಗಿಸುತ್ತದೆ.

ಬಿ.ಎಸ್.ಕೆ. ಟ್ರೇಡಿಂಗ್ ಕಂಪನಿಯ ಬಗ್ಗೆ ಕಾಂಗ್ರೆಸ್ ನಾಯಕ ಡಿಕೇಶಿ ಪತ್ರಿಕಾಗೋಷ್ಠಿ ಕರೆದು ಬಾಯಿಬಿಡುವುದಕ್ಕೂ ವಾರದ ಮೊದಲೇ ಬರೆದದ್ದು 'ಲಂಕೇಶ್' ವಾರಪತ್ರಿಕೆ. ಬಿ.ಎಸ್.ಕೆ. ಟ್ರೇಡಿಂಗ್ ಇಂಕ್ ಎಂಬುದು ಅದರ ಪೂರ್ತಿ ಹೆಸರು. ತಮಾಷೆಯೇನೆಂದರೆ ದಾಖಲೆಗಳಲ್ಲಿ ಅದರ ವಿಳಾಸ ನಂಬರ್ 12, ಎಂಬತ್ತು ಅಡಿ ರಸ್ತೆ, ಪದ್ಮನಾಭನಗರ ಎಂದಿದೆಯಾದರೂ, ಆ ವಿಳಾಸದ ಮೂರಂತಸ್ತಿನ ಕಟ್ಟಡದ ಮೇಲೆ ಆ ಹೆಸರಿನ ಸಣ್ಣದೊಂದು ಬೋರ್ಡ್ ಕೂಡ ಹಾಕಿಲ್ಲ, ಅದರರ್ಥ ಅದೊಂದು ನಿಗೂಢ ಕಂಪನಿ. ಆದರದು ಕದ್ದುಮುಚ್ಚಿ ವ್ಯವಹಾರ!




ಅಷ್ಟಕ್ಕೂ ನಂ. 12, 80 ಅಡಿ ರಸ್ತೆ, ಪದ್ಮನಾಭನಗರದ ಆ ಬಂಗಲೆ ಹೇಳಿಕೇಳಿ ದೇವೇಗೌಡರ ಕುಲಪುತ್ರ ಬಾಲಕೃಷ್ಣೇಗೌಡರ ಸ್ವಂತ ಮನೆ. ನಿನ್ನೆ ಮೊನ್ನೆ ತನಕ ದೇವೇಗೌಡರು ತಂಗುತ್ತಿದ್ದ ಪದ್ಮನಾಭನಗರದ ಅವರ ಮಗಳು ಶೈಲಜಾರ ಮನೆಗೆ ಎದುರಲ್ಲೇ ಇರುವ ಈ ಬಂಗಲೆಗೆ ಕೂಗಳತೆ ದೂರದಲ್ಲೇ ಡಾ. ರಮೇಶ್ ಒಡೆತನದ ಡಿ.ಜಿ. ಆಸ್ಪತ್ರೆಯಿದೆ. ಕರ್ನಾಟಕ ಬ್ಯಾಂಕ್‌ನ ಅಕೌಂಟ್ ನಂಬರ್ 4000 ಎಂಬುದು ಈ ಬಿಎಸ್‌ಕೆ ಟ್ರೇಡಿಂಗ್ ಇಂಕ್‌ನ ಅಧಿಕೃತ ಖಾತೆ. ಇದು ಇಂದು ನಿನ್ನೆ ಸ್ಥಾಪನೆಯಾದ ಕಂಪನಿಯೇನಲ್ಲ, ಅವರೇ ಕೊಟ್ಟ ದಾಖಲೆಗಳ ಪ್ರಕಾರ 2000 ಫೆಬ್ರವರಿ 24 ರಂದು ಬಿಎಸ್‌ಕೆ ಟ್ರೇಡಿಂಗ್ ಇಂಕ್ ಸ್ಥಾಪನೆಯಾಗಿದೆ. ಅದಕ್ಕೆಂದು ಕೊಟ್ಟ ಫೋನ್ ನಂಬರ್ 26693900 ಕೂಡ ಬಾಲಕೃಷ್ಣೇಗೌಡರ ಹೆಸರಲ್ಲಿ ಮಂಜೂರಾಗಿದೆ.

ಇನ್ನೂ ವಿಶೇಷವೇನೆಂದರೆ ಇದರ ಡೈರೆಕ್ಟರುಗಳ ಪೈಕಿ ಮೊದಲಿನ ಹೆಸರೇ ಎಚ್.ಡಿ. ರಮೇಶ್. ಅದೂ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಹೆಸರನ್ನೇ ಬರೆದು ಹಾಲಿ ಅವರ ನಿವಾಸವಾದ ನಂ. 297, ಐದನೇ ಕ್ರಾಸ್, ಪದ್ಮನಾಭನಗರದ ವಿಳಾಸವನ್ನೇ ಕೊಟ್ಟು ಅದನ್ನೇ ತಮ್ಮ ಕೇರಾಫ್ ಅಡ್ರೆಸ್ಸೆಂದು ಎಚ್.ಡಿ. ರಮೇಶ್ ನಮೂದಿಸುತ್ತಾರೆ. ಹಾಗೇ ಇದರ ಮತ್ತೊಬ್ಬ ಡೈರೆಕ್ಟರ್ ಎಂದು ಕವಿತಾ ಎಚ್. ಕೇರಾಫ್ ಎಚ್.ಡಿ. ದೇವೇಗೌಡ ನಂ. 281, ಎಂಬತ್ತು ಅಡಿರಸ್ತೆ, ಪದ್ಮನಾಭನಗರ ಎಂಬ ಹೆಸರಿದೆ. ಆಕೆ ಬಾಲಕೃಷ್ಣೇಗೌಡರ ಧರ್ಮಪತ್ನಿ!

ದೇವೇಗೌಡರ ಕುಟುಂಬ ಹೇಗೆ ಅದಿರುಗಳ್ಳತನಕ್ಕಿಳಿದಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ? ತಾನಾಗಲಿ ತನ್ನ ಕುಟುಂಬದ ಯಾರೇ ಆಗಲಿ ಗಣಿ ದಂಧೆಯಲ್ಲಿಲ್ಲ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ವಿಧಾನಸಭೆಯಲ್ಲಿ ಕೊಟ್ಟ ಹೇಳಿಕೆ ವಂಚನೆಯೋ ಅಥವಾ ಆತ್ಮವಂಚನೆಯೋ?

ಗೌಡರ ಫ್ಯಾಮಿಲಿ 2000 ರ ಫೆಬ್ರವರಿಯಿಂದಲೂ ಗಣಿ ದಂಧೆಯಲ್ಲಿದೆ ಎಂಬುದಕ್ಕೆ ಈ ದಾಖಲೆಯೊಂದೇ ಸಾಕು. ಹಾಗೇ ಬಾಲಕೃಷ್ಣೇಗೌಡರನ್ನು ಬಳ್ಳಾರಿ ಭೂಕೊಳ್ಳೆಗೆ

ರೆಡ್‌ಹ್ಯಾಂಡ್ ಸಿಕ್ಕಿಬಿದ್ದ ಮುಖ್ಯಮಂತ್ರಿ!



ಕರೆತಂದವನು ಹಿಂದಿದ್ದ ಗಣಿ ಇಲಾಖೆ ನಿರ್ದೇಶಕ ಬಸಪ್ಪ ರೆಡ್ಡಿ. ಜೆ.ಎಚ್. ಪಟೇಲ್ ಕಾಲದಲ್ಲಿ ಎ.ಬಿ. ಪಾಟೀಲ್ ಗಣಿಮಂತ್ರಿಯಾಗಿದ್ದಾಗಿನಿಂದ ಹಿಡಿದು ಎಸ್.ಎಂ. ಕೃಷ್ಣರ ಕಾಲದಲ್ಲಿ ಮುನಿಯಪ್ಪ ಗಣಿ ಸಚಿವರಾಗಿದ್ದಾಗಲೂ ಈತನೇ ಗಣಿ ಇಲಾಖೆಗೆ ನಿರ್ದೇಶಕನಾಗಿದ್ದ. ಇವತ್ತು ಏನೆಲ್ಲಾ ಕರ್ನಾಟಕದ ಭೂನಿಕ್ಷೇಪಗಳು ಲೂಟಿಯಾಗಿವೆಯೋ ಅದರ ಮೂಲ ಕಾರಣಕರ್ತನೇ ಈ ಬಸಪ್ಪರೆಡ್ಡಿ. ಬಳ್ಳಾರಿಯ ಇಡೀ ರಾಮನಮಲೆ ಬೆಟ್ಟ ಶ್ರೇಣಿಗೆ ಕನ್ನ ಕೊರೆದ

ಅಣ್ಣತಮ್ಮಂದಿರಷ್ಟೇ ಅಲ್ಲ, ಪತ್ನಿ ಅನಿತಕ್ಕನೂ ಶಾಮೀಲು

ಕುಖ್ಯಾತ ಬಲ್ಡೋಟಾ ಖದೀಮರನ್ನು ಕರ್ನಾಟಕಕ್ಕೆ ಕರೆತಂದಿದ್ದೇ ಈತ. ಒಬ್ಬ ಗಣಿ ಖಾತೆ ನಿರ್ದೇಶಕನಾಗಿ ನಾಡಿನ ಸಂಪತ್ತನ್ನು ರಕ್ಷಿಸಬೇಕಿದ್ದ ಈ ಬಸಪ್ಪ ರೆಡ್ಡಿ ಇವತ್ತು ರಾಜ್ಯದ ಅರವತ್ತೂರು ಮೈನಿಂಗ್ ಕಂಪನಿಗಳಿಗೆ ಪಾಲುದಾರ. ಈ ಪೈಕಿ ಬಲ್ಡೋಟಾ ಕಂಪನಿಯ ಡೈರೆಕ್ಟರುಗಳ ಪೈಕಿ ಈತನ ಪತ್ನಿಯ ಹೆಸರೂ ಇದೆ. ಹಾಗೇ ಮೋದಿ, ದೀಪಕ್‌ಸಿಂಗ್, ಆನಂದ್‌ಸಿಂಗ್, ಜೇನತ್ ಮೈನ್ಸ್, ಪಾರ್ವತಿ ಮೈನ್ಸ್, ಅಮೀರ್ ಮೈನ್ಸ್ ಇತ್ಯಾದಿ ಅದಿರುಗಳ್ಳ ಕಂಪನಿಗಳಲ್ಲೂ ಈತನ ಪತ್ನಿಯ ಪೇರಿದೆ.



ಈತ ದೇವೇಗೌಡರ ಹಿರೀಮಗ ಬಾಲಕೃಷ್ಣೇಗೌಡರಿಗೆ ಹಳೇ ಫ್ರೆಂಡು. ಈತನ ಸಲಹೆ ಮೇರೆಗೇ ಹುಟ್ಟಿಕೊಂಡಿದ್ದು ಬಿಎಸ್‌ಕೆ ಟ್ರೇಡಿಂಗ್ ಇಂಕ್. ಅದು ಕಣ್ಣುಬಿಡುವ ಹೊತ್ತಿಗೆ ಪಟೇಲ್ ಸರ್ಕಾರವೇ ಬಿದ್ದು ಹೋಗಿತ್ತು, ದಾಖಲೆಗಳಲ್ಲಷ್ಟೇ ಅಸ್ತಿತ್ವದಲ್ಲಿದ್ದ ಈ ಕಂಪನಿಗೆ ಮತ್ತೆ ಜೀವ ಬಂದಿದ್ದು ಧರ್ಮಸಿಂಗ್ ಮುಖ್ಯಮಂತ್ರಿಯಾದ ಮೇಲೆ. ಪ್ರಾರಂಭದಲ್ಲಿ ಆಂಧ್ರದಿಂದ ಅಗ್ಗದ ಅದಿರನ್ನು ಕೊಂಡು ಅದನ್ನು ಹೊಸಪೇಟೆ ಮೂಲಕ ಮಂಗಳೂರು ಬಂದರಿಗೆ ತಂದು ಎಕ್ಸ್‌ಪೋರ್ಟ್ ಮಾಡುತ್ತಿದ್ದ ಬಾಲಕೃಷ್ಣೇಗೌಡ ಸಮ್ಮಿಶ್ರ ಸರ್ಕಾರ ಬರುತ್ತಿದ್ದಂತೆ ತಮ್ಮ ಸರ್ಕಾರಿ ಕೆಲಸಕ್ಕೇ ರಾಜೀನಾಮೆ ಕೊಟ್ಟರು.

ಅದಕ್ಕಿದ್ದ ಮುಖ್ಯ ಕಾರಣವೇ ಅದಿರು ವ್ಯಾಪಾರ. ಟನ್ನಿಗೆ ಇನ್ನೂರೋ ಮುನ್ನೂರೋ ಇದ್ದದ್ದು ಏಕಾಏಕಿ ಸಾವಿರದ ಆರು ನೂರು ರೂಪಾಯಿಗೇರಿತ್ತು, ಗಣಿಗಾರಿಕೆಯ ಮೇಲಿದ್ದ ನಿರ್ಬಂಧಗಳನ್ನೆಲ್ಲ ಎಸ್.ಎಂ. ಕೃಷ್ಣರ ಕಾಲಕ್ಕೇ ಬಸಪ್ಪರೆಡ್ಡಿ ಸಡಿಲಿಸಿ 'ಫ್ರೀ ಏರಿಯಾ ಮೈನಿಂಗ್' ಎಂದು ಕಂಡಕಂಡವರಿಗೆಲ್ಲ ಹರಾಜು ಹಾಕಿದ್ದ. ಅದು 2003 ರ ಕಾಲ. ಕೃಷ್ಣರ ಅಳಿಯ ಸಿದ್ಧಾರ್ಥ, ಮಂತ್ರಿ ಅಲ್ಲಂ ವೀರಭದ್ರಪ್ಪ ಕಾಂಗ್ರೆಸ್ಸಿನ ಗವಿಯಪ್ಪ ಬಿಜೆಪಿಯ ಅನಿಲ್ ಲಾಡ್, ಆತನ ಸಹೋದರ ಜೆಡಿಎಸ್‌ನ ಸಂತೋಷ್ ಲಾಡ್, ಬಿಜೆಪಿಯ ರೆಡ್ಡಿಗಳಾದ ಜನಾರ್ಧನ ರೆಡ್ಡಿ ಕರುಣಾಕರ ರೆಡ್ಡಿ ಮುಂತಾದವರೆಲ್ಲರೂ ಅದಿರು ದಂಧೆಗೆ ಕೈಹಾಕಿದ್ದರು.

ಯಾವತ್ತು ಧರ್ಮಸಿಂಗ್ ಮುಖ್ಯಮಂತ್ರಿಯಾದರೋ ಬಾಲಕೃಷ್ಣೇಗೌಡರ ಲಕ್ಕು ಕುದುರಿತು. ಗಣಿ ಇಲಾಖೆಯ ಅಧಿಕಾರಿಗಳನ್ನು ಛೂ ಬಿಟ್ಟು ಚಿಕ್ಕನಾಯಕನಹಳ್ಳಿ ಕುಂದ್ರಿ ಮೈನ್ಸ್ ಮುಚ್ಚಿಸಿದರು. ಅದರ ಪಕ್ಕದ ಲತಾ ಮೈನ್ಸ್ ಪೋತ್ದಾರ್ ಮೈನ್ಸ್‌ಗೂ ಕಾಟ ಕೊಡಿಸಿ ಅವರು ತೆಗೆದ ಅದಿರನ್ನು ತಮ್ಮ ಬಿಎಸ್‌ಕೆ ಕಂಪನಿಗೇ ಅಗ್ಗದ ದರಕ್ಕೇ ಮಾರುವಂತೆ ಮಾಡಿಕೊಂಡರು. ಇದಾಗಿದ್ದೇ ಹೊಸದುರ್ಗ-ಹುಳಿಯಾರ್ ಸೆಕ್ಟರಿನ ತ್ರಿವಿಕ್ರಮ್ ಮೈನ್ಸ್ ಮತ್ತು ಚಲುವರಾಜ್ ಮೈನ್ಸ್‌ನವರೂ ಡಾ. ರಮೇಶ್‌ಗೆ ಶರಣಾಗಿ ತಮ್ಮ ಡಂಪಿಂಗ್ ಯಾರ್ಡ್‌ನಲ್ಲಿದ್ದ ತಲಾ ಒಂದು ಲಕ್ಷ ಟನ್ ಅದಿರನ್ನು ತಲಾ ಟನ್ನಿಗೆ ಐನೂರು ರೂಪಾಯಿಯಂತೆ ಕೊಟ್ಟು ಕೈಮುಗಿದರು. ಅದನ್ನು ಮಂಗಳೂರು ಬಂದರಿಗೆ ಸಾಗಿಸಿದ ಬಿಎಸ್‌ಕೆ ಕಂಪನಿ ತಲಾ ಟನ್ನಿಗೆ ಸಾವಿರದೊಂಭೈನೂರು ರೂಪಾಯಿಗಳಂತೆ ಚೈನಾಕ್ಕೆ ಸಾಗಿಸಿತು.

ಸಮ್ಮಿಶ್ರ ಸರ್ಕಾರ ಬಿದ್ದು ಕೋ-ಜಾ ಸರ್ಕಾರ ಬರುತ್ತಿದ್ದಂತೆ ಗಣಿ ಖಾತೆಯನ್ನು ಮುಖ್ಯಮಂತ್ರಿ ಕುಮಾರಸ್ವಾಮಿಯೇ ಇಟ್ಟುಕೊಂಡು ಅದಕ್ಕೆ ಪೂರಕವಾಗುವಂತೆ ಅರಣ್ಯ ಖಾತೆಯನ್ನು ತಮ್ಮ ಮನೆ ಕೆಲಸದಾಳು ಚೆನ್ನಿಗಪ್ಪನಿಗೆ ವಹಿಸಿಕೊಟ್ಟರು. ಅದಕ್ಕೆ ತಕ್ಕಂತೆ ಬಿಎಸ್‌ಕೆ ಟ್ರೇಡಿಂಗ್‌ನ

Importer Exporter Code

IEC #	: 0704011794
IEC Allotment Date	: 20.09.2004
File Number	: 07/04/130/01197/AM05/
File Date	: 16.09.2004
IEC	: 0704011794
Party Name and Address	: BSK TRADING INC NO. 12, 80 FEET ROAD PADMANABHANAGAR BANGALORE PIN-560070
Phone No	: 26693900
e_mail	:
Exporter Type	: 2 Manufacturer Exporter
Date of Establishment	: 24.02.2000
BIN (PAN+Extension)	: AAKPB1757D F1001
PAN ISSUE DATE	:
PAN ISSUED BY	: CCIT KAR/GOA
Nature Of Concern	: 5 Partnership
Banker Detail	: THE KARNATAKA BANK LTD BANGALORE A/C Type: 1 CA A/C No: 4000

Directors:


1.	H.D.RAMESH H.D.DEVAGOWDA NO.297,5TH CROSS PADMANABHANAGAR BANGALORE PIN-560070 Phone/Email:26792314	2.	KAVITHA H H.D.DEVE GOWDA NO.281 80FT ROAD PADMANABHANAGAR BANGALORE PIN-560070 Phone/Email:

http://dgft.delhi.nic.in:8100/dgft/IecPrint 7/17/2006

ಬಿಎಸ್‌ಕೆ ಕಂಪನಿಯ ಅಸ್ತಿತ್ವಕ್ಕೆ ಇದೇ ಸಾಕ್ಷಿ

ಇಡೀ ವ್ಯವಹಾರವೆಲ್ಲ ಡಾ. ರಮೇಶ್ ವಹಿಸಿ ಕೊಂಡರು. ಎಲ್ಲೆಲ್ಲಿ ಚೆನ್ನಿಗಪ್ಪ ಗಣಿ ನಿರ್ಬಂಧಿಸಿ ಟ್ರೈಟ್ ಮಾಡತೊಡಗಿದರೋ ಅಲ್ಲಿಗೆಲ್ಲ ರಮೇಶನ ಎಂಟ್ರಿಯಾಗುತ್ತಿತ್ತು. ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಲಕ್ಷಗಟ್ಟಲೆ ಟನ್ ಅದಿರು ದೋಚಿದ್ದ ಆನಂದ್ ಸಿಂಗ್‌ನ ಲಕ್ಷಾಂತರ ಟನ್ ಅದಿರನ್ನು ಅಧಿಕಾರಿಗಳು ಜಪ್ತಿ ಮಾಡಿದ್ದರೆ ಅದಕ್ಕೆ ಸ್ವತಃ ರಮೇಶೇ ಕೈ ಹಾಕಿದ್ದು ಚೆನ್ನಿಗಪ್ಪನಿಗೆ ಬಾಯಿಗೆ ಬಂದಂತೆ ಬಯ್ದು ಅದನ್ನು ತಾನು ತಲಾ ಟನ್ನಿಗೆ ಐನೂರು ರೂಪಾಯಿಯಂತೆ ಖರೀದಿಸಿಬಿಟ್ಟ. ಹೇಗೂ ಸರ್ಕಾರಕ್ಕೆ ಸೇರಬೇಕಾಗಿದ್ದ ಅದಿರಿಗೆ ಬಂದಷ್ಟು ಬರಲಿ ಎಂದು ಆನಂದ್‌ಸಿಂಗ್ ಕೈಮುಗಿದುಬಿಟ್ಟ!

ಎಲ್ಲೆಲ್ಲಿ ತಾನು ಟ್ರೈಟ್ ಮಾಡಿ ಬಂದಷ್ಟು ಗುಂಜಿಕೊಳ್ಳಲು ಯತ್ನಿಸಿದರೆ ಅಲ್ಲಿಗೆಲ್ಲ ಡಾ. ರಮೇಶ್ ಎಂಟ್ರಿಯಾಗುತ್ತಿದ್ದದ್ದನ್ನು ಕಂಡು ಸ್ವತಃ ಅರಣ್ಯ ಮಂತ್ರಿ ಚೆನ್ನಿಗಪ್ಪನೇ ಗೌಡರ ಮಕ್ಕಳ ವಿರುದ್ಧ ಶಾಪ ಹಾಕುತ್ತಿದ್ದ. ಯಾರೆಲ್ಲ ಅಕ್ರಮ ಮೈನಿಂಗ್‌ನಲ್ಲಿ ತೊಡಗಿದ್ದಾರೋ ಅವರೆಲ್ಲ ಬಿಎಸ್‌ಕೆ ಕಂಪನಿಗೆ ಕೇಳಿದ ರೇಟಿಗೆ ಮಾರಿದರಷ್ಟೇ ಉಳಿಗಾಲ ಎಂಬಂಥ ಪರಿಸ್ಥಿತಿ ನಿರ್ಮಾಣವಾಯಿತು. ಹಾಗೆ ದಕ್ಕಿದ ಅಗ್ಗದ ಅದಿರನ್ನು ಸಂಗ್ರಹಿಸುವುದಕ್ಕೆಂದೇ ಮಂಗಳೂರು ಬಂದರಿನಲ್ಲಿ ವಿಶಾಲ ಯಾರ್ಡ್ ಒಂದನ್ನು ಡಾ. ರಮೇಶ್ ಖರೀದಿಸಿದರು. ತಮ್ಮ ಇಡೀ ಗಣಿ ವ್ಯವಹಾರವನ್ನು ನಿಭಾಯಿಸುವುದಕ್ಕೆಂದು ಅಶ್ವತ್ಥ ಎಂಬಾತನನ್ನೇ ರೈಸಿಂಗ್ ಕಂಟ್ರಾಕ್ಟರ್ ಆಗಿ ನೇಮಿಸಿಕೊಂಡರು.



ಹೀಗೆ ಅವರಿವರಿಂದ ಕೊಳ್ಳೆ ಹೊಡೆದ 46046 ಮೆಟ್ರಿಕ್ ಟನ್‌ಗಳಷ್ಟು ಅದಿರು ಸದ್ಯ ಮಂಗಳೂರು ಬಂದರಿನಲ್ಲಿ ರಾಶಿ ಬಿದ್ದಿದೆ. ಅದನ್ನು ಚೀನಾದ ಹಾಂಗ್‌ಕಾಂಗ್‌ನ ಕಾಂಟಿನೆಂಟಲ್ ಮಿನರಲ್ಸ್ ಕಂಪನಿಗೆ `MV ಫ್ಯಾಂಟಸಿ 2' ಎಂಬ ದೈತ್ಯ ಹಡಗಿನಲ್ಲಿ ಸಾಗಿಸಲು ಎಲ್ಲಾ ಸಿದ್ಧತೆ ನಡೆದಿದೆ. ಇದರ ಮಾರುಕಟ್ಟೆ ಬೆಲೆಯೇ ನೂರಿಪ್ಪತ್ತು ಕೋಟಿ. ಮುಖ್ಯಮಂತ್ರಿ ಕುಮಾರಸ್ವಾಮಿ ಗಣಿಗಾರಿಕೆಯನ್ನು ನಿಷೇಧಿಸುವುದಿರಲಿ, ಸದ್ಯ ಮಂಗಳೂರು ಬಂದರಿನಲ್ಲಿ ಬೆಟ್ಟದಂತೆ ರಾಶಿ ಬಿದ್ದ ತನ್ನ ತಮ್ಮನ ಅದಿರನ್ನು ಜಪ್ತಿ ಮಾಡಿ ಅದರ ಮೂಲ ಕೆದಕಲಿ. ಅದು ಸಂಡೂರು ತಾಲ್ಲೂಕು ಉಬ್ಬಲಗುಂಡಿ ಮತ್ತು ಬಂಡ್ರಿ ಗ್ರಾಮಗಳ ಅರಣ್ಯದಿಂದ ಕೊಳ್ಳೆ ಹೊಡೆದ ಮಾಲು. ಕದ್ದ ಆನಂದ್‌ಸಿಂಗ್ ಮತ್ತು ಕೈಜೋಡಿಸಿದ ಡಾ. ರಮೇಶ್ ಇಬ್ಬರೂ ಜೈಲು ಸೇರಬೇಕಾಗುತ್ತದೆ.

ಈತನಕ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯೊಂದೇ ಇಂಥ ಹದಿನೆಂಟು ಶಿಪ್‌ಮೆಂಟ್ ಮಾಡಿದೆ. ಅಂದರೆ ಹಡಗುಗಳಲ್ಲಿ ಈ ರೀತಿ ಹದಿನೆಂಟು ಬಾರಿ ಲಕ್ಷಗಟ್ಟಲೇ ಟನ್ ಅದಿರನ್ನು ಹಾಂಕಾಂಗಿಗೆ ಸಾಗಿಸಿದೆ. ಒಂದು ಹಡಗಿನಲ್ಲಿ ಒಮ್ಮೆ ಅದಿರು ರಫ್ತಾಯಿತೆಂದರೆ ಅದು ಗಾತ್ರದಲ್ಲಿ ಅರ್ಧ ಆದಿಚುಂಚನಗಿರಿ ಬೆಟ್ಟವನ್ನೇ ತುಂಡರಿಸಿ ಚೀನಾಕ್ಕೆ ಸಾಗಿಸಿದಂತೆ. ದೇವೇಗೌಡರ ಕುಟುಂಬವೊಂದೇ ಇಂಥ ಒಂಭತ್ತು ಆದಿಚುಂಚನಗಿರಿ ಬೆಟ್ಟದಷ್ಟು ಅದಿರನ್ನು ಚೀನಾಕ್ಕೆ ಸಾಗಿಸಿದೆ. ಒಂದು ಹಡಗು ತುಂಬ ಅದಿರಿನ ಬೆಲೆ ಕನಿಷ್ಠ ನೂರು ಕೋಟಿ ಎಂದಿಟ್ಟುಕೊಂಡರೂ ಹದಿನೆಂಟು ಹಡಗುಗಳಿಗೆ ಎಷ್ಟಾಯಿತು? ಇದಕ್ಕೆ ಎಷ್ಟು ತೆರಿಗೆ ಕಟ್ಟಿದ್ದಾರೆ? ಸರ್ಕಾರಕ್ಕೆಷ್ಟು ರಾಯಲ್ಟಿ ಪಾವತಿ ಮಾಡಿದ್ದಾರೆ? ಇಷ್ಟೆಲ್ಲ ಅದಿರನ್ನು ಅಗೆದದ್ದು ಎಲ್ಲಿಂದ? ಸಾಗಿಸಿದ್ದು ಹೇಗೆ? ಸಿಬಿಐ ತನಿಖೆಯಾಗಲೇಬೇಕಲ್ಲವೇ?



ಬಸಪ್ಪರೆಡ್ಡಿ

—ಶಾ. ಸೋಮನಾಥ್

ಚೆನ್ನಿಗಪ್ಪನ ಹೂಂಕಾರ: 'ದುಡ್ಡು ಮಡಗೋ ಪುಟ್ರಾಜ....!'

ಇಲ್ಲಿಗೆ ಎರಡು ತಿಂಗಳ ಹಿಂದಿನ ಕತೆ. ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಉಪಮೇಯರ್ ಬನ್ನಿಪೇಟೆ ಸೋಮಣ್ಣನ ಬಂಟ ಬಿ.ಎಸ್. ಪುಟ್ಟರಾಜು ತಮ್ಮ ಚಿಕ್ಕನಾಯಕನಹಳ್ಳಿ ಮೈನ್ಸ್‌ಗೆ ಪರವಾನಗಿ ನವೀಕರಿಸುವಂತೆ ಕೋರಿ ಮಂತ್ರಿ ಚೆನ್ನಿಗಪ್ಪನವರ ಮನೆಗೆ ಬರುತ್ತಾರೆ. ಚೆನ್ನಿಗಪ್ಪನವರನ್ನು ಕಂಡಿದ್ದೇ ದಮ್ಮಯ್ಯ ಗುಡ್ಡೆ ಹಾಕಿ ತಮ್ಮ ಕುಂದ್ರಿ ಮೈನ್ಸ್‌ಗೆ ಕಾಟ ಕೊಡದಂತೆ ಗೋಗರೆಯುತ್ತಾರೆ. ಪುಟ್ಟರಾಜುವನ್ನು ತಮ್ಮ ಡೈನಿಂಗ್ ಟೇಬಲ್ಲಿಗೆ ಕರೆದೊಯ್ದು ಎದುರಿಗೆ ಕೂರಿಸಿಕೊಂಡು ಮುದ್ದೆ ಬಡಿಸಿದ ಚೆನ್ನಿಗಪ್ಪ 'ನೋಡಯ್ಯ ಪುಟ್ರಾಜ... ಸುಮ್ನೇ ಕತೆ ಹೇಳಬ್ಯಾಡ. ಮೊದಲು ದುಡ್ಡು ತಂದು ಮಡಗು. ಎಷ್ಟು ಲೋಡು ಬೇಕಾದ್ರೂ ಹೊಡಿ. ಊರಲ್ಲಾದ್ರೂ ಹೊಡಿ, ಕಾಡಲ್ಲಾದ್ರೂ ಹೊಡಿ. ನಿನಗ್ಯಾಕೆ? ನಿನ್ನ ಮೈನ್ಸ್ ನಡೀಬೇಕು ತಾನೆ? ದುಡ್ಡು ಮಡಗು ಆಮೇಲೆ ಮಾತಾಡು....!'

ಹಾಗೊಬ್ಬ ಮಂತ್ರಿಯೆಂಬ ಕನಿಷ್ಠ ಪ್ರಜ್ಞೆ ಕೂಡ ಇಲ್ಲದೇ ಹೂಂಕರಿಸಿದ್ದಾರೆ ಚೆನ್ನಿಗಪ್ಪ, ಇಷ್ಟೆಂದಿದ್ದೇ ಕುಟುಕುಟುಕೆನ್ನದೇ ಮೇಲೆದ್ದ ಪುಟ್ಟರಾಜು ಎಲ್ಲೆಲ್ಲಿಂದಲೋ ಹೊಂಚಿ ಸರಿಸುಮಾರು ಮೂರು ಕೋಟಿ ರೂಪಾಯಿಗಳಷ್ಟನ್ನು ಗುಡ್ಡೆ ಹಾಕಿದ್ದಾರೆ. 'ಇದಕ್ಕಿಂತ ಹೆಚ್ಚಿಗೆ ನನ್ನಿಂದ ಸಾಧ್ಯವಿಲ್ಲ, ದಯವಿಟ್ಟು ಇಷ್ಟಕ್ಕೇ ಒಪ್ಪಿಸಿಬಿಡಿ' ಎಂದು ಅದನ್ನು ಮಾಗಡಿ ಶಾಸಕ ಬಾಲಕೃಷ್ಣರ ಕೈಗಿತ್ತು ಡೀಲು ಒಪ್ಪಿಸಿದ್ದಾರೆ. ಬಾಲುವಿಗದು ಸಿಕ್ಕಿದ್ದೇ ಸೀರುಂಡೆ. ಆ ಮೂರೂ ಕೋಟಿಯನ್ನು ಭಕ್ತಿಯಿಂದಲೇ ಸ್ವೀಕರಿಸಿದ ಬಾಲು ಅದರಲ್ಲಿ ಒಂದು ಕೋಟಿಯನ್ನು ತಾನಿಟ್ಟುಕೊಂಡು ಮಿಕ್ಕ ಎರಡು ಕೋಟಿಯನ್ನಷ್ಟೇ ಚೆನ್ನಿಗಪ್ಪನವರ ಮುಂದಿಟ್ಟು 'ಬೇಜಾರ್ ಮಾಡಕೋಬ್ಯಾಡ ಗುರೂ, ಒಂದು ಕೋಟಿ ನಾನಿಟ್ಟು ಕೊಂಡಿದೀನಿ. ಹೊಸ ಮನೆ ಕಟ್ಟಿಸ್ತಾ ಇದೀನಿ, ನೋಡಿ ಸ್ವಲ್ಪ ಕಷ್ಟ ಐತೆ....!' ಎಂದಿದ್ದಾರೆ



ಚೆನ್ನಿಗಪ್ಪ ತಾನೆ ಏನು ಮಾಡಲು ಸಾಧ್ಯ? ಎಷ್ಟೆಂದರೂ ಬಾಲು ಗೌಡರ ಮನೆ ಹುಡುಗ. ಇದೇನಾದರೂ ಕುಮಾರಣ್ಣನ ಕಿವಿ ಮುಟ್ಟಿಬಿಟ್ಟರೆ? ನುಂಗಲಾಗದೇ, ಉಗುಳಲೂ ಆಗದೇ ಮುಖ ಗಂಟಿಕ್ಕಿದ ಚೆನ್ನಿಗಪ್ಪ 'ಒಂದು ಕೋಟೀನಾ....? ಅಲ್ಲಪ್ಪಾ ಅದೇನ್ ಮನೆ ಕಟ್ಟಿಸ್ತಿದ್ದೀಯೋ, ಎಂದು ಬಾಯಿಬಾಯಿ ಬಿಟ್ಟರಂತೆ.


ಹಾಲು ದರೋಡೆಯ ಹಡಬೆ ದುಡ್ಡು ಹೊಡೆದವನೇ ಜಾಣ!

ನಿಗೂಢ ಪಾರ್ಟ್‌ನರ್ ಅನಿತಕ್ಕ?

ಮೈದುನರಾದ ಬಾಲಕೃಷ್ಣಗೌಡ ಮತ್ತು ರಮೇಶ್ ಅದಿರುಕಳ್ಳರಿಗೆ ಕೈಯಿಟ್ಟು ಕೋಟಿ ಕೋಟಿ ದೋಚುತ್ತಿರುವಾಗ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪತ್ನಿ ಅನಿತಕ್ಕ ಅದನ್ನು ಸಹಿಸುವುದುಂಟೆ?

ಅದಕ್ಕೊಂದು ಸಣ್ಣ ಕ್ಲೂ ಸಿಕ್ಕಿದ್ದು ಇಲ್ಲಿಗೆ ಒಂದೂವರೆ ತಿಂಗಳ ಹಿಂದೆ. ಅದೊಂದು ಅಪಾರ್ಟ್‌ಮೆಂಟ್‌ನ ಉದ್ಘಾಟನಾ ಸಮಾರಂಭ. ಅದರ ಹೆಸರು ವಿಎಸ್‌ಎಲ್ ಗ್ರಾಂಡ್ ಸರ್ವೀಸ್ ಅಪಾರ್ಟ್‌ಮೆಂಟ್. ಬೆಂಗಳೂರಿನ ಬೆನ್ಸನ್ ಟೌನ್‌ನ ನಂ.12, ಬೋರ್ ಬ್ಯಾಂಕ್ ರೋಡ್ ವಿಳಾಸದಲ್ಲಿರುವ ಈ ಐಷಾರಾಮಿ ಅಪಾರ್ಟ್‌ಮೆಂಟ್‌ನ ಮಾಲೀಕ ಹಾಲೀ ಕೂಡ್ಲಿಗಿಯ ಬಿಜೆಪಿ ಶಾಸಕ ಅನಿಲ್ ಲಾಡ್. ಹೋಟೆಲುಗಳಲ್ಲಿ ರೂಮುಗಳನ್ನು ದಿನಬಾಡಿಗೆಗೆ ಕೊಡುವಂತೆ ಐಷಾರಾಮಿ ಫ್ಲ್ಯಾಟುಗಳನ್ನು ತಿಂಗಳ ಬಾಡಿಗೆಗೆ ಕೊಡುವುದನ್ನೇ ಸರ್ವೀಸ್ ಅಪಾರ್ಟ್‌ಮೆಂಟ್ ಅನ್ನುತ್ತಾರೆ.

ಕಳೆದ ಮೇ25 ರಂದು ಜರುಗಿದ ಅದರ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿದ್ದದ್ದು ಅನಿತಾ ಕುಮಾರಸ್ವಾಮಿ! ಸಂಡೂರಿನ ಜೆ.ಡಿ(ಎಸ್) ಶಾಸಕ ಸಂತೋಷ್ ಲಾಡ್ ಮತ್ತು ಕೂಡ್ಲಿಗಿಯ ಬಿಜೆಪಿ ಶಾಸಕ ಅನಿಲ್ ಲಾಡ್ ಇಬ್ಬರೂ ಅಣ್ಣ ತಮ್ಮಂದಿರು. ವಿಎಸ್‌ಎಲ್ ಟ್ರೇಡರ್ಸ್ ಹೆಸರಲ್ಲೇ ಇಬ್ಬರೂ ಅದಿರುಗಳ್ಳತನ ಕ್ಕಿಳಿದಿದ್ದಾರೆ. ಕಂಪನಿ ಒಂದೇ ಆದರೂ ಅಣ್ಣನ ಲೆಕ್ಕವೇ ಬೇರೆ, ತಮ್ಮನ ಲೆಕ್ಕವೇ ಬೇರೆ. ವಿಚಿತ್ರವೆಂದರೆ ಜೆ.ಡಿ(ಎಸ್) ಶಾಸಕ ಸಂತೋಷ್ ಲಾಡ್ ಮುಖ್ಯಮಂತ್ರಿಗೆ ಹತ್ತಿರವಿರಬೇಕಾಗಿತ್ತು. ಆದರೆ ಪ್ರತಿದ್ವಂದ್ವಿ ಬಿಜೆಪಿಯ ಅನಿಲ್ ಲಾಡ್ ಈಗ ಮುಖ್ಯಮಂತ್ರಿಯ ಪರಮಾಪ್ತ, ಕಾರಣವಿಷ್ಟೇ, ಈ ಅನಿಲ್ ಲಾಡ್ ತನ್ನ ಸಹೋದರನನ್ನೇ ಓವರ್ ಟೇಕ್ ಮಾಡಿ ಹೇಗೋ ಮುಖ್ಯಮಂತ್ರಿಯ ಕಿಚನ್ ಹೊಕ್ಕುಬಿಟ್ಟ. ಅನಿತಕ್ಕ ಮತ್ತು ಅನಿಲ್ ಲಾಡ್‌ನ ತಂಗಿ ಅನಿತಾ ಲಾಡ್ ಗೆಳತಿಯರಾಗಿಬಿಟ್ಟರು. ಅದೊಂದು ದೊಡ್ಡ ಡೀಲು.



ಅನಿತಕ್ಕ ಉದ್ಘಾಟಿಸಿದ ಅನಿಲ್ ಲಾಡ್‌ನ ಅಪಾರ್ಟ್‌ಮೆಂಟ್

ಅದಿರುಗಳ್ಳರ ಪಾಲಿಗೆ ಸಂಡೂರು ಸಮುದ್ರ ವಿದ್ದಂತೆ. ಇಲ್ಲಿಗೆ ಎರಡು ತಿಂಗಳ ಹಿಂದೆ ನೈಟ್ ಮೈನಿಂಗ್ ಅಂದರೆ ರಾತ್ರಿ ಗಣಿಗಾರಿಕೆಯ ಮೇಲಿದ್ದ ನಿಷೇಧವನ್ನು ಸ್ವತಃ ಮುಖ್ಯಮಂತ್ರಿಯೇ ನಿಂತು ರದ್ದಾಗುವಂತೆ ಮಾಡಿದ್ದರಲ್ಲಿ ಅತೀ ದೊಡ್ಡ ಕೈವಾಡ ವಿದ್ದದ್ದು ಕೂಡ್ಲಿಗಿಯ ಬಿಜೆಪಿ ಶಾಸಕ ಅನಿಲ್ ಲಾಡನದ್ದು. ಆ ಹೊತ್ತಿಗಾಗಲೇ ಮುಖ್ಯಮಂತ್ರಿಯವರ ಪತ್ನಿ ಅನಿತಕ್ಕ ವಿಎಸ್‌ಎಲ್ ಟ್ರೇಡರ್ಸ್ ಕಂಪನಿಯ ನಿಗೂಢ ಪಾರ್ಟ್‌ನರ್ ಆಗಿ ದಾಖಲಾಗಿದ್ದರು. ಸಾಲದ್ದಕ್ಕೆ ನೈಟ್ ಮೈನಿಂಗ್ ಪರವಾನಗಿ ಕೊಡಿಸಲು ಮುಖ್ಯ ಮಂತ್ರಿಗೆಂದು ಅನಿಲ್ ಲಾಡ್ ಸಂಡೂರು ಸೆಕ್ಟರ್‌ನ ಪ್ರತಿಯೊಬ್ಬ ಮೈನ್ಸ್ ಮಾಲೀಕನಿಂದ ತಲಾ ಮೂರರಿಂದ ಐದು ಕೋಟಿಯ ತನಕ ಎತ್ತುವಳಿ ಮಾಡಿದ್ದ. ಹಾಗೆ ಸಂಗ್ರಹಿಸಿದ ಮೊತ್ತವೇ ಅರವತ್ತು ಕೋಟಿಯನ್ನು ಮೀರಿತ್ತು.



ಮುಖ್ಯಮಂತ್ರಿಗೇ ಕೊಡ್ತೀರಿ ಅನ್ನೋದಕ್ಕೆ ಏನು ಗ್ಯಾರಂಟಿ ಅಂತ ಕೆಲ ಗಣಿ ಮಾಲೀಕರು ಪ್ರಶ್ನಿಸತೊಡಗಿದರು. ಅದಕ್ಕೆ ಅನಿಲ್ ಲಾಡ್ ತನ್ನ ವಿಎಸ್‌ಎಲ್ ಕಂಪನಿಯ ಜನರಲ್ ಮ್ಯಾನೇಜರ್ ಭೂಪಾಲನನ್ನೇ ಅನಿತಕ್ಕನ ಜೊತೆ ಮಾಡಿ ಸಂಡೂರು ಸೆಕ್ಟರ್‌ನ ಪ್ರಮುಖ ಗಣಿ ಮಾಲಿಕರನ್ನು ಭೇಟಿ ಮಾಡಿಸಿದ. ತನ್ನನ್ನು ಭೇಟಿ ಮಾಡಿದ ಗಣಿ ಮಾಲೀಕರಿಗೆಲ್ಲ ಗಂಟನ್ನು ಭೂಪಾಲ್ ಕೈಗೇ ಕೊಡಿ ಎಂದು ಅನಿತಕ್ಕ ಹೇಳಿದ್ದಾರೆ. ಇನ್ನೂ ಕೆಲವರು ಮುಖ್ಯಮಂತ್ರಿ ಮನೆಗೇ ಹೋಗಿ ಅನಿತಕ್ಕನ ಕೈಗೆ ದುಡ್ಡೊಪ್ಪಿಸಿ ಬಂದರು. ಹೀಗೇ ವಿಎಸ್‌ಎಲ್ ಕಂಪನಿಯ ಮ್ಯಾನೇಜರ್ ಭೂಪಾಲ್ ಜೊತೆ ಬಂದು ನೋಟಿನ ಕಂತೆಗಳನ್ನು ಕೊಟ್ಟ ಯಾರೋ ಗಣಿ ಮಾಲೀಕನೊಬ್ಬ ಅದನ್ನು Hidden ಕ್ಯಾಮೆರಾದಲ್ಲಿ ಚಿತ್ರೀಕರಿಸಿಟ್ಟಿರಬೇಕು. ಈ ವಿಎಸ್‌ಎಲ್ ಟ್ರೇಡರ್ಸ್‌ನ ಮೂವರು ಮಾಲೀಕರ ಪೈಕಿ ಅಣ್ಣ ಸಂತೋಷ್ ಲಾಡ್ ತಮ್ಮಂದಿರಾದ ಅನಿಲ್ ಲಾಡ್ ಮತ್ತು ವಿಶ್ವಾಸ್ ಲಾಡ್ ಪ್ರಮುಖರು. ತಂಗಿ ಅನಿತಾ ಲಾಡ್ ಕೂಡ one of the ಡೈರೆಕ್ಟರ್.

ಯಾವತ್ತು ಅನಿಲ್ ಲಾಡ್ ಮುಖ್ಯಮಂತ್ರಿಗೆ ಆಪ್ತನಾದನೋ ಅಣ್ಣ ಸಂತೋಷ್ ಲಾಡ್ ಕುಮಾರಣ್ಣನಿಂದ ದೂರಾಗಿ ವ್ಯತಿರಿಕ್ತ ಹೇಳಿಕೆ ಕೊಡತೊಡಗಿದ. ಹಾಗಂತ ಅನಿಲ್ ಲಾಡ್ ಕೈಕಟ್ಟಿ ಕೂರಲಿಲ್ಲ, ತಾನು ಬೆನ್ಸನ್ ಟೌನ್‌ನಲ್ಲಿ ಕಟ್ಟಿಸಿದ ಅಪಾರ್ಟ್‌ಮೆಂಟ್ ಉದ್ಘಾಟನೆಗೆ ಅನಿತಕ್ಕನನ್ನೇ ಕರೆಸಿದ. ತನ್ನ ಮ್ಯಾನೇಜರ್ ಭೂಪಾಲ್‌ನನ್ನು ಜೊತೆಮಾಡಿ ಅವರನ್ನು ಸಂಡೂರಿಗೆ ಕರೆತಂದ.

ಅನಿತಕ್ಕ ವಿಎಸ್‌ಎಲ್ ಗ್ರಾಂಡ್ ಅಪಾರ್ಟ್‌ಮೆಂಟಿಗೂ ಪಾಲುದಾರರೆ? ಸಂಡೂರಿನ ಯಾವ್ಯಾವ ಗಣಿಗಾರಿಕೆಯಲ್ಲಿ ಅವರ ಪಾಲಿದೆ? ಅನಿಲ್ ಲಾಡ್ ಮುಖ್ಯಮಂತ್ರಿಯ ಹೆಸರಲ್ಲಿ ಎತ್ತುವಳಿ ಮಾಡಿದ ದುಡ್ಡಿನಲ್ಲಿ ಅನಿತಕ್ಕನ ಕೈಗೆ ಸೇರಿದ ಮೊತ್ತವೆಷ್ಟು? ಇತ್ಯಾದಿ ಪ್ರಶ್ನೆಗಳಿಗೆ ಕಾಲವೇ ಉತ್ತರ ಕೊಡಲಿದೆ.




ಅನಿಲ್ ಲಾಡ್‌ನ ಅಪಾರ್ಟ್‌ಮೆಂಟ್


ಗ್ರಾನೈಟ್ ಕುಮಾರನ ಕನೆಕ್ಷನ್ನು ಕಲೆಕ್ಷನ್ನು...

ಮುಖ್ಯಮಂತ್ರಿಯ ಹೆಸರಲ್ಲಿ ಗಣಿ ಮಾಲೀಕರಿಂದ ಎತ್ತುವಳಿ ಮಾಡಿದವರ ಪೈಕಿ ಅನಿಲ್‌ಲಾಡ್ ಮತ್ತು ಪೋತ್ದಾರ್ ಮಾತ್ರವೇ ಅಲ್ಲ; ಮತ್ತೊಬ್ಬ ಆಸಾಮಿ ಹುಟ್ಟಿಕೊಂಡಿದ್ದಾನೆ.

ಆತನ ಹೆಸರು ಗ್ರಾನೈಟ್ ಕುಮಾರ! ವಿಜಯನಗರದ ಸರ್ವೀಸ್ ರಸ್ತೆಯಲ್ಲಿ ಶರಾವತಿ ನರ್ಸಿಂಗ್ ಹೋಮ್ ಪಕ್ಕದಲ್ಲೇ ಈತನ ಅಡ್ಡೆಯಿದೆ. ಅದರ ಹೆಸರು ಮಾತಾ ಮೈನ್ಸ್. ಮಾತಾ ಮಿನರಲ್ಸ್ ಎಂಬ ಮತ್ತೊಂದು ಬೋರ್ಡು ಆರ್.ಪಿ.ಸಿ. ಲೇಔಟ್ ಬಸ್‌ಸ್ಟ್ಯಾಂಡ್ ಪಕ್ಕದಲ್ಲಿದೆ. ಅಲ್ಲಿರುವವನು ಪ್ರದೀಪ್ ಒಡೆಯರ್. ಈತ ಗ್ರಾನೈಟ್ ಕುಮಾರನ ಪಾರ್ಟ್‌ನರ್. ಮೂಲತಃ ಮಾಗಡಿ ತಾಲ್ಲೂಕು ಶಿವಗಂಗೆ ಪಕ್ಕದ ಬಾಂದವಾಡಿ ಈತನ ಹುಟ್ಟೂರು. ಪ್ರಾರಂಭದಲ್ಲಿ ಬೋರ್‌ವೆಲ್ ಕಂಟ್ರಾಕ್ಟರ್ ಆಗಿದ್ದ. ಜಿಲ್ಲಾ ಪಂಚಾಯ್ತಿ ಚುನಾವಣೆಗೂ ನಿಂತು ಸೋತ. ಕ್ರಮೇಣ ಗ್ರಾನೈಟ್ ಕುಳ ಪ್ರದೀಪ್ ಒಡೆಯರ್‌ನ ಜೊತೆ ಸೇರಿ ಚನ್ನಪಟ್ಟಣದ ಬಳಿ ಕ್ವಾರಿ ಹಿಡಿದ ಕುಮಾರ ಅದಕ್ಕೆ ಮಾಜಿ ಉಪಮೇಯರ್ ಪುಟ್ರಾಜು, ಮಾಗಡಿ ಶಾಸಕ ಬಾಲಕೃಷ್ಣ ಮತ್ತು ಚಂದ್ರಮೌಳಿ ಎಂಬಾತನನ್ನು ಪಾರ್ಟ್‌ನರ್ ಮಾಡಿಕೊಂಡಿದ್ದ. ಅದು ಬರಕತ್ತಾಗದೇ ಎಲ್ಲರೂ ಚಿಕ್ಕನಾಯಕನ ಹಳ್ಳಿಯಲ್ಲಿ ಕುಂಡ್ಲಿ ಮೈನ್ಸ್‌ಗೆ ಕೈಯಿಟ್ಟರು.



ಅದೇನಾಯಿತೋ; ಅಲ್ಲಿಯ ತನಕ ಕುಂಡ್ಲಿ ಮೈನ್ಸ್ ನಡೆಸಿಕೊಂಡಿದ್ದ ಚಾಮರಾಜಪೇಟೆಯ ಅಮರ್‌ಸಿಂಗ್ ಎಂಬಾತ ನಿಗೂಢವಾಗಿ ಸತ್ತು ಹೋಗಿದ್ದ!



ಚೆನ್ನಿಗಪ ಮಗ ಗೌರಿಶಂಕರ್, ಬಾಲಕೃಷ್ಣ

ಮುಂದೆ ಅದಿರು ಗಳ್ಳತನದಲ್ಲಿ ಕಚ್ಚಾಟ ನಡೆದು ಪ್ರದೀಪ್ ಒಡೆಯರ್ ಮತ್ತು ಗ್ರಾನೈಟ್ ಕುಮಾರ್ ಇಬ್ಬರೂ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡರು. ಕುಮಾರ್ ಪ್ರಳಯಾಂತಕ, ಮಣ್ಣಲ್ಲೂ, ಎಣ್ಣೆ ಹಿಂಡಬಲ್ಲ ಚಾಲಾಕಿ. ಇಂಥವನನ್ನು ಮಂತ್ರಿ ಚೆನ್ನಿಗಪ್ಪನ ಮನೆಯೊಳಕ್ಕೆ ಕರೆದೊಯ್ದು ಬಿಟ್ಟವನು ಚೆನ್ನಿಗಪ್ಪನವರ ಹೀರೋ ಶಿವರುದ್ರಯ್ಯ, ಪ್ರಾರಂಭದಲ್ಲಿ ಚೆನ್ನಿಗಪ್ಪನವರನ್ನು ಬಳ್ಳಾರಿಗೆ ಕರೆದೊಯ್ದದ್ದು, ಹೊಸಪೇಟೆಯ ಐದಾರು ಗಣಿ ಮಾಲೀಕರನ್ನು ಗುಬ್ಬಿಯಾಚೆ ಚೆನ್ನಿಗಪ್ಪನವರಿಂದ ದೋಚು ಹಾಕಿಸಿದ್ದೇ ಈತ.

ಆದರೆ, ತಕ್ಷಣ ಈತನ ಪಾರ್ಟ್‌ನರ್ ಒಡೆಯರ್ ಸಂಡೂರು, ಹೊಸಪೇಟೆ, ಪಾಸಲೆಯ ಅರಣ್ಯಕ್ಕೆ ಕನ್ನ ಹಾಕತೊಡಗಿದ್ದ. ಈ ದಂಧೆಗೆ ಮಾಗಡಿ ಶಾಸಕ ಬಾಲಕೃಷ್ಣರನ್ನೂ ಪಾರ್ಟ್‌ನರ್ ಮಾಡಿಕೊಂಡರು. ಎಲ್ಲಕ್ಕೂ ಮಿಗಿಲಾಗಿ ಮಂತ್ರಿ ಚೆನ್ನಿಗಪ್ಪನವರೇ ಕೈಜೋಡಿಸಿಬಿಟ್ಟರು. ಅದಕ್ಕೆಂದು ಚೆನ್ನಿಗಪ್ಪನವರೇ ನಲವತ್ತು ಲಾರಿಗಳನ್ನು ಖರೀದಿಸಿದ್ದರು. ಅದರ ಉಸ್ತುವಾರಿಯನ್ನೆಲ್ಲ ಮಂತ್ರಿ ಮಗ ಗೌರಿಶಂಕರನೇ ವಹಿಸಿಕೊಂಡ.

ಮಾತಾ ಮಿನರಲ್ಸ್ ದಂಧೆ ಪುಟಿದು ನಿಲ್ಲುತ್ತಿದ್ದಂತೆ ಗ್ರಾನೈಟ್ ಕುಮಾರ್ ಚಿಕ್ಕನಾಯಕನಹಳ್ಳಿ, ಗುಬ್ಬಿ ಹೊಸದುರ್ಗ ಸೆಕ್ಟರ್‌ನ ಗಣಿ ಮಾಲೀಕರನ್ನು ಬೆದರಿಸಿ ಮುಖ್ಯಮಂತ್ರಿಗೆ ಕೊಡಬೇಕು ಎಂದು ವಸೂಲಿಗಿಳಿದ. ಒಂದು ಮೂಲದ ಪ್ರಕಾರ ಕುಮಾರ್ ಒಬ್ಬನೇ ಸರಿ ಸುಮಾರು ಇಪ್ಪತ್ತೈದು ಕೋಟಿ ವಸೂಲಿ ಮಾಡಿದ್ದಾನೆ. ಇದರಲ್ಲಿ ದೊಡ್ಡ ಪಾಲು ಮಂತ್ರಿ ಚೆನ್ನಿಗಪ್ಪನವರ ಕೈಸೇರಿದೆ. ಕೆಲವೆಡೆ ಗಣಿ ಮಾಲೀಕರನ್ನು ಎದುರು ಕೂಡ್ರಿಸಿಕೊಂಡು ಕುಮಾರನೇ ಚೆನ್ನಿಗಪ್ಪನವರಿಗೆ ಫೋನ್ ಮಾಡಿ ಮಾತಾಡಿಸಿದ್ದಾನೆ. ಒಂದರ್ಥದಲ್ಲಿ ಚೆನ್ನಿಗಪ್ಪನವರೇ ಕುಮಾರನನ್ನು ಮುಂದೆ ಬಿಟ್ಟು 'ಸೀಯಮ್‌ಗೆ ಕೊಡಬೇಕ್ರೀ....' ಎಂದು ದಬಾಯಿಸಿದ್ದಾರೆ.

ಹೀಗೆ ಸಂಗ್ರಹಿಸಿದ್ದರಲ್ಲಿ ತನ್ನ ಪಾಲನ್ನು ನೇರವಾಗಿ ಅನಿತಕ್ಕನಿಗೇ ತಲುಪಿಸಬೇಕೆಂದು 'ಅಣ್ಣಾಜ್ಞೆ' ಯಾಗಿತ್ತೇನೊ! ಇದೇ ಜುಲೈ ಹನ್ನೊಂದರಂದು ಮುಖ್ಯಮಂತ್ರಿಯ ಸ್ವಂತ ಕ್ಷೇತ್ರ ರಾಮನಗರದಲ್ಲಿ ಚಾಮುಂಡೇಶ್ವರಿ ಕರಗದ ಪ್ರಯುಕ್ತ ಗುರುಕಿರಣ್ ಆರ್ಕೆಸ್ಟ್ರಾ ಮತ್ತು ಅರೆ ನಂಗಾನಾಚ್ ನಡೆಯಿತಲ್ಲ ಅದರ ಅಷ್ಟೂ ಖರ್ಚೆಲ್ಲ ತನ್ನದೇ ಎಂದು ಗ್ರಾನೈಟ್ ಕುಮಾರ್ ಗಣಿ ಮಾಲೀಕರೆದುರು ರೈಲು ಬಿಡುತ್ತಿದ್ದಾನೆ. ಅಂದಹಾಗೇ ರಾಮನಗರದ ಕರಗದಲ್ಲಿ ಗ್ರಾನೈಟ್ ಕುಮಾರ ಮುಖ್ಯಮಂತ್ರಿ ಕುಮಾರ್ ಅಕ್ಕಪಕ್ಕದಲ್ಲೇ ಸುತ್ತಾಡಿಕೊಂಡಿದ್ದ, ವಿಶೇಷವಾಗಿ ಅನಿತಕ್ಕ ಕೊಟ್ಟ ಸೂಚನೆಗಳನ್ನು ಪಾಲಿಸುತ್ತಿದ್ದ.

ಏನಿದರ ಮರ್ಮ? ಕುಮಾರ ಚೆನ್ನಿಗಪ್ಪನಿಗಷ್ಟೇ ಪಾಲು ದಾರನೆ? ಅಥವಾ ಮುಖ್ಯಮಂತ್ರಿ ಮನೆತನಕ ನಂಟು ಸಾಧಿಸಿದ್ದಾನಾ?

ಕರ್ನಾಟಕದಲ್ಲಿ ಇತ್ತೀಚಿನ 25 ವರ್ಷಗಳಲ್ಲಿ ನಡೆದ ಹಗರಣಗಳನ್ನೆಲ್ಲ 'ಸ್ಪರ್ಧೆ'ಗೆ ಇಟ್ಟರೆ ಅಂತಿಮವಾಗಿ ವಿಜಯದ ನಗೆ ಬೀರುವುದು ಯಾವುದೆಂಬುದನ್ನು 7 ನೇ ಕ್ಲಾಸಿನ ವಿದ್ಯಾರ್ಥಿಗಳೂ ಥಟ್ಟನೆ ಹೇಳಿಬಿಡಬಲ್ಲರು. ಅಷ್ಟೊಂದು ಮನೆಮಾತಾಗಿಬಿಟ್ಟಿದೆ ಯುವರಾಜ ಕುಮಾರಸ್ವಾಮಿ ಫ್ಯಾಮಿಲಿಯ 150 ಕೋಟಿ ಗಣಿ ಲಂಚದ ಹಗರಣ!

ಕೇವಲ ಗಣಿಗಾರಿಕೆಯ ದೈತ್ಯ ಕುಳಗಳಿಂದ 150 ಕೋಟಿ ಲಂಚ ಪಡೆದರು ಎಂಬುದಕ್ಕಿಂತ ಹೆಚ್ಚಾಗಿ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ಸರ್ವಸದಸ್ಯರೂ ಯುದ್ಧೋತ್ಸಾಹದಲ್ಲಿ ನೂರಾರು ಕೋಟಿಗಳ ಸಂಪತ್ತು ಸಂಗ್ರಹಣೆಯಲ್ಲಿ ನಿರತರಾಗಿಬಿಟ್ಟಿದ್ದಾರೆ ಎಂಬುದೀಗ ಜಗಜ್ಜಾಹೀರಾಗಿದೆ.

ಸಿ.ಎಂ. ಸಹೋದರರಾದ ಬಾಲಕೃಷ್ಣಗೌಡ, ಡಾ|| ರಮೇಶ್ ಮಾಲೀಕತ್ವದ ಬಿಎಸ್‌ಕೆ ಟ್ರೇಡಿಂಗ್ ಎಂಬ ದರೋಡೆಕೋರ ಕಂಪನಿಯ ಲಂಚಾವತಾರದ ಮುಂದೆ ಬಾಟ್ಲಿಂಗ್, ರೇವಜಿತು, ಕ್ಲಾಸಿಕ್ ಕಂಪ್ಯೂಟರ್ ಹಗರಣಗಳೆಲ್ಲ 'ಸೊರಗಿ' ಹೋದಂತೆ ಕಾಣತೊಡಗಿವೆ.

1983 ಜನವರಿಯಲ್ಲಿ ಅಧಿಕಾರಕ್ಕೆ ಬಂದ ಮೊದಲ ಕಾಂಗ್ರೆಸ್ಸೇತರ ಸರ್ಕಾರವೆನಿಸಿದ ಹೆಗಡೆ ಸರ್ಕಾರ ಜೂನ್‌ನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಬಾಟ್ಲಿಂಗ್ ಪ್ರಕ್ರಿಯೆಯನ್ನು ಸರ್ಕಾರವೇ ಕೈಗೊಳ್ಳುವುದಾಗಿ ಘೋಷಿಸಿಬಿಟ್ಟಿತು. ಆಗಿನ 20 ಜಿಲ್ಲೆಗಳ ಬಾಟ್ಲಿಂಗ್ ಕಂಟ್ರಾಕ್ಟ್‌ನ್ನು 14 ಅನಾಮಿಕ ಖಾಸಗಿ ಲೈಸೆನ್ಸ್‌ದಾರರಿಗೆ ಹಂಚುವ ಮೂಲಕ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಕನ್ನ ಹಾಕಿಬಿಟ್ಟಿದ್ದರು ಶ್ರೀಮಾನ್ ಹೆಗಡೆಜಿ. ಎಚ್.ಎಸ್. ಸೋಮಶೇಖರ್ ಎನ್ನುವ ವಾಚ್ ರಿಪೇರಿ ಅಂಗಡಿಯವನಿಗೆ 9 ಜಿಲ್ಲೆಗಳ ಬಾಟ್ಲಿಂಗ್ ಲೈಸೆನ್ಸು ನೀಡಿದ್ದರು. ಹೆಗಡೆ ಸಾಹೇಬರು! ಆದರೆ ಸೋಮಶೇಖರ್ ಎಂಬ ಅಮಾಯಕನ ಹೆಸರಲ್ಲಿ ಕೊಳ್ಳೆ ಹೊಡೆದವನು ತಮಿಳುನಾಡಿನ ಎಂಜಿಆರ್ ಶಿಷ್ಯ ರಾಮಸ್ವಾಮಿ ಒಡೆಯರ್ ಎಂಬ ಹೆಂಡದ ಕುಳ! ಹಾಗೆಯೇ ಗುಂಡುರಾವ್ ಚೇಲಾ, ಬಾಡಿ ಬಿಲ್ಡರ್ ಮಂಜುನಾಥ್ ಹೆಗಡೆಯ ಸಹೋದರ ವಾದಿರಾಜ ಹೆಗಡೆಯ ಶ್ರೀಶೈಲ್ ಬಾಟ್ಲಿಂಗ್ ಕಂಪನಿಗೆ 4 ಜಿಲ್ಲೆಗಳನ್ನು ದಯಪಾಲಿಸಲಾಗಿತ್ತು.

ಹಗರಣಗಳ ಒಲಂಪಿಕ್ಸ್
ದಿ ವಿನ್ನರ್ ಇಸ್ ಕುಮಾರಸ್ವಾಮಿ!

ನಮ್ಮೀ 'ಪತ್ರಿಕೆ'ಯಿಂದಲೇ ಸ್ಫೋಟಗೊಂಡ ಈ ಹಗರಣದ ನಂತರ 'ಪತ್ರಿಕೆ'ಯೇ ನೇರವಾಗಿ ರಾಜ್ಯಪಾಲರನ್ನು ಕಂಡು ಹೆಗಡೆ ಮೇಲೆ ಮೊಕದ್ದಮೆ ಹೂಡಲು ಅನುಮತಿ ಕೇಳಿದ್ದು ರಾಷ್ಟ್ರಾದ್ಯಂತ ಸುದ್ದಿಯಾಗಿ ಹೋಗಿತ್ತು. ಇನ್ನೇನು ರಾಜ್ಯಪಾಲರು ಅದಕ್ಕೆ ಅನುಮತಿ ನೀಡಬೇಕೆನ್ನುವಷ್ಟರಲ್ಲಿ ಟೆಲಿಫೋನ್ ಟ್ಯಾಪಿಂಗ್ ಹಗರಣ ಬಯಲಾಗಿ ಹೆಗಡೆ ರಾಜೀನಾಮೆ ನೀಡಬೇಕಾಗಿತ್ತು. ಕೊನೆಗೆ ಹೈಕೋರ್ಟ್ ಹೆಗಡೆ ಮತ್ತು ಸರ್ಕಾರಕ್ಕೆ ಅತೀ ಕಠೋರ ಶಬ್ದಗಳಲ್ಲಿ ಛೀಮಾರಿ ಹಾಕಿತ್ತು.

ಮುಂದೆ ಹೆಗಡೆ ಪುತ್ರಿ ಮಮತಾ ಮತ್ತು ಆಕೆಯ ಪತಿ ಮನು ನಿಚ್ಚಾನಿಗಳು 'ಬಾಟ್ಲಿಂಗ್ ವೀರ' ಮಂಜುನಾಥ್ ಹೆಗಡೆಯ ಹಣದಿಂದಲೇ ಸೌತ್ ಎಂಡ್ ಸರ್ಕಲ್ ಬಳಿಯ ಅಂದಿಗೆ 6 ಕೋಟಿ ಮೌಲ್ಯವಿದ್ದ ಆಸ್ತಿಯನ್ನು ಕೇವಲ 90ಲಕ್ಷ ರೂ.ಗಳಿಗೆ ಖರೀದಿಸಿದ ರೇವಜಿತು ಹಗರಣ ಹೊರಗೆಡವಿತ್ತು 'ಪತ್ರಿಕೆ'. ಬಂಗಾರಪ್ಪ ಮುಖ್ಯಮಂತ್ರಿ ಆಗಿದ್ದಾಗ ನಡೆದ ಕ್ಲಾಸಿಕ್ ಕಂಪ್ಯೂಟರ್ ರಾಷ್ಟ್ರಾದ್ಯಂತ ಅಂದು ಕೋಲಾಹಲ ಮೂಡಿಸಿತ್ತು. ಆದರೆ ಅದು 5 ಕೋಟಿಯ ಹಗರಣ. ಇವತ್ತು ಕುಮಾರಸ್ವಾಮಿಯ 150 ಕೋಟಿ ಲಂಚದ ಹಗರಣದ ಮುಂದೆ ಬಾಟ್ಲಿಂಗ್, ರೇವಜಿತು, ಕ್ಲಾಸಿಕ್ ಕಂಪ್ಯೂಟರ್ ಹಗರಣಗಳೆಲ್ಲ ಸಣ್ಣಪುಟ್ಟ ಲಂಚದ ಪ್ರಕರಣಗಳು ಎನ್ನಿಸತೊಡಗಿಬಿಟ್ಟಿವೆ.

ಜಾರ್ಜ್‌ಫರ್ನಾಂಡಿಸ್‌ರ ಶವಪೆಟ್ಟಿಗೆಯ ಹಗರಣವೂ ಕುಮಾರಣ್ಣರ ಈ ಹಗರಣದ ಮುಂದೆ ಸಪ್ಪೆಯೇ.

ಅಷ್ಟೇ ಏಕೆ, ರಾಜೀವ್‌ಗಾಂಧಿ ಸರ್ಕಾರದ ಪತನಕ್ಕೆ ಕಾರಣವಾದ ಬೋಫೋರ್ಸ್ ಹಗರಣದಲ್ಲಿನ ಕಿಕ್‌ಬ್ಯಾಕ್ ಮೊತ್ತ 'ಕೇವಲ' 65 ಕೋಟಿಯಾಗಿತ್ತು!

ಹಾಗೆಯೇ ಕುಮಾರಣ್ಣನ ಪಿತ್ರ ದೇವೇಗೌಡರೇ ಮುಖ್ಯಮಂತ್ರಿಯಾಗಿದ್ದಾಗ ನಡೆದ ಕೃಷ್ಣಾಯೋಜನೆಯ ಟೀಸ್‌ವರ್ಕ್ ಹಗರಣಕ್ಕಿಂತಲೂ ಹೆಚ್ಚು ಸುದ್ದಿಯಾಗುವ ಮೂಲಕ ದೇವೇಗೌಡರ ಕುಟುಂಬದ ರಾಜಕೀಯದ ಅಂತಿಮ ಅಧ್ಯಾಯ ಬರೆಯುವತ್ತ ಸಾಗಿದೆ ಈ 150 ಕೋಟಿಯ ಲಂಚ ಪ್ರಕರಣ. ಬಾಟ್ಲಿಂಗ್, ಬೋಫೋರ್ಸ್‌ಗಳ ತಾಯಿಯಂತಿರುವ ಈ ಹಗರಣವನ್ನು 'Mother of Scandals' ಎನ್ನಬಹುದೇನೊ? ಅಂತೂ ದೇವು ಮತ್ತು ಫ್ಯಾಮಿಲಿ ಭ್ರಷ್ಟತೆಯ ಸ್ಪರ್ಧೆಯಲ್ಲಿ ಗೋಲ್ಡ್ ಮೆಡಲ್ ಕೊಳ್ಳೆ ಹೊಡೆದಿದೆ!

-ಮಲ್ಲಿ



ಮಲಮೂತ್ರದ ಸ್ನಾನ ಕವಿವರ್ಯರ ಧ್ಯಾನ

ಅರಿಶಿಣ ಕುಂಕುಮಕ್ಕೆ ೩೦ ಕೋಟಿ ರೂ. ಆಸ್ತಿ ಖರೀದಿ!

ರವೀಂದ್ರ ರೇಶ್ಮೆ

ನೂರೈವತ್ತು ಕೋಟಿ ರೂ. ಲಂಚಗುಳಿತನ ಹಾಗೂ ಅಕ್ರಮ ಗಣಿ ವಹಿವಾಟಿನ ಆರೋಪಗಳಿಂದ ಈಗಾಗಲೇ ಜರ್ಜರಿತಗೊಂಡಿರುವ ಮಾಜಿ ಪ್ರಧಾನಿ ದೇವೇಗೌಡರ ಪರಿವಾರದ ಮುಡುಗರಕ್ಕೆ ಮತ್ತಷ್ಟು ಅಭಾಸಕರ ಆರೋಪಗಳ ಸರಮಾಲೆಯೇ ಸುತ್ತಿಕೊಳ್ಳುತ್ತಿರುವಂತಿದೆ.

ನಿನ್ನೆಯಷ್ಟೇ (ಜು.29) ದಾವಣಗೆರೆಯ ಹೆಲಿಪ್ಯಾಡ್‌ನಲ್ಲಿ ತಂಗಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿ ತನ್ನ ಸೋದರರುಗಳ ಖಾಸಗಿ ವ್ಯಾಪಾರಕ್ಕೂ (ಕಬ್ಬಿಣದ ಅದಿರಿನ ಟ್ರೇಡಿಂಗ್ ವ್ಯವಹಾರ) ತಮಗೂ ಯಾವುದೇ ಸಂಬಂಧವಿಲ್ಲ ಎಂದು ಬಹಿರಂಗವಾಗಿ ಸಾರಿದ್ದಾರಲ್ಲವೇ?

ಕುಮಾರಣ್ಣನವರ ಈ ತರ್ಕಸರಣಿ ಪ್ರಾಮಾಣಿಕವಾದದ್ದೇ ಎಂದೊಪ್ಪಿಕೊಂಡರೂ ಇದೀಗ "ಲಂಕೇಶ್"ನಲ್ಲಿ ಅನಾವರಣಗೊಳ್ಳಲಿರುವ ಆಸ್ತಿ ಖರೀದಿ ವೃತ್ತಾಂತ ಈ ಯುವ ಮುಖ್ಯಮಂತ್ರಿಯ ಮಾತು, ನಡವಳಿಕೆ, ರಾಜಕೀಯ ತಂತ್ರಗಾರಿಕೆಯನ್ನಷ್ಟೇ ಅಲ್ಲ, ಅವರ ವ್ಯಕ್ತಿಗತ ವಿಶ್ವಾಸಾರ್ಹತೆಯನ್ನೇ ಅಲ್ಲಾಡಿಸಬಲ್ಲಷ್ಟು ಅಪಾಯಕಾರಿಯಾಗಲಿದೆ....

ಕೃಷ್ಣರಾಜಪುರಂನಲ್ಲಿ ಪ್ರಾಪರ್ಟಿ ಡೀಲು

ಈ ವರ್ಷದ ಫೆಬ್ರವರಿ ಮೊದಲ ವಾರವಷ್ಟೇ ಜೆಡಿಎಸ್-ಬಿಜೆಪಿ ಮೈತ್ರಿಕೂಟ ಸರಕಾರದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕುಮಾರಸ್ವಾಮಿಯವರ ಕುಟುಂಬದ ಸದಸ್ಯರು ಅದ್ಯಾಕೆ ಈ ಪರಿ ಅವಸರದ ಆಸ್ತಿ ಖರೀದಿಯ ಗೀಳಿಗೆ, ತುರ್ತು ಸಂಪತ್ತುಗಳಿಕೆಯ ವ್ಯಾಮೋಹಕ್ಕೆ ಬಲಿಯಾದರೆಂದು ಅಚ್ಚರಿಯುಂಟಾಗಲಿದೆ....

ರಾಜಧಾನಿಯ ಪೂರ್ವ ದಿಕ್ಕಿನಲ್ಲಿರುವ ಕೆ.ಆರ್. ಪುರಂ ತಾಲ್ಲೂಕಿನ ಸರಹದ್ದಿಗೊಳಪಟ್ಟ, ಹಳೆಯ ಮದ್ರಾಸು ಹೆದ್ದಾರಿಯ ಹತ್ತಿರದಲ್ಲಿರುವ ಸುಮಾರು 30 ಎಕರೆಗೂ ಅಧಿಕ ವಿಸ್ತೀರ್ಣದ ಪರಿವರ್ತಿತ ಜಮೀನನ್ನು ಸೊಸೆಯಂದಿರು ಹಾಗೂ ಕಿರಿಯ ಪುತ್ರ ಡಾ.ರಮೇಶ್‌ರ ಜಂಟಿ ಪಾಲುದಾರಿಕೆಯಲ್ಲಿ ಖರೀದಿಸಲಾದ ವಹಿವಾಟು ಕುಮಾರಣ್ಣನ ಅಲ್ಪಾವಧಿಯ ರಾಜ್ಯಭಾರದಲ್ಲಿಯೇ ನೆರವೇರಿದೆ...

ಕೆ.ಆರ್.ಪುರಂ ತಾಲ್ಲೂಕು, ದೊಡ್ಡನೆಕ್ಕುಂದಿ ಗ್ರಾಮಕ್ಕೆ ಸೇರಿದ ಈ ಜಮೀನಿನಲ್ಲಿ ಒಂದು ಹಳೆಯ ಕೈಗಾರಿಕಾ ಕಂಪನಿಯ ವಿಶಾಲವಾದ ಕಟ್ಟಡವೇ ನೆಲೆಸಿತ್ತು. ಅಂದರೆ ಇದು ಬಹು ಹಿಂದೆಯೇ ಕೃಷಿಯಿಂದ ಕೃಷಿಯೇತರ ಜಮೀನಾಗಿ ಪರಿವರ್ತನೆಗೊಂಡ ಸ್ಥಿರಾಸ್ತಿಯಾಗಿತ್ತು.

ರಾಜಧಾನಿಯ ಜಗತ್ಪ್ರಸಿದ್ಧ ಬಿಲ್ಡರ್ ಮತ್ತು ಡೆವಲಪರ್ ಕಂಪನಿಯ ಮಾಲೀಕರಾದ ರಹೇಜಾ ಎಂಬ ಸಿಂಧಿ ಕುಟುಂಬದ ಕುಡಿಯೊಬ್ಬನ ಸಕ್ರಿಯ ಮುಧ್ಯಸ್ಥಿಕೆಯಲ್ಲಿಯೇ ಸಾಂಗೋಪಾಂಗವಾಗಿ ಜರುಗಿದ ಸದರಿ ವಹಿವಾಟಿನ ರಿಜಿಸ್ಟ್ರೇಶನ್ ಪ್ರಕ್ರಿಯೆ ನಡೆದದ್ದು ಕೆ.ಆರ್. ಪುರಂ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ.



ಸೊಸೆ ಭವಾನಿ

ಹೆಣ್ಣು ಮಕ್ಕಳದ್ದೇ ಕಾರುಬಾರು

ಕೆ.ಆರ್. ಪುರಂ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೊಂದಣಿ ಮಾಡಿಸಲ್ಪಟ್ಟ ಈ ಅಮೂಲ್ಯ ಸ್ಥಿರಾಸ್ತಿಯ ಬೆಲೆಯನ್ನು ಕ್ರಯಪತ್ರದಲ್ಲಿಯೇ 30 ಕೋಟಿ ರೂಪಾಯಿಗಳೆಂದು ನಮೂದಿಸಲಾಗಿದ್ದು ಇದಕ್ಕೋಸ್ಕರ ಸಂದಾಯ ಮಾಡಲಾದ ಸ್ಟ್ಯಾಂಪ್ ಡ್ಯೂಟಿ ಶುಲ್ಕವೇ 3 ಕೋಟಿ 60 ಲಕ್ಷ ರೂಪಾಯಿಗಳಷ್ಟಾಗಿತ್ತು.



ಅಂದಹಾಗೆ ಇಂತಹ ದುಬಾರಿ ಬೆಲೆಯ ನಿವೇಶನವನ್ನು ಅದರಲ್ಲಿದ್ದ ಕಟ್ಟಡದ ಸಮೇತ ಸ್ವಾಧೀನಪಡಿಸಿಕೊಂಡ ಖರೀದಿದಾರರ ಪೈಕಿ ಮೆಜಾರಿಟಿ ಸಂಖ್ಯೆಯ ಸದಸ್ಯರೆಲ್ಲರೂ ಗೌಡರ ಪರಿವಾರದ ಮಹಿಳಾ ಮಣಿಗಳೇ...

ಶ್ರೀಮತಿಯರಾದ ಕವಿತಾ ಬಾಲಕೃಷ್ಣ, ಭವಾನಿ ರೇವಣ್ಣ, ಅನಿತಾ ಕುಮಾರಸ್ವಾಮಿ, ಅನುಸೂಯಾ ಮಂಜುನಾಥ್ ಹಾಗೂ ಶೈಲಜಾ ಚಂದ್ರಶೇಖರ್ ಇವರುಗಳ ಜತೆ ಜಂಟಿ ಖರೀದಿದಾರರಾಗಿ ಸೇರಿಕೊಂಡ ಏಕೈಕ ಪುರುಷ ಸದಸ್ಯರೆಂದರೆ ಡಾ.ಎಚ್.ಡಿ.ರಮೇಶ್!

ಇವರೆಲ್ಲರಿಗೂ ಪೂರಕವಾಗಿ ಜಂಟಿ ಪಾಲುದಾರಿಕೆ ಪಡೆದುಕೊಂಡಿದ್ದು ಅದೇ ರಹೇಜಾ ಫ್ಯಾಮಿಲಿಯ ಪ್ರತಿನಿಧಿ!

ನೊಂದಾಯಿತ ಕ್ರಯಪತ್ರದಲ್ಲಿಯೇ 30 ಕೋಟಿ ರೂ.ನಷ್ಟು ಆಸ್ತಿ ಮೌಲ್ಯ ನಮೂದಿಸಲಾದ ಹಾಗೂ ಸರಕಾರದ ಬೊಕ್ಕಸಕ್ಕೆ 3 ಕೋಟಿ 60 ಲಕ್ಷ ರೂಪಾಯಿನಷ್ಟು ಸ್ಟ್ಯಾಂಪ್ ತೆರಿಗೆ ಪಾವತಿಸಲಾದ ಈ ಭಾರಿ ವಹಿವಾಟಿನಲ್ಲಿ ಪಾಲ್ಗೊಂಡ 'ಸ್ತ್ರೀಶಕ್ತಿ ಗುಂಪು' ಮಾಜಿ ಪ್ರಧಾನಿಯವರ ಕುಟುಂಬದ ಮೂವರು ಸೊಸೆಯಂದಿರು, ಹಾಗೂ ಇಬ್ಬರು ಪುತ್ರಿಯರು.

ಈ ಪೈಕಿ ಹಿರಿಯ ಸೊಸೆ ಕವಿತಾ ಬಾಲಕೃಷ್ಣರವರಿಗೆ 2 ಶೇರು ಹಾಗೂ ಉಳಿದವರೆಲ್ಲರಿಗೆ ತಲಾ ಒಂದೊಂದು ಶೇರು ಎಂದು ಸೂಚಿಸಲಾಗಿತ್ತು.

ನಿವೃತ್ತ ಕೆ.ಎ.ಎಸ್. ಅಧಿಕಾರಿ ಹಾಗೂ ಸ್ಪೆಷಲ್ ಡಿ.ಸಿ. ಬಾಲಕೃಷ್ಣರವರ ಪತ್ನಿ ಕವಿತಾ, ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪತ್ನಿ ಅನಿತಾ ಹಾಗೂ ಕ್ಯಾಬಿನೆಟ್ ಸಚಿವ ರೇವಣ್ಣನವರ ಪತ್ನಿ ಭವಾನಿಯವರಾಗಲೀ ಅದು ಹೇಗೆ ಇಷ್ಟು ಬೇಗನೆ ಕೋಟ್ಯಂತರ ರೂಪಾಯಿ ಆದಾಯವುಳ್ಳ ಉದ್ಯಮದಾರರಾಗಿಬಿಟ್ಟರು?

ಅದೇ ರೀತಿ ಜಯದೇವ ಕಾರ್ಡಿಯಾಲಜಿ ಸಂಸ್ಥೆಯ ನಿರ್ದೇಶಕ ಡಾ. ಸಿ.ಮಂಜುನಾಥರ ಪತ್ನಿ ಅನುಸೂಯರವರಾಗಲೀ ಅಥವಾ ಸಂಜಯ್‌ಗಾಂಧಿ



ಶೈಲಜಾ-ಅನುಸೂಯರೊಂದಿಗೆ ದೇವೇಗೌಡ

ಆಕ್ಸಿಡೆಂಟ್ ಆಸ್ಪತ್ರೆಯ ನಿರ್ದೇಶಕ ಡಾ.ಚಂದ್ರಶೇಖರ್‌ರವರ ಪತ್ನಿ ಶೈಲಜಾರವರಾಗಲೀ ಖಾಸಗಿ ಬಿಸಿನೆಸ್ ವಲಯಕ್ಕೆ ಕಾಲಿಟ್ಟಿದ್ದಾದರೂ ಯಾವತ್ತು?

ಇವೆಲ್ಲವೂ ದೇವೇಗೌಡರ ಅಭಿಮಾನಿಗಳನ್ನೂ, ಅನುಯಾಯಿಗಳನ್ನೂ, ಹಿತೈಷಿಗಳನ್ನೂ ಇನ್ನು ಮುಂದೆ ನಿರಂತರವಾಗಿ ಕಾಡಲಿರುವ ಪ್ರಶ್ನೆಗಳೇ ಸರಿ.... ಬಹುಶಃ ಇಂತಹ ಎಲ್ಲಾ ಪ್ರಶ್ನೆಗಳಿಗೂ ಗೌಡರು ಮುಂಬರುವ ದಿನಗಳ ತಮ್ಮ ಉದ್ದೇಶಿತ "ಮಾಡು ಇಲ್ಲವೇ ಮಡಿ" ಅಭಿಯಾನದಲ್ಲಿಯೇ ಉತ್ತರ ನೀಡಲಿದ್ದಾರೇನೋ!

ಹಾಗೆಯೇ ಈ ಬಹುಕೋಟಿ ಆಸ್ತಿ ಖರೀದಿ ವ್ಯವಹಾರದಲ್ಲಿ ಸ್ವತಃ ತಮ್ಮ ಧರ್ಮಪತ್ನಿ ಅನಿತಾರ ಹೆಸರೇ ಕಾಣಿಸಿಕೊಂಡಿದ್ದರೂ ಚೀಫ್ ಮಿನಿಸ್ಟರ್ ಕುಮಾರಸ್ವಾಮಿಯವರು ಅದನ್ನೂ ಸಹ "ನನಗೆ ಸಂಬಂಧವಿಲ್ಲದ ಖಾಸಗಿ ವ್ಯವಹಾರ" ಎಂದು ನಿವಾಳಿಸಿ ಬಿಸಾಕಿಬಿಡುವರಾ?....... ಕಾದುನೋಡಬೇಕಿದೆ....

ರಿಜಿಸ್ಟ್ರೇಶನ್ ಮುಹೂರ್ತ: 10pm

ಕರ್ನಾಟಕದ ಅತ್ಯಂತ ವರ್ಚಸ್ವೀ ರಾಜಪರಿವಾರವೆನಿಸಿದ ದೇವೇಗೌಡರ ಕುಟುಂಬದ ಹೆಣ್ಣುಮಕ್ಕಳೆಲ್ಲರೂ ಸೇರಿ ಖರೀದಿಸಿದ ಕೆ.ಆರ್.ಪುರಂನ ದೊಡ್ಡನೆಕ್ಕುಂದಿ ಗ್ರಾಮದ ಈ 30 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿಯ ರಿಜಿಸ್ಟ್ರೇಶನ್ ಪ್ರಕ್ರಿಯೆ ಪೂರ್ಣಗೊಂಡದ್ದು ಎಷ್ಟೊತ್ತಿಗೆ ಗೊತ್ತೆ? ಸರಿಯಾಗಿ ರಾತ್ರಿ 10 ಗಂಟೆಗೆ! ಹಾಗಂತ ಅವತ್ತು ಕೆ.ಆರ್.ಪುರಂನ ನೊಂದಣಾಧಿಕಾರಿ ಕಚೇರಿಯ ಕಂಪ್ಯೂಟರ್‌ಗಳೇ ನಿಖರವಾಗಿ ನೊಂದಣಿ ಸಮಯವನ್ನು ದಾಖಲಿಸಿಬಿಟ್ಟಿವೆ.

ಕರೀಂಲಾಲಾ ಖೊಟ್ಟಿ ಸ್ಟ್ಯಾಂಪ್ ಪೇಪರ್ ಹಗರಣದ ಕೋಲಾಹಲದ ನಂತರ ಜಾರಿಗೊಳಿಸಲಾದ ಹಲವಾರು ಮುಂಜಾಗ್ರತಾ ಕ್ರಮಗಳ ಪೈಕಿ ಇಡೀ ಕರ್ನಾಟಕದಾದ್ಯಂತ ಸಬ್‌ರಿಜಿಸ್ಟ್ರಾರ್ ಕಚೇರಿಗಳ ಕಂಪ್ಯೂಟರ್‌ಗಳೆಲ್ಲ ಪ್ರತಿನಿತ್ಯ ಸ್ವಯಂಚಾಲಿತವಾಗಿ ತಮ್ಮ ವಹಿವಾಟನ್ನು ಸಂಜೆ ಸರಿಯಾಗಿ 5.30ಕ್ಕೆ ಬಂದ್ ಮಾಡಿಬಿಡುವುದು.

ಆದರಿಲ್ಲಿ ಸ್ವತಃ ಸಿ.ಎಂ. ಸಾಹೇಬರ ಪತ್ನಿ, ಸೋದರಿಯರು ಹಾಗೂ ಅತ್ತಿಗೆಯವರೇ ಖುದ್ದಾಗಿ ಪಾಲ್ಗೊಂಡ ವ್ಯವಹಾರವಾದ್ದರಿಂದ ಅಂದು ಕೆ.ಆರ್.ಪುರಂ ಸಬ್ ರಿಜಿಸ್ಟ್ರಾರ್‌ರವರ ಕಂಪ್ಯೂಟರ್‌ಗಳೆಲ್ಲ ತಮ್ಮ ಡ್ಯೂಟಿ ಅವಧಿಯನ್ನು ಸ್ವಯಂ ಪ್ರೇರಿತವಾಗಿ ರಾತ್ರಿ 10ರವರೆಗೂ ವಿಸ್ತರಿಸಿಕೊಂಡುಬಿಟ್ಟವು. ಬಹುಶಃ ವಿವಿಐಪಿಗಳ ಭದ್ರತಾ ದೃಷ್ಟಿಯಿಂದಲೂ ಇದು ಅನಿವಾರ್ಯವಾಗಿರಬೇಕು.... ಅಥವಾ ರಾಜಪರಿವಾರದ ಖಾಸಗಿ ವಹಿವಾಟಿನ ಗೋಪ್ಯತಾ ದೃಷ್ಟಿಯಿಂದಲೂ ಅತ್ಯಗತ್ಯವೆನಿಸಿರಬೇಕು....

ಇದೆಂತಹ ವಿಪರ್ಯಾಸ ನೋಡಿ. ಈ ಕುಟುಂಬದ ಪಿತಾಮಹ ದೇವೇಗೌಡರೇ ತಮ್ಮ ಇಡೀ 50 ವರ್ಷಗಳ ರಾಜಕೀಯ ಬದುಕಿನಲ್ಲಿ ತಮ್ಮದೇ ಸ್ವಂತ ಹೆಸರಿನ ಮನೆ ಕಟ್ಟಿಸಿಕೊಂಡು ಗೃಹ ಪ್ರವೇಶ ಮಾಡಿಕೊಂಡಿದ್ದೇ ತೀರ ಇತ್ತೀಚೆಗೆ ಅಂದರೆ 2005ರಲ್ಲಿ..... ಅಲ್ಲಿಯವರೆಗೂ ಅವರ ಮುಕ್ಕಾಮು ಒಂದಿಲ್ಲೊಂದು ಮಕ್ಕಳ ಅಥವಾ ಅಳಿಯಂದಿರ ಮನೆಗಳಲ್ಲಿಯೆ ಮುಂದುವರಿಯುತ್ತಾ ಸಾಗಿತ್ತು.

ದೇವೇಗೌಡರ ರಾಜಕಾರಣದ ಅನನ್ಯಗುಣವೇ ಇಂತಹ ಸರಳತೆ ಮತ್ತು ನಿರ್ಲಿಪ್ತತೆ ಎಂದೆನಿಸಿತ್ತು... ಆದರೆ ದುರದೃಷ್ಟವೋ, ಅದೃಷ್ಟವೋ ಅವರ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳ ಜಾಯಮಾನವೇ ತದ್ವಿರುದ್ಧವಾದದ್ದು ನೋಡಿ... ಅವರುಗಳಿಗೆಲ್ಲ ಅರ್ಜೆಂಟಾಗಿ ಅಧಿಕಾರ ಪಡೀಬೇಕು... ಅಧಿಕಾರ ಕೈಗೆಟುಕಿದಾಕ್ಷಣವೇ ಎಲ್ಲ ಪ್ರತಿಷ್ಠಿತ ಹುದ್ದೆಗಳೂ ತಮ್ಮವಾಗಬೇಕು... ಎಲ್ಲಾ ಲಾಭದಾಯಕ ದಂಧೆಗಳೂ ಕೈವಶವಾಗಬೇಕು... ಎಲ್ಲ ದುಬಾರಿ ಆಸ್ತಿಗಳೂ ತರಾತುರಿಯಲ್ಲಿ ಕೈಸೇರಬೇಕು. ಇಂತಹ ಸಕಲ ಸುಖ-ಭೋಗ-ಸಂಪತ್ತುಗಳನ್ನ ಬೆನ್ನಟ್ಟುವ ಪ್ರವೃತ್ತಿಯೇ ಕುಮಾರಣ್ಣನ ಮುಖ್ಯಮಂತ್ರಿತ್ವಕ್ಕೆ, ದೇವೇಗೌಡರ ಪ್ರತಿಷ್ಠೆಗೆ ಧಿಡೀರ್ ಸಂಚಕಾರ ತಂದೊಡ್ಡಿದೆ.

ರೇವಣ್ಣಂಗೆ ಮುನಿಯಪ್ಪ ಮುದ್ದಪ್ಪ ಮೂಗೇಟು

ಕಲ್ಮಲದ ಎಮ್ಮೆಲ್ಲೆ ಮುನಿಯಪ್ಪ ಮುದ್ದಪ್ಪ ಸುಮಾರು 12 ವರ್ಷಗಳ ನಂತರ ಮತ್ತೆ ಸುದ್ದಿಯಾಗಲಿದ್ದಾರೆ. ಹಿಂದೆ ದೇವೇಗೌಡ ಮತ್ತು ಜೆ.ಎಚ್. ಪಟೇಲರ ಮಂತ್ರಿಮಂಡಲಗಳಲ್ಲಿ ಸಚಿವರಾಗಿದ್ದ ಈ ರಾಯಚೂರು ಜಿಲ್ಲೆಯ ಅತ್ಯಂತ ಹಿಂದುಳಿದ ಕ್ಷೇತ್ರದ ಹಿಂದುಳಿದ ವರ್ಗಗಳ ನಾಯಕರಿಗೀಗ ಸಿಟ್ಟು ಬಂದಿದೆ!

ಮೊನ್ನೆ 'ಕೃಷ್ಣಾ'ದಲ್ಲಿ ಜರುಗಿದ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಹಾಜರಿದ್ದ ಕೇವಲ ಒಂದೆರಡು ಡಜನ್ ಶಾಸಕರುಗಳ ಪೈಕಿ ಒಬ್ಬರಾಗಿದ್ದ ಮುನಿಯಪ್ಪ ಮುದ್ದಪ್ಪ ಹರಿಹಾಯ್ದದ್ದು ಪವರ್ ಮತ್ತು ಪಿಡಬ್ಲ್ಯೂಡಿ ಮಿನಿಸ್ಟರ್ ಸನ್ಮಾನ್ಯ ಎಚ್.ಡಿ.ರೇವಣ್ಣನವರ ಮೇಲೆ...ಅದೂ ಅವರ ಕಿರಿಯ ಸೋದರ ಹಾಗೂ ಚೀಫ್ ಮಿನಿಸ್ಟರ್ ಕುಮಾರಣ್ಣನವರ ಸಾನ್ನಿಧ್ಯದಲ್ಲಿಯೇ!

"ರೀ ರೇವಣ್ಣನವರೇ, ನಮ್ಮ ರಾಯಚೂರು ಜಿಲ್ಲೆಯ ಜಾಯಿಂಟ್ ರಿಜಿಸ್ಟ್ರಾರ್‌ರೊಬ್ಬರನ್ನು ನಮ್ಮಲ್ಲಿಗೇ ಪೋಸ್ಟಿಂಗ್ ಮಾಡಿಸಿಕೊಡಿ ಅಂತ ನಾನು ಸರಕಾರಕ್ಕೆ ಬೇಡಿಕೊಂಡಿದ್ರೆ ನೀವು ಅವರನ್ನು ಮತ್ತೆಲ್ಲಿಗೋ ಎತ್ತಾಕಿಸಿಬಿಡೋದೇನ್ರೀ?... ಅವರ ಜಾಗಕ್ಕೆ ಮತ್ತಿನ್ಯಾರನ್ನೋ ತಂದು ಒಗದ್‌ಬಿಟ್ರು... ಹ್ಯಾಂಗ್ರೀ...." ಎಂದು ಮುನಿಯಪ್ಪ ಮುದ್ದಪ್ಪ ತಮ್ಮ ಮುನಿಸು ಪ್ರಕಟಿಸಿದರು.

ಈ ಅನಿರೀಕ್ಷಿತ ಚಾಟಿಯೇಟಿನಿಂದ ತಬ್ಬಿಬ್ಬಾದ ಮಿನಿಸ್ಟರ್ ರೇವಣ್ಣ ತಮ್ಮ ಸುಪ್ರಸಿದ್ಧ ತಡವರಿಕೆಯ ಶೈಲಿಯಲ್ಲೇ ಸಮಜಾಯಿಷಿ ಶುರು ಮಾಡಿದರು. "ಸಾರ್, ಮುನಿಯಪ್ಪನವರೇ ಒಟ್ಟು ನಾಲ್ಕು ಜನ ಜಾಯಿಂಟ್ ರಿಜಿಸ್ಟ್ರಾರ್‌ಗಳ ಪೈಕಿ ನಾನು ರೆಕಮಂಡ್ ಮಾಡಿದ್ದು ನಮ್ಮ ಹಾಸನದವರನ್ನ ಹಾಗೂ ಮತ್ತೊಬ್ರು ಪಕ್ಕದ ಡಿಸ್ಟ್ರಿಕ್‌ನವರನ್ನ ಮಾತ್ರ. ಬೆಂಗಳೂರಿನವರ್‍ದು ನಮ್ಮ ಬಾಲಕೃಷ್ಣಗೌಡ್ರು ರಿಕ್ವೆಸ್ಟ್ ಮಾಡಿದ್ರಂತೆ..." ಎಂದೆನ್ನುತ್ತ ತಮ್ಮ ಕುಟುಂಬದ ಹಿರಿಯಣ್ಣ ಹಾಗೂ ರಿಟೈರ್ಡ್ (VRS) ಸ್ಪೆಷಲ್ ಡಿಸಿ ಸನ್ಮಾನ್ಯ ಎಚ್. ಡಿ. ಬಾಲಕೃಷ್ಣಗೌಡರ (ಬಾಲಣ್ಣ) ಹೆಸರನ್ನ ಉಲ್ಲೇಖಿಸಿಬಿಟ್ರು ರೇವಣ್ಣ...



ಮುನಿಯಪ್ಪ ಮುದ್ದಪ್ಪ

ಬಾಲಣ್ಣನ ಹೆಸರೆತ್ತುತ್ತಲೇ ಮತ್ತಷ್ಟು ಉದ್ವೇಗಗೊಂಡ ಮುನಿಯಪ್ಪ "ಅದ್ಸರೀ, ಇಡೀ ಸ್ಟೇಟ್ ತುಂಬಾ ಬರೀ ನಿಮ್ಮವರ (ಬಾಲಣ್ಣನವರ) ಕ್ಲಾಸ್‌ಮೇಟ್ಸ್ ಬ್ಯಾಚ್‌ಮೇಟ್ಸ್ ಅಂತ ಇವರ್‍ದೇ ಟ್ರಾನ್ಸ್‌ಫರ್ ಸುಗ್ಗಿ ನಡದಂಗೈತಲ್ಲ... ಇದೇನಿದು ಸರಕಾರ ನಡಸ್ತಿರೋದೆಲ್ಲಾ ಬ್ಯಾಚ್‌ಮೇಟ್ಸ್, ಕ್ಲಾಸ್‌ಮೇಟ್ಸ್‌ಗಳೇ ಅಂತ ನಾವ್ ಅನ್ಕೋಬೇಕೇನ್ರೀ...." ಎಂದು ದಬಾಯಿಸಿದಾಗ ರೇವಣ್ಣನವರು ಮಂತ್ರಮುಗ್ಧರಾಗಿದ್ದರು. ಹಾಗೆಯೇ ಅವರ ಯಂಗರ್ ಬ್ರದರ್ ಕುಮಾರಣ್ಣ ಮೂಕ ಪ್ರೇಕ್ಷಕರಂತೆ ಕೂತಿದ್ದರು...

ಹಿಂದುಳಿದ ರಾಯಚೂರು ಜಿಲ್ಲೆಯ ಈ ಬ್ಯಾಕ್‌ವರ್ಡ್ ಕ್ಲಾಸ್ ಲೀಡರ್ ಮುನಿಯಪ್ಪ ಮುದ್ದಪ್ಪನವರ ಸಿಡಿ ಬಾಂಬನಿಂದ ಸ್ಫೂರ್ತಿ ಪಡೆದು ದನಿ ಗೂಡಿಸಿದವರು ಹಳೇ ಮೈಸೂರು ಕಡೆಯ ದಿಗ್ಗಜರುಗಳಾದ ಡಿ.ನಾಗರಾಜಯ್ಯ, ಎ.ಟಿ. ರಾಮಸ್ವಾಮಿ ಹಾಗೂ ಧರ್ಮೇಗೌಡ್ರು....

"ಹೌದೌದು, ಕುಮಾರಸ್ವಾಮಿಗಳೇ ನಿಮ್ಮ ಸರಕಾರದಲ್ಲಿ ಅಡ್ಮಿನಿಸ್ಟ್ರೇಷನ್ನು ಅಂದ್ರೇ ಬರೀ ಟ್ರಾನ್ಸ್‌ಫರ್ ವ್ಯವಹಾರಗಳೇ ಅಂತ ಆಡಿಕೊಳ್ಳುವಂತಾಗಿದೆ" ಎಂದು ಈ ಒಕ್ಕಲಿಗ ಬೆಲ್ಟ್ ಎಮ್ಮೆಲ್ಲೆಗಳೂ ದಮಕಿ ಹಾಕಿಯೇ ಬಿಟ್ರು...

ಹೇಗಿದೆ ನೋಡಿ ಜೆಡಿಎಸ್ ಶಾಸಕಾಂಗ ಪಕ್ಷದಲ್ಲೂ ಆಂತರಿಕ ಪ್ರಜಾಸತ್ತೆಯ ಕಹಳೆ ಮೊಳಗಿಸಿದ ಜನಾರ್ಧನ ರೆಡ್ಡಿಯ 150 ಕೋಟಿ ರೂ. ಬಾಂಬ್ ಪರಿಣಾಮ!

ಮತ್ತೆ ಮೊಳಗಿತು ಮುನಿಯಪ್ಪ ಮುದ್ದಪ್ಪನವರ ರಣಕಹಳೆ: "ಅಲ್ರೀ ರೇವಣ್ಣನವರೇ...ಕುಮಾರಣ್ಣನವರೇ... ನಾನು ಹಿಂದೆ ಜೆ.ಎಚ್. ಪಟೇಲರನ್ನ ಬಿಟ್ಟು ನಿಮ್ಮ ಫಾದರ್ ಹಿಂದೆ ಬಂದೆ... ಇತ್ತೀಚೆಗೆ ನಮ್ಮ ಸಿದ್ರಾಮಣ್ಣನ್ನೂ ಬಿಟ್ಟು ನಿಮ್ಮ ಜತೆಗೇ ಉಳಿದೆ... ನಮ್ಮಂತೋರ ಬಗ್ಗೆ ನೀವು ಕೊಡೋ ಮರ್ಯಾದೆ ಅಂದ್ರ ಇಷ್ಟೇ ಏನ್ರೀ...."

ಕರ್ನಾಟಕದ ಪವರ್ ಪಾಲಿಟಿಕ್ಸ್‌ನಲ್ಲಿ AK-47 ಎಂಬ ಹೊಸ ಗುಂಪೊಂದು ಕಾಣಿಸಿಕೊಂಡಿದೆ.

ಕುಮಾರಸ್ವಾಮಿ-ಯಡ್ಡಿ ನೇತೃತ್ವದ ಕೆಟ್ಟ ಕೋ-ಜಾ ಸರ್ಕಾರವನ್ನು ಕೆಡವಿ ಉರುಳಿಸುವುದೇ ಈ AK-47 ಏಕೈಕ ಗುರಿ ಎಂಬ ರೂಮರ್ ಬಲವಾಗಿ ಹಬ್ಬಿದೆ.

ಈ AK-47 ಅಂದರೆ ಬೇರೇನೂ ಅಲ್ಲ, ಬಜೆಪಿ ನಾಯಕ, ಸಂಸದ ಅನಂತ್‌ಕುಮಾರ್ ಅಂಡ್ 47 ಎಂಎಲ್‌ಎಗಳೆಂದು ಅರ್ಥ.

ಕೋ-ಜಾ ಸರ್ಕಾರ ರಚನೆಯಾದಾಗಿನಿಂದಲೂ ಅಸಮಾಧಾನದಿಂದ ಕುದಿಯುತ್ತಿದ್ದ AK ಜೊತೆಗೆ ಈಗ 47 ಶಾಸಕರು ಸೇರಿಕೊಂಡು ಕೊನೆಗೆ AK-47 ಆಗಿ ಸರ್ಕಾರದ ಶಿಕಾರಿಗೇ ಹೊರಡಲು ಬಜೆಪಿಯೊಳಗಿನ ಆಂತರಿಕ ಕಚ್ಚಾಟ, ಜಾತಿವಾದ, ಅಧಿಕಾರದಾಹಗಳು ಮೊದಲು ಕಾರಣವಾಗಿದ್ದವು. ಅದಕ್ಕೀಗ ಜನಾರ್ಧನ ರೆಡ್ಡಿ ಸಿಡಿಸಿದ ಬಳ್ಳಾರಿ ಗಣಿ ಬಾಂಬ್ ಇನ್ನಷ್ಟು ಪ್ರಚೋದನೆ ಕೊಟ್ಟಿದೆ. ಈ ಬಾಂಬ್ ತಯಾರಿಸಿ ಗೌಡರ ಕುಟುಂಬದ ಮೇಲೆ ಹಾಕಿಸಿದ್ದು ಸ್ವತಃ ಬಜೆಪಿಯವರೇ ಎಂಬುದೀಗ ಗುಟ್ಟಾಗಿ ಉಳಿದಿಲ್ಲ. ರಾಜ್ಯ ಬಜೆಪಿ ಅಧ್ಯಕ್ಷ ಸದಾನಂದಗೌಡರೇ ಮೊದಮೊದಲು ರೆಡ್ಡಿಯನ್ನು ಸಮರ್ಥಿಸಿ ಮಾತನಾಡಿದ್ದು ಇತ್ತೀಚೆಗೆ ದೇವೇಗೌಡರೇ ಪತ್ರಿಕಾ ಹೇಳಿಕೆ ಕೊಟ್ಟು ಬಜೆಪಿಯೇ ಈ ಗಲಾಟೆಗಳಿಗೆ ಕಾರಣ ಎಂದು ರೋಷಾವೇಶದಿಂದ ಬಯ್ದಿದ್ದರಲ್ಲವೆ? ಇಂತಾ ಘಟನೆಗಳಿಗೆ ಪ್ರಚೋದನೆ ನೀಡಿರುವುದೇ ಈ AK-47 ಗುಂಪು.

ಗೌಡರ ಬೆನ್ನಿಗೇ ಬಜೆಪಿ ಚೂರಿ

ಕಾಂಗ್ರೆಸ್ ಸಖ್ಯ ಮುಂದುವರೆಸಿದರೆ ಉಳಿಗಾಲವಿಲ್ಲ ಎಂದು ಭಾವಿಸಿ ಕೋಮುವಾದಿ ಬಜೆಪಿಗಳ ಜೊತೆ ಸೇರಿಕೊಂಡ ದೇವೇಗೌಡರಿಗೀಗ ಬಾಣಲೆಯಿಂದ ಬೆಂಕಿಗೆ ಹಾರಿದ ಶೋಚನೀಯ ಪರಿಸ್ಥಿತಿ ಎದುರಾಗಿದೆ.

ಸ್ವತಃ ಮೈತ್ರಿ ಸರ್ಕಾರದ ಅಂಗಪಕ್ಷವಾಗಿರುವ ಬಜೆಪಿಯ ಜನಾರ್ಧನ ರೆಡ್ಡಿ ಗಣಿ ಲಂಚದ ಹಗರಣ ಬಯಲು ಮಾಡಿದ ನಂತರ ಇಕ್ಕಟ್ಟಿಗೆ ಸಿಲುಕಿದ್ದು ಗೌಡರ ಕುಟುಂಬ. ಇದರ ಹಿಂದೆಯೇ ಉಡುಪಿ ಸಂಸದೆ ಮನೋರಮಾ ಮಧ್ವರಾಜ್ ಸಹ ನಾಗಾರ್ಜುನ ಉಷ್ಣ ವಿದ್ಯುತ್ ಯೋಜನೆ ವಿರೋಧಿಸುತ್ತಾ 'ಅದರಲ್ಲೂ ಗೌಡ ಲಂಚ ಹೊಡೆದಿದ್ದಾರೆ' ಎಂದು' ಬಹಿರಂಗ ಸಭೆಯಲ್ಲೇ ಆರೋಪಿಸಿದ್ದಾರೆ. ಮನೋರಮಾ ಹಾಗೆಂದ ಮೇಲೂ ರಾಜ್ಯ ಬಜೆಪಿ ಆಕೆಯ ಮೇಲೆ ಒಂದಕ್ಷರದ ಶಿಸ್ತು ಕ್ರಮವನ್ನೂ ಜರುಗಿಸಿಲ್ಲವೆಂದರೆ ಏನರ್ಥ? ಅಷ್ಟೇ ಅಲ್ಲ, ಜನಾರ್ಧನ್ ರೆಡ್ಡಿಯನ್ನು ಪಾರ್ಟಿಯಿಂದ ಸಸ್ಪೆಂಡ್ ಮಾಡಿ ಶೋಕಾಸ್ ನೋಟೀಸ್ ನೀಡಲಾಗಿದೆ. ಇದಕ್ಕೆ ರೆಡ್ಡಿ ಉತ್ತರ ನೀಡಲು ಜುಲೈ 28 ರ ಶುಕ್ರವಾರವೇ ಕೊನೆ ದಿನವಾಗಿತ್ತು.

ಆದರೆ ರೆಡ್ಡಿ ಆ ನೋಟಿಸನ್ನು ಮೂಸಿಯೂ ನೋಡದೆ ಕುರ್ಚಿ ಕೆಳಗೆ ಹಾಕಿಕೊಂಡು ಏನು ಮಾಡಿದ್ದಾರೆ ಗೊತ್ತೆ?

ಬಳ್ಳಾರಿಯಲ್ಲೇ ಕುಳಿತು ತನ್ನ ಪರವಾಗಿರುವ ಬಜೆಪಿ ಶಾಸಕರ ಪ್ರತ್ಯೇಕ ಸಭೆ ನಡೆಸಿದ್ದಾರೆ. ಜುಲೈ 27-28 ರಂದು ಎರಡು ದಿನ ನಡೆದ ಈ ಸಭೆಗೆ ಬಜೆಪಿಯ ಕನಿಷ್ಠ 20 ಶಾಸಕರು ಬಂದು ಹೋಗಿದ್ದಾರೆಂಬುದೇ ಪಾರ್ಟಿಯೊಳಗೆ ರೆಡ್ಡಿಗಿರುವ ಬೆಂಬಲ ಎಷ್ಟೆಂದು ತಿಳಿಯುತ್ತದೆ.




ಬಜೆಪಿಯೊಳಗೆ ಇದ್ದುಕೊಂಡು ರೆಡ್ಡಿ ಇಷ್ಟೆಲ್ಲ ಆಟ ಆಡಲು ಅವಕಾಶ ಮಾಡಿಕೊಡುತ್ತಿರುವುದೇ ಯಡ್ಡಿ ವಿರೋಧಿ ಬಣ.


ಆಂತರಿಕ ಕಚ್ಚಾಟ

ಕೋ-ಜಾ ಸರ್ಕಾರ ರಚನೆಯಾಗುವಾಗ ಥ್ರಿಲ್ ಆಗಿ ಸಂಭ್ರಮಿಸಿದ್ದ ಬಹುತೇಕ ಬಜೆಪಿ ಪ್ರಮುಖ ನಾಯಕರೀಗ AK-47 ಗುಂಪಿನಲ್ಲಿದ್ದಾರೆ. ಮಂತ್ರಿಗಿರಿ ಸಿಗದಿರುವುದು, ಬಯಸಿದ ಕೆಲಸ ಆಗದಿರುವುದೇ ಇದಕ್ಕೆ ಪ್ರಮುಖ ಕಾರಣಗಳಾಗಿವೆ.


ಕೋ-ಜಾ ವಿರುದ್ಧ AK 47







ಯಡ್ಡಿ, ಈಶ್ವರಪ್ಪ, ರಾಮಚಂದ್ರಗೌಡ, ವಿ.ಎಸ್. ಆಚಾರ್ಯ, ಶಂಕರಮೂರ್ತಿಗಳು ಜೊತೆಯಲ್ಲೇ ಮಂತ್ರಿಗಳಾಗುವ ಕನಸು ಕಂಡಿದ್ದ ಮುಖ್ಯಮಂತ್ರಿ ಚಂದ್ರು, ಅರವಿಂದ ಲಿಂಬಾವಳಿ, ಆನೇಕಲ್ ನಾರಾಯಣಸ್ವಾಮಿ ಮುಂತಾದವರನ್ನು ಯಡ್ಡಿ ಗುಂಪು ಮೂಲೆಗೆ ತಳ್ಳಿತ್ತು. ಈಗಲೂ ಸಹ ಈ ಅತೃಪ್ತರ ಬಣದವರು ಹೇಳಿದ ಕೆಲಸ ಮಾಡಿಕೊಡುತ್ತಿರುವುದು ಸಚಿವರುಗಳಾದ ಕಟ್ಟಾನಾಯ್ಡು ಹಾಗೂ ಗೋವಿಂದ ಕಾರಜೋಳ ಮಾತ್ರ. ಯಡ್ಡಿ ಗುಂಪಿನ ಸಚಿವರು AK-47 ಗುಂಪಿನವರನ್ನು ಹತ್ತಿರಕ್ಕೂ ಬಿಟ್ಟುಕೊಳ್ಳುತ್ತಿಲ್ಲ. ಯಡ್ಡಿಯಂತೂ ಸರ್ಕಾರದ ಅಥವಾ ಪಾರ್ಟಿ ಕೆಲಸ ಎರಡನ್ನೂ ಮಾಡದೆ "ಕುಮಾರಸ್ವಾಮಿ ಲಂಚ-ಮೋಸ ಎಲ್ಲಾ ಮಾಡ್ತಾರೆಂದು ನಾನು ಕನಸಿನಲ್ಲೂ ನಂಬಲ್ಲ" ಎಂದು ಹೇಳಿಕೆ ನೀಡಿರುವುದು ಬಜೆಪಿಯ AK-47 ಗುಂಪಿನ ಸಿಟ್ಟು ಕೆರಳಿಸಿದೆ. ರೆಡ್ಡಿ ಮಾಡಿರುವ ಈ ಆರೋಪ ಸಾಬೀತಾದರೆ ನಾಳೆ ಪಕ್ಷದ ಮರ್ಯಾದೆ ಉಳಿಯುವುದಿಲ್ಲವೆಂಬ ಭೀತಿ ಅವರದ್ದು. ಅಧ್ಯಕ್ಷ ಸದಾನಂದ ಗೌಡರಿಗೆ ಅದೇ ನಿಲುವಿದೆ. ಹಾಗಾಗೆ ಗೌಡರನ್ನೇ ಟೀಕಿಸಿದ ಸದಾನಂದ ಗೌಡ ಈಗ 'ಗಣಿ ಅಕ್ರಮ ತನಿಖೆಯಲ್ಲಿ 150 ಕೋಟಿ ರೂಪಾಯಿ ಲಂಚದ ವಿಷಯವನ್ನು ಸೇರಿಸಬೇಕೆಂದು' ಒತ್ತಾಯಿಸಿದ್ದಾರೆ.



ರಾಜ್ಯ ಬಜೆಪಿಯೊಳಗೆ ಕೋ-ಜಾ ಗುಂಪು, AK-47 ಗುಂಪು, [illegible] ಗುಂಪು ಸಣ್ಣ ಸೀಳುಗಳು ಕಾಣುತ್ತಿವೆ. ಈ ಗದ್ದಲದಲ್ಲೇ ದೇವೇಗೌಡರು ಬಜೆಪಿ ಶಾಸಕರಾದ ಹೊನ್ನಾಳಿ ರೇಣುಕಾಚಾರ್ಯ ಹಾಗೂ ಕಳ್ಳುಬೆಳ್ಳದ ಕಿರಣ್‌ಕುಮಾರ್‌ರನ್ನು ಕರೆಸಿ ಮಾತಾಡಿ ತಲೆ ಸವರಿ ಕಳುಹಿಸಿರುವ ಸುದ್ದಿ ಬಜೆಪಿಯೊಳಗೇ ತಳಮಳ ಉಂಟು ಮಾಡಿದೆ.

AK-47 ಲೆಕ್ಕಾಚಾರಗಳು

ಆರು ತಿಂಗಳು ಉಪಮುಖ್ಯಮಂತ್ರಿ ಅನ್ನಿಸಿಕೊಂಡ ಯಡಿಯೂರಪ್ಪನವರನ್ನು 'ಸಾಕು ನೀವು ಮಾಡಿದ ಉಪಕಾರ, ಇನ್ನು ಸೈಲೆಂಟಾಗಿ ಕೂತೀರಿ' ಎಂದು ಮೂಲೆಗುಂಪು ಮಾಡುವುದು, ಯಡ್ಡಿ-ಕರಂದ್ಲಾಜೆ ಬಗ್ಗೆ ಮುಕ್ತಾ ಸೀರಿಯಲ್‌ನಂತೆ ಎಂದೂ ಮುಗಿಯದ ಪುಕಾರುಗಳನ್ನು ತೇಲಿ ಬಿಡುವುದೂ ಇದರಲ್ಲಿದೆ. ಸಮ್ಮಿಶ್ರ ಸರ್ಕಾರ ಇದ್ದಾಗಲೇ ದೇವೇಗೌಡ ಅಂಡ್ ಸನ್ಸ್ ಅರ್ಥಾತ್ ಜೆಡಿಎಸ್ ವಿರುದ್ಧ ನಿರಂತರವಾಗಿ ಹಗರಣಗಳು ಬೆಳಕಿಗೆ ಬರುವಂತೆ ನೋಡಿಕೊಂಡು ಜನ 'ಥೂ, ಛೀ' ಎನ್ನುವಂತೆ ಮಾಡುವುದು, ಮುಂದೆ ಎಲೆಕ್ಷನ್ ಬಂದಾಗ ಕಾಂಗ್ರೆಸ್‌ಗೆ ಏಕೈಕ ಪ್ರಬಲ ಪ್ರತಿಸ್ಪರ್ಧಿ ಪಕ್ಷವಾಗಿರುವಂತೆ ಕಟ್ಟುವುದು.... ಇವಿಷ್ಟು AK-47 ನ ಭವಿಷ್ಯದ ಯೋಜನೆಗಳು.

ದೇವೇಗೌಡ ಕುಟುಂಬ 'ತಾವು ಪರಿಶುದ್ಧಾತ್ಮರು....' ಎಂದು ಶಂಖ ಊದುತ್ತಿದ್ದಾಗಲೇ ಅವರ ಕುಟುಂಬದ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯ ಅಕ್ರಮ ದಂಧೆಗಳ ಬಗ್ಗೆ 'ಲಂಕೇಶ್' ತನಿಖಾ ವರದಿ ಪ್ರಕಟಿಸಿತು. ನಂತರ ಕಾಂಗ್ರೆಸ್ಸಿನ ಡಿಕೆಶಿ ಅದೇ ದಾಖಲೆಗಳನ್ನೇ ಪತ್ರಿಕಾಗೋಷ್ಠಿಯಲ್ಲಿ ಪ್ರದರ್ಶಿಸಿದ್ದರಲ್ಲ, ಅವನ್ನೆಲ್ಲಾ ವ್ಯವಸ್ಥಿತವಾಗಿ ಸಂಗ್ರಹಿಸಿ ಮಾಧ್ಯಮದವರಿಗೆ, ಗೌಡರ ವಿರೋಧಿಗಳಿಗೆ ತಲುಪಿಸುತ್ತಿರುವವರೂ ಇವರೆ, ಅರ್ಥಾತ್ ಬಜೆಪಿಯೊಳಗಿನ ಕೋ-ಜಾ ಗುಂಪಿನ ವಿರೋಧಿಗಳಾದ ಜನಾರ್ಧನ ರೆಡ್ಡಿ ಅಂಡ್ AK-47 ಬಣಗಳು!

ಆದರೆ ಯಡ್ಡಿ ಮಾತ್ರ ತಮ್ಮ ಅಧಿಕಾರದ ಕೊನೆ ದಿನಗಳು ಹತ್ತಿರ ಬಂದೇ ಬಿಟ್ಟತೇನೋ ಎಂಬ ಭೀತಿಯಿಂದ ಮೊನ್ನೆ ಅರ್ಜೆಂಟಾಗಿ ಕೇರಳಕ್ಕೆ ಹೋಗಿ ಬಂದಿದ್ದಾರೆ. ಹೋಮ ಯಜ್ಞ ನೆರವೇರಿಸಲು ಜೊತೆಯಲ್ಲಿ ಶೋಭಾ ಕರಂದ್ಲಾಜೆಯೂ ಇದ್ದರೆನ್ನುತ್ತಾರೆ.

ಚೆನ್ನಿಗಪ್ಪನಿಗೆ ಮಾನ ಮರ್ಯಾದೆ ಇಲ್ಲವೆ?

ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದ ವಿಚಾರ ಇದು. ಈಗ ಸರ್ಕಾರವೇ ಜನಾರ್ಧನ ರೆಡ್ಡಿ ವಿರುದ್ಧ ಹಾಕಿರುವ ಮಾನನಷ್ಟ ಕೇಸ್‌ನಲ್ಲಿ ಕೇವಲ ಕುಮಾರಸ್ವಾಮಿ ಹಾಗೂ ಎಂ.ಪಿ. ಪ್ರಕಾಶ್ ಹೆಸರನ್ನು ಮಾತ್ರ ಸೇರಿಸಲಾಗಿದೆ. ಚೆನ್ನಿಗಪ್ಪ ಹೆಸರು ಸೇರಿಸಿಲ್ಲ! ಅರ್ಥಾತ್ ಇವರಿಬ್ಬರಿಗೆ ಮಾತ್ರ ಮಾನ-ಮರ್ಯಾದೆಯಿದ್ದು ಅದು ಈಗ ನಷ್ಟವಾಗಿದೆ ಎಂದಾಯಿತು.

ಹಾಗಾದರೆ ಹಾಲಿ ಅರಣ್ಯ ಸಚಿವ ಚೆನ್ನಿಗಪ್ಪನಿಗೆ ನಷ್ಟವಾಗಲು ಮಾನ ಮರ್ಯಾದೆಯೇ ಇರಲಿಲ್ಲ ಎಂದರ್ಥವೇ?




ಮಾಜಿ ಪೊಲೀಸ್ ಪೇದೆ ಚೆನ್ನಿಗಪ್ಪ ದಶಕಗಳಿಂದಲೂ ದೇವೇಗೌಡರ ಪಾದಸೇವೆ ಮಾಡಿಕೊಂಡು ಬಂದಿರುವ ವ್ಯಕ್ತಿ. ಈತನದೊಂದು ರೀತಿ ಗುಲಾಮನಿಷ್ಠೆ.

ಗೌಡರು ಕೂರು ಅಂದರೆ ಕಾಲ ಬಳಿಯೇ ಕೂರುವ, ನಿಂತ್ಕೊ ಅಂದೇಟಗೆ ಕೈಕಟ್ಟಿ ನಿಲ್ಲುವ ಚೆಲ್ರೆ ಚೆನ್ನಿಗಪ್ಪನಿಗೆ 'ಹೋಗಿ ಡಿಕೆ ಏರಿಯಾದಲ್ಲಿ ಗಲಾಟೆ ಮಾಡು' ಅಂದೇಟಗೆ ಕನಕಪುರಕ್ಕೆ ಹೋಗಿ 'ಧನಿಖೆ' ಮಾಡಿ ಬಂದಿದ್ದರು ಮಿಸ್ಟರ್ ಚೆನ್ನಿಗಪ್ಪ, ಅವತ್ತು ಇಂಟರ್‌ನ್ಯಾಷನಲ್ ಗ್ರಾನೈಟ್ ಸ್ಮಗಲರ್ ಡಿಕೆ ಕುಂಡೆ ಮೇಲೆ ಕೋ-ಜಾ ಸರ್ಕಾರ ಜಾಡಿಸಿ ಒದ್ದಿತ್ತು, ಅದೇ ಹುಮ್ಮಸ್ಸಿನಿಂದ ರೆಡ್ಡಿಗಳನ್ನು ಹಣಿಯಲು ಬಳ್ಳಾರಿಗೂ ಹೋಗಿ ಕಾಸಿಗೆ ಡಿಮ್ಯಾಂಡ್ ಮಾಡಿದ್ದಾರೆ. ಹಣವೇನೊ ಬಂತು. ಆದರೆ ಕೇಳಿದೋನು ಚೆನ್ನಿಗಪ್ಪ, ಅವರ ಬಾಯಲ್ಲಿ ಕೇಳಿಸಿ ಸೂಟ್‌ಕೇಸ್ ತನ್ನ ಕೈಗೆ ತಗೊಂಡೋನು ಮಾತ್ರ ಗೌಡರ ಪುತ್ರ ರಮೇಶಪ್ಪ. ಈಗ ಮಾನನಷ್ಟ ಪ್ರಕರಣದಲ್ಲಿ ಚೆನ್ನಿಗಪ್ಪನ ಪರ ಸರ್ಕಾರ ಕೇಸ್ ಹಾಕದಿರಲು ಇರುವ ಕಾರಣ ಒಂದೇನೆ....

ಅದು ಈ ಪ್ರಕರಣ ಬಿಗಡಾಯಿಸಿಕೊಂಡರೆ ಚೆನ್ನಿಗಪ್ಪನನ್ನು ಬಲಿಕೊಟ್ಟು ಮಂತ್ರಿಗಿರಿಯಿಂದ ಓಡಿಸುವುದು. ಕುಮಾರಸ್ವಾಮಿ ಕುರ್ಚಿ ಉಳಿಸಲು ಗೌಡರು ಕಂಡುಕೊಂಡಿರುವ 'ತುರ್ತು ನಿರ್ಗಮನ'ದ ದಾರಿ ಇದು. [illegible] ಆ ತುರ್ತು ನಿರ್ಗಮನ ಕಿಂಡಿಯಿಂದ ಆಚೆ ನೂಕಿಸಿಕೊಳ್ಳುವುದು ಮಾತ್ರ, ಗೌಡರ [illegible] ಚೆನ್ನಿಗಪ್ಪ, ಅದಕ್ಕೆ ಚೆನ್ನಿಗಪ್ಪನ ಮಾನ-ಮರ್ಯಾದೆ ಬಗ್ಗೆ ಗೌಡರ ಫ್ಯಾಮಿಲಿ ಕೇರ್ [illegible]

ಮರಸು ಒಕ್ಕಲಿಗರ ಮೇಲೆ ಐರನ್ ಲೆಗ್



ಆಲಂಗೂರ್ ಶ್ರೀನಿವಾಸ್

ಪಾಪ, ದೇವೇಗೌಡರ ಕಷ್ಟಗಳಿಗೆ ಕೊನೆ ಮೊದಲಿರುವಂತಿಲ್ಲ, ಒಂದು ಕಡೆ ಕಾಂಗ್ರೆಸ್‌ನವರ ಕಿರುಕುಳ, ಮತ್ತೊಂದೆಡೆ ಮಿತ್ರ ಪಕ್ಷ ಬಜೆಪಿಯವರೇ ಒಳಗೊಳಗೇ ಫಿಟ್ಟಿಂಗ್ ಇಡುತ್ತಿರುವ ಈ ವಿಷಗಳಿಗೆಯಲ್ಲೂ ಸ್ವತಃ ದೇವೇಗೌಡರೇ ಮರಸು ಒಕ್ಕಲಿಗರನ್ನು ಎದುರು ಹಾಕಿಕೊಂಡಿದ್ದಾರೆ.

ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮರಸು ಒಕ್ಕಲಿಗರನ್ನು ಈಗಿನ ಕೋ-ಜಾ ಸರ್ಕಾರದ ಹತ್ತಿರಕ್ಕೂ ಗೌಡರು ಬಿಟ್ಟುಕೊಂಡಿಲ್ಲ.

ಧರಂಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಕೋಲಾರದ ಕೆ. ಶ್ರೀನಿವಾಸಗೌಡ ಹಾಗೂ ಆರ್. ಶ್ರೀನಿವಾಸ್ ಮಂತ್ರಿಗಳಾಗಿದ್ದರು. ನಂತರ ಕಾಂಗ್ರೆಸ್‌ಗೆ ಕೈಕೊಟ್ಟು ಹಿಂದೂ ಕೋಮುವಾದಿಗಳೊಂದಿಗೆ ಕೈಜೋಡಿಸಿದ ದೇವೇಗೌಡರು ತಮ್ಮ ಪುತ್ರರತ್ನರು ಮುಖ್ಯಮಂತ್ರಿ, ಮಂತ್ರಿಗಳಾಗುವಂತೆ ನೋಡಿಕೊಂಡರಲ್ಲದೇ ಗಂಗಟಕಾರ ಒಕ್ಕಲಿಗ ಸಮುದಾಯದಿಂದ ಚೆನ್ನಿಗಪ್ಪ, ಚೆಲುವರಾಯಸ್ವಾಮಿಯನ್ನು ಮಂತ್ರಿ ಮಾಡಿದರು. ಆದರೆ ಒಬ್ಬಾನೊಬ್ಬ ಮರಸು ಒಕ್ಕಲಿಗ ಮುಖಂಡನಿಗೆ ಅಧಿಕಾರ ಕೊಡಲಿಲ್ಲ. ಹಾಲಿ ಶಿಡ್ಲಘಟ್ಟ ಶಾಸಕ ಮುನಿಶಾಮಿ ಹಾಗೂ ಮುಳಬಾಗಿಲಿನ [illegible] ಶ್ರೀನಿವಾಸ್ ಜೆಡಿಎಸ್‌ನಿಂದ ಶಾಸಕರಾಗಿದ್ದರೂ ಅವರುಗಳಿಗೆ ಮಂತ್ರಿ, ಪದವಿ ಬಿಡಿ, ಪಾರ್ಟಿ ಪದಾಧಿಕಾರಿ ಸ್ಥಾನವನ್ನೂ ಗೌಡರು ಕೊಟ್ಟಿಲ್ಲ. [illegible] ಮರಸು ನಾಯಕರಾದ ಉತ್ತರಹಳ್ಳಿ ಎಂ. ಶ್ರೀನಿವಾಸ್, [illegible] ಗಂಟಿಗಾನಹಳ್ಳಿ ಕೃಷ್ಣಪ್ಪ, ಹೊಸಕೋಟೆಯ ಬಿ.ಎನ್. ಬಚ್ಚೇಗೌಡ, ಆರ್. ಶ್ರೀನಿವಾಸ್ [illegible]



ಬಚ್ಚೇಗೌಡ

ಕೋಟಿ ಕದ್ದ ಯೇಸು ರಾಜನ್ ಗಾಯಬ್!

ಹಾಸನದ ಜನರಿಗೆ ಯೇಸು ಡೇವಿಡ್ ರಾಜನ್ 50 ಲಕ್ಷ ಬತ್ತಿ ಇಟ್ಟು ಗಾಯಬ್ ಆಗಿದ್ದಾನೆ. ರಾಜನ್ ಮಿತ್ರನಾಗಿದ್ದ ಮೋಹನನ ಬುಡ ಅಲ್ಲಾಡತೊಡಗಿದೆ. ಈ ಇಬ್ಬರು ಠಗರು ಯೇಸು ಭಕ್ತರ ಕಂತ್ರಿ ಬುದ್ಧಿಗೆ ಬಲಿಯಾದ ನೂರಾರು ಕುಟುಂಬಗಳು ಇನ್ನೂ ತೊಳಲಾಡುತ್ತಲೇ ಇವೆ.




ರಾಜನ್ ಕುಟುಂಬ

"ಹಿಂದೂ ದೇವರನ್ನು ನಂಬಬೇಡಿ. ಹಿಂದೂ ದೇವರ ಫೋಟೋ ಸುಟ್ಟಾಕಿ! ಬೆಳಗ್ಗೆ ಐದಕ್ಕೆ ಎದ್ದು ಯೇಸುವಿನ ಪ್ರೇಯರ್ ಮಾಡಿ. ಸಾಬರೂ ಯೇಸು ಭಕ್ತರಾಗಿ" ಎನ್ನುತ್ತ ಬಡ ದಲಿತ ಕುಟುಂಬಗಳನ್ನು ತನ್ನತ್ತ ಸೆಳೆಯುತ್ತಿದ್ದ ಒಕ್ಕಲಿಗ ಮೋಹನ್‌ನಿಗೆ ಇದೆಲ್ಲ ಹಣ ಗಳಿಸುವ ದಂಧೆಯಾಗಿತ್ತೇ ಹೊರತು ಬಡವರ ಉದ್ಧಾರವಲ್ಲ.

ಅವತ್ತು ಪೊರ್ಕಿ

ಬಡ ಒಕ್ಕಲಿಗ ಕುಟುಂಬದಿಂದ ಬಂದ ಮೋಹನನ ತಲೆಗೆ ಅಕ್ಷರಗಳು ಹೊಕ್ಕಲೇ ಇಲ್ಲ. ಊರ ತುಂಬ ಸಾಲ ಮಾಡುತ್ತಾ ತಿರುಗುತ್ತಿದ್ದವನಿಗೆ ಏಕಾಏಕಿ ಮನೆಹಾಳ ಐಡಿಯಾವೊಂದು ತಲೆ ಹೊಕ್ಕಿತು. ಶಿಲುಬೆ ಕೊರಳಿಗೇರಿಸಿಕೊಂಡವನೇ 'ನಾನೀಗ ಕ್ರಿಶ್ಚಿಯನ್' ಎಂದು ಏನೇನೋ ಗಿಮಿಕ್ ಮಾಡಿದ. ನೋಡು ನೋಡುವುದರೊಳಗೇ ಕೋಟಿ ವೀರನಾಗಿ ಹೋದ. ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಎಳೆದು 'ಯೇಸು ಸ್ವಾಮಿ, ಯೇಸು ಸ್ವಾಮಿ' ಎಂದು ಹಲುಬುತ್ತಿದ್ದ. ಪರಿಚಯ ಆದವರಿಗೆಲ್ಲ ಬೆಳಗ್ಗೆ 4ಕ್ಕೇ ಫೋನ್ ಹಚ್ಚಿ 'ಪ್ರೇಯರ್, ಪ್ರೇಯರ್' ಎಂದು ತಲೆ ತಿನ್ನುತ್ತಿದ್ದ ಮೋಹನ, ಇವತ್ತು ಯಾರಾದರೂ ಫೋನ್ ಮಾಡಿದರೆ ಉತ್ತರಿಸುವ ಸ್ಥಿತಿಯಲ್ಲಿಲ್ಲ. ಕಾರಣ ಇನ್ನೊಬ್ಬ ಯೇಸು ಡೇವಿಡ್ ರಾಜನ್ ಇಟ್ಟ ಬತ್ತಿಯ ಹೊಡೆತಕ್ಕೆ ತತ್ತರಿಸಿ ಹೋಗಿದ್ದಾನೆ.



ಯೇಸು ಮೋಹನ್

ಕೆಲಸದ ಹೆಸರಲ್ಲಿ ಕಾಸೆತ್ತಿದ

ಪ್ರೇಯರ್‌ಗೆ ಬಂದವರ ಮಕ್ಕಳಿಗೆಲ್ಲ FDA, SDA ಕೆಲಸ ಕೊಡಿಸುವುದಾಗಿ ನಂಬಿಸಿ ತಲಾ 2ರಿಂದ 3ಲಕ್ಷ ಕಾಸು ಎತ್ತಿದ. ಸ್ನೇಹಿತ ಡೇವಿಡ್ ರಾಜನ್‌ನನ್ನು ತೋರಿಸಿ, 'ಸಾಕ್ಷಾತ್ ಯೇಸು ಈತ' ಎಂದು ರೀಲ್ ಬಿಟ್ಟ. ಸರ್ಕಾರಿ ಕೆಲಸದ ಕನಸಲ್ಲಿದ್ದ ಜನ ಇದ್ದ ಬದ್ದ ದುಡ್ಡನ್ನೆಲ್ಲ ತಂದು ಮೋಹನನ ಕೈಗಿತ್ತರು. ಆದರೆ ಯಾವನಿಗೂ ಕೆಲಸ ಸಿಗಲಿಲ್ಲ. ಜನ ಚೆನ್ನತ್ತಿದಾಗ 'ಔಟ್ ಸ್ಟೇಷನ್‌ಗೆ ಪ್ರೇಯರ್‌ಗೆಂದು ಹೋಗಿದ್ದೆ. ಸ್ವಲ್ಪ ತಡೀರಿ' ಎಂದು ಕತೆ ಕಟ್ಟಿದ. ಈ ಸಮಯಕ್ಕೇ ಕಾದಂತಿದ್ದ ಮಿತ್ರ, ಯೇಸುವಿನ ಪೀಸ್ ಡೇವಿಡ್ ರಾಜನ್ 50 ಲಕ್ಷ ರೂ.ಗಳೊಂದಿಗೆ ಫ್ಯಾಮಿಲಿ ಸಮೇತ ರೈಟ್ ಹೇಳಿಬಿಟ್ಟ. ಈಗ ಮೋಹನ ಕಾಸಿಲ್ಲದ ಪರದೇಸಿಯಾಗಿದ್ದಾನೆ. ಯಾಕೆಂದರೆ ಸ್ವತಃ ಅವನ ಸಹೋದರರೇ ಅವನನ್ನು ಕೇರ್ ಮಾಡುತ್ತಿಲ್ಲ, ಮಾಡುವುದೂ ಇಲ್ಲ!

ಯಾರಿವನು ಯೇಸು ರಾಜನ್?


ನಾಲ್ಕು ವರ್ಷಗಳ ಹಿಂದೆ ಹಾಸನಕ್ಕೆ ವಕ್ಕರಿಸಿದವನೇ ಈ ಡೇವಿಡ್ ರಾಜನ್ ಅಲಿಯಾಸ್ ಜಾರ್ಜ್ ಎಡ್ವಿನ್ ರಾಜನ್. ಇವನಿಗೆ ಕರೆದು ಆಶ್ರಯ ಕೊಟ್ಟವನೇ ಈ ಪೊರ್ಕಿ ಮೋಹನ. ಹೆಂಡತಿ, ಮಕ್ಕಳೊಂದಿಗೆ ಐಷಾರಾಮಿ ಜೀವನ ಸಾಗಿಸುತ್ತ, ಮನೆ ಬದಲಿಸುತ್ತ ಬಂದ ರಾಜನ್ ಕೊನೆಗೆ ರಾಷ್ಟ್ರೀಯ ಹೆದ್ದಾರಿಯ ಎಕ್ಸಿಕ್ಯೂಟಿವ್ ಇಂಜಿನಿಯರ್, ರಸ್ತೆಗಳ್ಳ ಸೋಮಶೇಖರನ ಭವ್ಯ ಬಂಗಲೆಗೆ ಬಂದು ವಾಸಕ್ಕೆ ನಿಂತ. ಅಲ್ಲಿಂದಲೇ ಶುರುವಾಯ್ತು ರಾಜನ್‌ನ ಕಂತ್ರಿ ಎಂಪ್ಲಾಯ್‌ಮೆಂಟ್ ಬ್ಯುಸಿನೆಸ್ಸು. ತನ್ನ ಭಾವ ಮೈದುನ ಲಂಡನ್ನಿನಲ್ಲಿ ಚಿನ್ನದ ವ್ಯಾಪಾರಿ ಎಂದೂ ರೀಲ್ ಸುತ್ತಿದ. ಶಿಕ್ಷಣ ಸಂಸ್ಥೆಗಳಿಗೆ ಫಾರಿನ್ ಫಂಡ್ ಕೊಡಿಸುವೆನೆಂದ. ರೇವಣ್ಣ ನಂಗೆ ಫುಲ್ ಕ್ಲೋಸ್, ಯಾವ ಕೆಲಸ ಬೇಕು ಹೇಳಿ ಎಂದು ಜನರನ್ನು ಯಾಮಾರಿಸಿಬಿಟ್ಟ. ಮೈಸೂರಿನ ಮೂಡಾ ಸೈಟು, ಬೆಂಗಳೂರಿನ ಬಿಡಿಎ ಸೈಟು ಕೊಡಿಸುವುದಾಗಿ ಹೇಳಿ ಶ್ರೀಮಂತರಿಂದ ಲಕ್ಷ ಲಕ್ಷ ಕಾಸು ಎತ್ತಿದ. ಸಾಥಿಯಾಗಿ ಮೋಹನನಿದ್ದ.

ಹಾಸನ

ಈಗ್ಗೆ 15 ದಿನಗಳ ಹಿಂದೆ ರಾತ್ರೋರಾತ್ರಿ ರಾಜನ್ ನಾಪತ್ತೆಯಾದ! ಕಾಸು ಕೊಟ್ಟ ಸಿರಿವಂತರು ಚಡ್ಡಿಯೊಳಗೆ ಇರುವೆ ಬಿಟ್ಟುಕೊಂಡವರಂತೆ ಓಡಾಡುತ್ತ ರಾಜನ್ ಪತ್ತೆಗೆ ದೇಣಿಗೆ ಸಂಗ್ರಹಿಸುತ್ತಿದ್ದಾರೆ.

ಯಾರ್‍ಯಾರ ದುಡ್ಡು?

ಮೋಹನನನ್ನು ನಂಬಿದ್ದ ಹಾಸನದ ಸ್ಟಾಂಪ್ ವೆಂಡರ್ ಕೃಷ್ಣೇಗೌಡರು ನೆಂಟರು, ಬೀಗರಿಗೆಲ್ಲ FDA ಕೆಲಸ ಕೊಡಿಸುತ್ತೇನೆಂದು ಹೇಳಿ, ಅನಾಮತ್ತು 10 ಲಕ್ಷ ಸಂಗ್ರಹಿಸಿ ಮೋಹನನ ಕೈಗಿತ್ತಿದ್ದರು. ಈಗ ಆ ದುಡ್ಡು ರಾಜನ್ ಜೊತೆ ಮಾಯವಾಗಿದೆ. ಮಂಗಲಾ ನರ್ಸಿಂಗ್ ಹೋಮ್‌ನ ಪೆದ್ದ ರಘು ಸಹ 2 ಲಕ್ಷ ಕೊಟ್ಟು ಮಂಗನಾಗಿದ್ದಾನೆ.



ಚಂದ್ರಶೇಖರ್

ಇನ್ನು ರಾಜನ್‌ಗೆ ಮನೆ ಬಾಡಿಗೆಗೆ ಕೊಟ್ಟಿದ್ದ ಕಳ್ಳ ಇಂಜಿನಿಯರ್ ತನ್ನ ಹಡಬೆ ದುಡ್ಡು 35 ಲಕ್ಷವನ್ನು ರಾಜನ್ ಬಳಿ ಇಟ್ಟು ಪೆಕರನಾಗಿದ್ದಾನೆ.

ರಾಜನ್ ಪ್ಯೂರ್ ಗೋಲ್ಡ್ ಕೊಡಿಸುತ್ತಾನೆಂದು ನಂಬಿದ ಮಧು ಕಮ್ಯುನಿಕೇಷನ್‌ನ ಮಧು ಒಂದು ಲಕ್ಷ ನಾಮ ಹಾಕಿಸಿಕೊಂಡಿದ್ದಾನೆ. ಗೌರಿಕೊಪ್ಪಲು ರಸ್ತೆಯ ಮಂಜುನಾಥ್ ಸ್ಟೋರ್ ಮಾಲೀಕನೂ ಚಿನ್ನದ ಆಸೆಗೆ ಬಿದ್ದು 50 ಸಾವಿರ ಖಾಲಿ ಮಾಡಿಕೊಂಡಿದ್ದಾನೆ. ಲಂಡನ್ ಗೋಲ್ಡ್ ಮಾಯೆಯ ಹಿಂದೆ ಬಿದ್ದ ಕಾಲೇಜ್ ಉಪನ್ಯಾಸಕಿ ಶೈಲಜಾ ಮತ್ತು ಅವರ ಪತಿ, ಕೆ.ಎಸ್.ಆರ್.ಟಿ.ಸಿ. ಎಂ.ಡಿ. ಹೇಮರಾಜ್ ಸಹ 1 ಲಕ್ಷ ಕಳೆದುಕೊಂಡು ಅಳ್ತಾ ಇದ್ದಾರೆ.

ಬಡ್ಡಿ ಸಿಗುತ್ತೆ ಎಂದು ಒಂದು ಲಕ್ಷವನ್ನು ರಾಜನ್ ಕೈಗಿತ್ತ ಆಡಿಟರ್ ಪ್ರಕಾಶ್ ಭಟ್ಟ ತಲೆ ಮೇಲೆ [illegible] ಹೊತ್ತು ಕುಳಿತಿದ್ದಾನೆ. ಪೆನ್‌ಷನ್ ಮೊಹಲ್ಲಾ[illegible] ಶಿವಕುಮಾರ್ ಎಂಬಾತ ಬೆಂಗಳೂರಲ್ಲಿ ಯಾರ್‍ಯಾರಿಗೆ[illegible] ಬತ್ತಿ ಇಟ್ಟು 7.5 ಲಕ್ಷ ತಂದು ಶುಭ್ರ ಚಿನ್ನ ಕೊ[illegible] ಎಂದು ರಾಜನ್ ಮಡಿಲಿಗೆ ಹಾಕಿ[illegible] ಈಗ ಲಬೋ ಲಬೋ ಅಂತಿದ್ದಾ[illegible] ಶಿವಕುಮಾರ್. ಕರೆಂಟ್ ಪರ್ಮಿಷ[illegible] ಕೊಡಿಸ್ತೀನಿ ಎಂದು ಸಾಲಿಗ್ರಾ[illegible] ರಸ್ತೆಯ ಕೆ.ಶಿವಯ್ಯನಿಗೂ 1.5 ಲಕ್ಷ ನಾಮ ಇಟ್ಟಿದ್ದ[illegible] ರಾಜನ್ ಭಯ್ಯಾ! ಕಳೆದ ವರ್ಷ ಇನ್‌ಕಂ ಟ್ಯಾ[illegible] ರೇಡಿನಲ್ಲಿ ಸಿಕ್ಕುಬಿದ್ದಿದ್ದ ಯುನೈಟೆಡ್ ಸ್ಕೂಲ್ ಮಾಲೀ[illegible] ಸಿ.ಎಂ. ಚಂದ್ರಶೇಖರ್ ಮೂಡಾ, ಬಿಡಿಎ ಸೈ[illegible] ಪಡೆಯಲೆಂದು ರಾಜನ್‌ಗೆ ಕೊಟ್ಟಿದ್ದ ಹಣವೇ [illegible]ರಿಂದ 50ಲಕ್ಷವಂತೆ!

ಇನ್ನು ಡಾ|| ರಾಜೀವ್ ಎಂಬ ಹಲವು ಬಿಲ್ಡಿಂಗ್[illegible] ಮಾಲೀಕ ತನ್ನ ಎಜ್ಯುಕೇಷನ್ ಟ್ರಸ್ಟ್‌ಗೆ ಫಾರಿನ್ ಫಂ[illegible] ಕೊಡಿಸುತ್ತಾನೆಂದು ನಂಬಿ ರಾಜನ್‌ಗೆ 17 ಲಕ್ಷ ಕೊಟ್ಟಿದ್ದನಂತೆ!

ಆದರೆ ರಾಜೀವ್ ತಮ್ಮ ರಮೇಶ್ ಕುಟುಂಬ[illegible] ಮಾತ್ರ ಹಣ ವಾಪಸ್ ಪಡೆದು ಸೇಫಾಗಿದೆ. ಸಾಲಿಗ್ರಾಮ ರಸ್ತೆಯ ವಿಜಯಲಕ್ಷ್ಮಿ ಎಲೆಕ್ಟ್ರಿಕಲ್ಸ್ ಮಾಲೀಕರು 2 ಲಕ್ಷ ಕೊಟ್ಟು ಮತ್ತೆ ವಾಪಸ್ ಪಡೆದು ಜಾಣರಾಗಿದ್ದಾರೆ.

ಬತ್ತಿ ಇಟ್ಟ ಹಿರಿ ಯೇಸು ಸ್ವಾಮಿ ರಾಜನ್ ಸಿ[illegible]ವುದು ಕಷ್ಟವೇ. ರಾಜನ್‌ನ ಹಿಂಬಾಲಕ ಪ[illegible] ಯೇಸು ಸ್ವಾಮಿ ಮೋಹನ್ ಸಹ ಊರು ಬಿಡ[illegible]ಬೇಕೇನೊ?

ಆಗಾಗ ಇಂತಹ ಘಟನೆಗಳು ನಡೆಯುತ್ತ[illegible] ಇರುತ್ತವೆ. ಆದರೂ ಜನ ಟೋಪಿ ಹಾಕಿಸಿಕೊಳ್ಳುತ್ತ[illegible] ಇರುತ್ತಾರೆ.

ಹಾಸನದ ಪೊಲೀಸರಿಗೂ ಇದಕ್ಕೂ ಸಂಬಂಧ[illegible] ಇಲ್ಲವೇನೊ?

-ವರದಿಗಾ[illegible]

ದೇವೇಗೌಡರ ಪ್ರತ್ಯಕ್ಷ

(7ನೇ ಪುಟದಿಂದ)

ಜನ, ಕೆಲಸಕ್ಕೆ ಬಾರದೋರು.' 'ಗೌಡ್ರೆ, ಗೌಡ್ರೆ, ಏನು ಕೆಲಸ ಮಾಡಬೇಕು ನಮ್ಮೊಡೆಯಾ?' ಅಂತ ಹೊಳೆನರಸೀಪುರದವರು ಕೇಳಿದ್ರಂತೆ. ಅದಕ್ಕೆ ಗೌಡ್ರು, ರ್‍ಯಾಲಿ ಮಾಡಿ, ಸಂಪರ್ಕ ಮಾಡಿ, ಸಿಕ್ಕಸಿಕ್ಕ ಲಿಂಗಾಯತರ ಮನಸ್ಸು ನಮ್ಮ ಕಡೆ ತಿರುಗೋಹಂಗೆ ಮಾಡಿ, ದೇವೇಗೌಡ ಅಂದ್ರೆ, ಕುರುಬ್ರು ಖುಷಿಯಿಂದ ಕುಣಿಯೋಹಂಗೆ ಮಾಡಿ....' 'ಗೌಡ್ರೆ, ಗೌಡ್ರೆ, ರ್‍ಯಾಲಿ ಅಂದ್ರೇನು, ಜನಸಂಪರ್ಕ ಅಂದ್ರೇನು ಬಿಡಿಸಿ ಹೇಳಿದ್ರೆ ಮಾಡೇವು ನೋಡಿ...'

"ಅದೆಲ್ಲ ಇರಲಿ ಕಣಯ್ಯ" ಎಂದು ತಲೆ ನೀವಿಕೊಳ್ಳುತ್ತಾ ಬಸವರಾಜನನ್ನು ಕೇಳಿಕೊಂಡೆ, "ನನಗೆ ಎರಡು ವಿಷಯ ಸ್ಪಷ್ಟ ಆಗ್ತಿಲ್ಲ; (ಒಂದು) ದೇವೇಗೌಡ್ರು ಈಗ ಮುಖ್ಯಮಂತ್ರಿಯಾಗೋದಕ್ಕೆ ಏನೇನು ಮಾಡ್ತಿದ್ದಾರೆ? (ಎರಡು) ಮುಖ್ಯಮಂತ್ರಿಯಾಗಿ ಏನೇನು ಮಾಡಬೇಕು ಅಂತ ಇದ್ದಾರೆ?" ಅಂದೆ.

"ಚುನಾವಣೆಗೆ ಇನ್ನು ಐದು ತಿಂಗಳಿದೆ ಸಾರ್." ಎಂದು ಬಸವರಾಜ ಬರೋಬರಿಯಾಗಿ ಹೇಳೋದಕ್ಕೆ ನಿಧಾನವಾಗಿ ಶುರುಮಾಡತೊಡಗಿದ, "ಐದು ತಿಂಗಳಿಗೆ ಕನಿಷ್ಠ ಐವತ್ತು ಕೋಟಿ ದುಡ್ಡು ಬೇಕು ಅಂತ ಸಂಬಂಧಪಟ್ಟವರಿಗೆ ಹೇಳಿದ್ದಾರೆ" ಎಂದು ನಾನು ಮಧ್ಯೆ ಬಾಯಿಹಾಕಬಹುದೆಂದು ಹೆದರಿದ ಆತ ಬೇಗ ಬೇಗ ಮುಂದುವರಿಸಿದ. "ಸಂಬಂಧಪಟ್ಟವರು ಐವತ್ತು ಕೋಟಿ [illegible] ಈ ಸಲ ದೇವೇಗೌಡ, ಪ್ಲಾನ್ ಪ್ರಚಂಡವಾಗಿದೆ ಅಂತ ಹೆಗಡೇನೇ ಹೇಳಿದರಂತೆ. ಅದರ ವಿವರಾನೆಲ್ಲ ಪ್ರಕಾಶ್, ದತ್ತ, ಶಂಕರ್ ಬರೆದಿಟ್ಟುಕೊಂಡಿದ್ದಾರೆ. ವೈ.ಎಸ್.ವಿ. ದತ್ತರ ಸೂಚನೆ ಪ್ರಕಾರ ಹಾಸನ, ಚಿಕ್ಕಮಗಳೂರು, ಶಿವಮೊಗ್ಗಾ ಜಿಲ್ಲೆಗಳಲ್ಲಿ ಈ ಸಲ ಶಾಲೆಗಳ, ಸಂಘಗಳ ಉದ್ಘಾಟನೆಯನ್ನೆಲ್ಲ ದೇವೇಗೌಡ್ರೆ ನೆರವೇರಿಸಬೇಕಂತೆ. ಅದಕ್ಕಾಗಿ ಹೆಡ್ಮಾಸ್ಟರುಗಳಿಗೆ ತಾಕೀತ್ ಮಾಡಿದ್ದಾರೆ. ಆ ಜಿಲ್ಲೆಗಳ ಎಲ್ಲ ಮದುವೆ, ಪುಸ್ತ, ಸೀಮಂತದ ಅಧ್ಯಕ್ಷತೆ ದೇವೇಗೌಡ್ರದೇ ಇದ್ದರೆ ಚೆಂದ ಅಂತ ಶಂಕರ್ ಹೇಳಿದ್ದಾರಂತೆ. ಅದೆಲ್ಲದರ ಜೊತೆಗೆ ಮೈಸೂರು ಜಿಲ್ಲೆಯಿಂದ ಬರುವ ಕಾವೇರಿ ಪುತ್ರರಿಗೆ, ಬಿಜಾಪುರದ ಕೃಷ್ಣಾನದಿಯ ಆರಾಧಕರಿಗೆ, ಶಿವಮೊಗ್ಗೆಯ ತುಂಗಾ ನದಿಯ ರೈತರಿಗೆ ಕ್ರಾಂತಿಕಾರಿ ಭಾಷಣ ತಯಾರಿಸಿದ್ದಾರೆ. ಸಾರ್, ಮರೆತೆ, ಸಿಂಧ್ಯಾ ತಮ್ಮ ಅನುಭವದಿಂದ ಸೂಚಿಸಿದ್ದಾರಂತೆ, ಎಲ್ಲ ಊರಲ್ಲಿ ಭರ್ಜರಿ ಕುರಿ ಊಟ ಇಟ್ಟುಕೊಂಡ್ರೆ ಒಳ್ಳೇದು ಅಂತ. ಆಳ್ವರ ಸೂಚನೆ ಇನ್ನೂ ಚೆನ್ನಾಗಿದೆ. ದೇವೇಗೌಡ್ರು ಎಲ್ಲ ಊರಿನ ಬಾಲವಿಧವೆಯರಿಗೆ ಮಾಸಾಶನ ಕೊಡೋ ಸಮಾರಂಭ ಇದ್ರೆ ಚೆನ್ನಾಗಿರುತ್ತೆ, ದೇವರಾಜ ಅರಸು ಅನ್ನೋ ಅವಿವೇಕಿ ವೃದ್ಧಾಪ್ಯ ವೇತನ ಕೊಟ್ಟಿದ್ದು ಎಲ್ಲರಿಗೆ ಗೊತ್ತು; ಆ ಮುದುಕರೆಲ್ಲ ಈಗ ಸತ್ತು ಹೋಗಿದ್ದಾರೆ. 'ಅದೇ ವೃದ್ಧಾಪ್ಯ ವೇತನ ಪೋಸ್ಟ್‌ಮನ್‌ಗಳೇ ಇಟ್ಟುಕೊಳ್ಳಲಿ, ವರದಕ್ಷಿಣೆ ಸಬ್ಸಿಡಿ ಕೊಡೋಣ' ಅಂತ ಗೌಡ್ರು ಹೇಳಿಕೆ ಕೊಡ್ತಿದ್ದಾರೆ. ಎಲ್ಲೆಲ್ಲೂ ರೋಮಾಂಚನ ಸಾರ್. ಎಲ್ಲದಕ್ಕಿಂತ ಮುಖ್ಯ, ಗೌಡ್ರ ರಾಜಕೀಯ ಶೈಲೀನೇ ಬದಲಾಗಿಹೋಗಿದೆ ಸಾರ್. ಶಿವಮೊಗ್ಗ, ಹಾಸನದಲ್ಲಿ ದೇವೇಗೌಡ್ರು 'ಮಹಾಬ್ರಾಹ್ಮಣ' ಪುಸ್ತಕಾನ ಎದೆಗೆ ಒತ್ತಿಕೊಂಡು ಓಡಾಡ್ತಾರೆ; ರಾಯಚೂರು, ಧಾರವಾಡದಲ್ಲಿ ವಚನಗಳನ್ನೇ ಹೇಳ್ತಾರೆ. ಕುರುಬರ ಸಭೆಗಳಲ್ಲಿ ಕನಕದಾಸರ ತರಹ ಹಾಡ್ತಾರೆ. ಇಷ್ಟು ಸಾಲದು ಅಂತ, ಪ್ರತೀ ಊರಲ್ಲಿ ಹರಿಕಥೆ, ಭಜನೆ ಏರ್ಪಡಿಸಿ ದೇವೇಗೌಡ್ರ ಭಾಷಣ ಸಾರ್. ಜನ ಬಂದು ಗಂಟೆಗಟ್ಟಲೆ ಕೊರೆದ್ರೂ ಗೌಡ್ರ ಮುಗುಳ್ನಗೆ ಆರೋಲ್ಲ, ಕಣ್ಣುಬಿಟ್ಟುಕೊಂಡೇ ಮುಗುಳ್ನಗ್ತ ನಿದ್ರೆ ಮಾಡ್ತರೆ. ಹ್ಯಾಗಿದೆ ಸಾರ್ ದೇವೇಗೌಡ್ರ ಇತ್ತೀಚಿನ ಶೈಲಿ?"


"ಚೆನ್ನಾಗಿದೆ. ಇನ್ನೊಂದನ್ನು ಸ್ಪಷ್ಟಪಡಿಸು."

"ಅದು ಬಹಳ ಈಸಿ ಸಾರ್. ಮುಖ್ಯಮಂತ್ರಿಯಾದ ಕೂಡ್ಲೆ ಯಾರ್‍ಯಾರನ್ನ ನೋಡಬೇಕು ಅಂತ ಒಂದು ಪಟ್ಟಿ ಮಾಡ್ಕೊಂಡಿದಾರೆ. ಸಂಬಂಧಪಟ್ಟವರು, ಸಿರಿಗೆರೆಯ ಕಳ್ಳುಬಳ್ಳಿ, ಶಂಕರಮಠದ ಕಜಿನ್‌ಗಳು, ಮಂಡ್ಯದ ವಿರೋಧಪಕ್ಷಧ ಸದಸ್ಯರು, ಹಾಸನದ ಆಡಳಿತ ಪಕ್ಷದ ರೇವಣ್ಣ ನಾದಿನಿ ಇತ್ಯಾದಿ; ಆಮೇಲೆ ಗವರ್ನರ್ ಜೊತೆಗೆ ಹ್ಯಾಗೆ ನಿಂತಕೋಬೇಕು ಅನ್ನೋದನ್ನ ತಾಲೀಂ ಮಾಡಿದಾರೆ; ಅಸೆಂಬ್ಲಿಯಲ್ಲಿ ಕಾವೇರಿ ಬಗ್ಗೆ ಮಾತಾಡುವಾಗ ಹಸಿರು ಜುಬ್ಬಾ, ಕಾರ್ಮಿಕರನ್ನು ಹೊಗಳುವಾಗ ಕೆಂಪುಜುಬ್ಬಾ, ಜ್ಯೋತಿಷಿಗಳನ್ನು ಮೆಚ್ಚುವಾಗ ಕಾವಿ ಅಂಗಿ; ನರಸಿಂಹರಾವ್ ಬಂದಾಗ ಹಿಡಿದುಕೊಂಡು ನಿಲ್ಲೋದಕ್ಕೆ ಸಂಸ್ಕೃತದ 'ಮಹಾಬ್ರಾಹ್ಮಣ'; ಏರ್ ಪೋರ್ಟ್‌ನಲ್ಲಿ ನರಸಿಂಹರಾವ್ ಜೊತೆಗೆ ಮಾತಾಡುವಾಗ ಹೊಳೇನರಸೀಪುರದ ಗೌಡ್ರನ್ನು ನೋಡಿ; 'ಏನ್ನಾ ನರಸೇಗೌಡ, ಕಬ್ಬುಕಡದೇನ್ನಾ?' ಅನ್ನೋ ಥರದ್ದು ಮಾತಾಡಬಾರ್‍ದು. ಎಲ್ಲಕ್ಕೆ ಅಂಕಿಅಂಶಗಳಿರಬೇಕು. ಕೂಡಲೇ ಎಲ್ಲೆಲ್ಲೂ ನೀರಾವರಿ ಆಗಬೇಕು. ಈ ತರಹದ ಹಠಕ್ಕೆ ನರಸಿಂಹರಾವ್ ಆಕ್ಷೇಪಿಸಿದರೆ ಏನು ಮಾಡಬೇಕೆಂದು ವಿವರ...."

"ಸಾಕು. ಹೊರಗಡೆ ಕಾರಿನ ಶಬ್ದ ಆಗ್ತಿದೆ. ಗೌಡ್ರ ಬಂದ್ರು ಅಂತ ಕಾಣುತ್ತೆ ನೋಡು" ಅಂದೆ. ಬಸವರಾ[illegible] ಕುರ್ಚಿ, ಟೇಬಲ್‌ಗಳನ್ನು ಎಡವುತ್ತಾ ಬಿರುಗಾಳಿಯ[illegible] ಹೊರಗೆ ಹೋಗಿ ನೋಡಿಕೊಂಡು ಬಂದು "[illegible] ಸಾರ್, ಅವರು ಬರೋದು ತಡ ಆಗುತ್ತ[illegible] ದೇವೇಗೌಡ್ರು ಇದ್ದಕ್ಕಿದ್ದಂತೆ ಪತ್ನಿ ಜೊತೆ ರಾಜಕುಮಾ[illegible] ಸಿನಿಮಾಕ್ಕೆ ಹೋಗಿ, ಸಂಜೆ ವಿಶ್ವವಿದ್ಯಾಲಯದ ಸೆಮಿನಾ[illegible]ನಲ್ಲಿ 'ಸಣ್ಣಕತೆಯ ಅರ್ಥಪೂರ್ಣತೆ' ಕುರಿತು ಮಾತ[illegible] ರಾತ್ರಿ ದೊರೆಸ್ವಾಮಿ ಅಯ್ಯಂಗಾರ್ರ ವೀಣೆ ಕಾರ್ಯಕ್ರ[illegible]ವನ್ನು ಸವಿದು...'"

"ಯಾರು ಅದನ್ನೆಲ್ಲ ಮಾಡೋದು, ದೇವೇಗೌಡ್ರ[illegible]" ಎಂದು ಬೆಚ್ಚಿ 'ಯಾವ ದೇವೇಗೌಡ್ರು?' ಅಂತ ಕಿಟಾ[illegible] ಕಿರುಚಿಕೊಂಡೆ. ನನ್ನ ಹೆಂಡತಿ ಓಡಿ ಬಂದು ಪ[illegible] ತಣ್ಣೀರು ಚಿಮುಕಿಸಿ ರಕ್ತದೊತ್ತಡ ಪರೀಕ್ಷಿಸಿ 'ಹೀ[illegible] ಕನಸು ಬೀಳಿಸಿಕೊಳ್ಳಬೇಡಿ' ಎಂದು ಕಟ್ಟಾಜ್ಞೆ ಮಾ[illegible]ದಳು.

ಮರವಾಗಲಿ, ವೃಕ್ಷವಾಗಲಿ
[illegible] ಮೇಲವಾಗಲಿ
ನೋಟಕ್ಕೆ ನಗದೆ
ಪ್ರೀತಿಗೆ ಮಾತ್ರ
ದಕ್ಕುವುದು
— [illegible]



ಚಿತ್ರದುರ್ಗ : ಕೋದಂಡರಾಮಯ್ಯನ ರೀ-ಎಂಟ್ರಿ!

ಚಿತ್ರದುರ್ಗ ಜಿಲ್ಲೆಯ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಲು ಹೊರಟಿರುವ ಮಾಜಿ ಸಂಸದ ಪಿ. ಕೋದಂಡರಾಮಯ್ಯನವರು ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯೇ ಅದಕ್ಕೆ ಸೂಕ್ತ ವೇದಿಕೆ ಎಂದು ತೀರ್ಮಾನಿಸಿದಂತಿದೆ. ಅದಕ್ಕಾಗಿ ಜಿಲ್ಲಾ ನೀರಾವರಿ ಹೋರಾಟ ಸಮಿತಿಗೆ ರೀ-ಎಂಟ್ರಿಯಾಗಲು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಸುಮಾರು ಎರಡೂವರೆ ವರ್ಷಗಳಷ್ಟು ಕಾಲ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷರಾಗಿದ್ದ ಕೋದಂಡರಾಮಯ್ಯ ಕಳೆದ ಲೋಕಸಭಾ ಚುನಾವಣೆಯಲ್ಲಿ ತಮ್ಮ ಸೋಲಿಗೆ ಕಾರಣರಾದ ಜಿಲ್ಲೆಯ ಜನರಿಗೆ ಶಾಪ ಹಾಕಿ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.


ಹಾಗೆ ನೋಡಿದರೆ ಹಿಂದೆ ಕೋದಂಡರಾಮಯ್ಯ ಹೋರಾಟ ಸಮಿತಿಗೆ ಅಧ್ಯಕ್ಷರಾಗಬೇಕೆಂಬ ಪ್ರಸ್ತಾಪ ಬಂದಾಗಲೇ ವಿರೋಧ ವ್ಯಕ್ತವಾಗಿತ್ತು. ಆಗ ವಿರೋಧ ವ್ಯಕ್ತಪಡಿಸಿದ್ದ ರೈತ ಸಂಘದ ಮುಖಂಡರು "ರಾಜಕೀಯ ಪಕ್ಷಗಳಿಗೆ ಹೊರತಾದವರು ಅಧ್ಯಕ್ಷಸ್ಥಾನದಲ್ಲಿರಬೇಕೆಂದು ಒತ್ತಾಯಿಸಿದ್ದರು. ಆಗ ಕೋದಂಡರಾಮಯ್ಯ ರಾಜಕೀಯವೇ ಬೇರೆ, ಹೋರಾಟವೇ ಬೇರೆ. ಜಿಲ್ಲೆಗೆ ನೀರಾವರಿ ಸೌಲಭ್ಯ ಆಗಬೇಕೆಂಬುದರ ಬಗ್ಗೆ ನನಗೆ ಪ್ರಾಮಾಣಿಕ ಕಾಳಜಿಯಿದೆ. ನೀರಾವರಿ ಹೋರಾಟವನ್ನು ಎಂದೂ ರಾಜಕೀಯಕ್ಕೆ ಬಳಸಿಕೊಳ್ಳುವುದಿಲ್ಲ" ಎಂದು ಹೇಳಿದ್ದರು.

ಅಧ್ಯಕ್ಷರಾದ ನಂತರ ಭದ್ರಾ ಮೇಲ್ದಂಡೆ ಯೋಜನೆ ಕುರಿತಾದ ಮಾಹಿತಿ-ಅಧ್ಯಯನ ಸೇರಿದಂತೆ ಸರ್ಕಾರದ ಗಮನ ಸೆಳೆಯುವ ಪ್ರಕ್ರಿಯೆಯಲ್ಲಿ ಕೋದಂಡರಾಮಯ್ಯನವರ ಪಾತ್ರ ನಿರ್ಣಾಯಕವಾಗಿಯೇ ಇತ್ತಾದರೂ ದಿನ ಕಳೆದಂತೆ ಇಡೀ ಹೋರಾಟ ಸಮಿತಿಯ ಚಟುವಟಿಕೆಗಳು ತಮ್ಮ ಮೂಗಿನ ನೇರಕ್ಕೆ ನಡೆಯಬೇಕೆಂಬ ಧೋರಣೆ ಬೆಳೆಸಿಕೊಂಡರು. ಇದು ಸಮಿತಿಯಲ್ಲಿ ಇರಿಸು-ಮುರಿಸಿನ ವಾತಾವರಣಕ್ಕೆ ದಾರಿ ಮಾಡಿತು.

ಹೇಳಿ-ಕೇಳಿ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯೆಂಬುದು ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಪ್ರಾಮಾಣಿಕ ಕಾಳಜಿಯಿದ್ದ ಕೆಲ ಪತ್ರಕರ್ತರ ಹಾಗೂ ಪ್ರಗತಿಪರರ ಕೂಸು. ಭದ್ರಾ ಮೇಲ್ದಂಡೆ ಯೋಜನೆ ಜಾರಿಯಾಗಬೇಕೆಂಬ ದಶಕಗಳ ಕೂಗಿಗೊಂದು ವ್ಯವಸ್ಥಿತ ರೂಪ ಬಂದದ್ದು ಈ ಸಮಿತಿ ಅಸ್ತಿತ್ವಕ್ಕೆ ಬಂದ ನಂತರವೇ. ಇಡೀ ಸಮಿತಿಗೊಂದು ರೂಪ ಕೊಟ್ಟು ಮತ್ತದನ್ನು ಹೋರಾಟಕ್ಕೆ ಅಣಿಗೊಳಿಸುವಲ್ಲಿ ಸಾಹಿತಿ ಬಂಜಗೆರೆ ಜಯಪ್ರಕಾಶ್‌ರ ಪಾತ್ರ ಪ್ರಮುಖವಾದದ್ದು. ನೀರಾವರಿ ಹೋರಾಟ ಸಮಿತಿಯ ಹೋರಾಟ, ಪ್ರತಿಭಟನೆ, ಸಮಾವೇಶಗಳಂತಾ ಚಟುವಟಿಕೆಗಳಲ್ಲಿ ಹಲವು ಪಕ್ಷಗಳ ರಾಜಕಾರಣಿಗಳು, ಸಂಘ ಸಂಸ್ಥೆಗಳ ಮುಖಂಡರು ಬಂದು ಹೋಗಿರಬಹುದು. ಆದರೆ ಈ ಕ್ಷಣದವರೆಗೂ ನೀರಾವರಿ ಹೋರಾಟ ಸಮಿತಿಗೆ ಸಂಘಟನಾತ್ಮಕ ಶ್ರಮ, ಹಣಕಾಸು ಕ್ರೋಢೀಕರಣ ಸೇರಿದಂತೆ ಎಲ್ಲಾ ರೀತಿಯಲ್ಲೂ ರಿಸ್ಕ್ ತೆಗೆದುಕೊಳ್ಳುತ್ತಿರುವವರು ಇಲ್ಲಿನ ಪತ್ರಕರ್ತರು ಹಾಗೂ ಸಾಹಿತಿ ಬಂಜಗೆರೆ ಜಯಪ್ರಕಾಶ್‌ರವರೇ. ಈ ತಂಡದ ಸಾಮೂಹಿಕ ಪ್ರಯತ್ನಕ್ಕೆ ಜಿಲ್ಲೆಯ ಜನಪ್ರತಿನಿಧಿಗಳು, ಬೇರೆಬೇರೆ ವಲಯದ ಗಣ್ಯರು ಸಹಕಾರ ನೀಡಿದ್ದಾರೆ.

ಕೋದಂಡರಾಮಯ್ಯನವರು ಅಧ್ಯಕ್ಷರಾದ ನಂತರ ಸಮಿತಿಯ ಕಾರ್ಯ ಚಟುವಟಿಕೆಗಳ ವರಸೆಯೇ ಬದಲಾಯಿತು. ಅಧ್ಯಕ್ಷರಾಗಿರುವಷ್ಟು ದಿನ ಸಾಹಿತಿ ಬಂಜಗೆರೆ ಜಯಪ್ರಕಾಶ್‌ರನ್ನು ಗೌಣಗೊಳಿಸುವ ಪ್ರಯತ್ನಗಳು ನಡೆದವು. ಕೋದಂಡರಾಮಯ್ಯನವರ ತಲೆಯಲ್ಲಿ ಅದಾವ ಲೆಕ್ಕಾಚಾರಗಳು ಇದ್ದವೋ ಏನೋ. ಹೋರಾಟ ಸಮಿತಿಯ ಸಭೆಗಳಂತೂ ಕೋದಂಡರಾಮಯ್ಯ ಚಿತ್ರದುರ್ಗದಲ್ಲಿ ಪಕ್ಷದ ಸಭೆಗಳಿಗೋ, [illegible] ಕಾರ್ಯಕ್ರಮಗಳಿಗೋ ಬಂದಾಗ ಮಾತ್ರ ನಡೆಯುತ್ತಿದ್ದವು. ಇದು ಮುಂದುವರಿದು ನಾನಿಲ್ಲದಿದ್ದರೆ [illegible]

[illegible]



ಬಂಡಗೆರೆ ಜಯಪ್ರಕಾಶ್

ನೀರಾವರಿ ಹೋರಾಟವನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳುವುದಿಲ್ಲ ಎಂದು ಹೇಳಿದ್ದ ಕೋದಂಡರಾಮಯ್ಯ ಕಳೆದ ಲೋಕಸಭಾ ಚುನಾವಣೆಯಲ್ಲಿ ತಮ್ಮ ಕರಪತ್ರ-ಬ್ಯಾನರುಗಳಲ್ಲಿ ತಮ್ಮನ್ನು ಭದ್ರಾ ಮೇಲ್ದಂಡೆ ಯೋಜನೆಯ ರೂವಾರಿ ಎಂದೇ ಬಿಂಬಿಸಿಕೊಂಡರು. ಚುನಾವಣೆಯಲ್ಲಿ ಸೋಲಾದ ಕೂಡಲೇ ರಾಜೀನಾಮೆಯೊಂದನ್ನು ಗೀಚಿ ಕಳುಹಿಸಿದರು.

ರಾಮಯ್ಯ ಕಳೆದ ಲೋಕಸಭಾ ಚುನಾವಣೆಯಲ್ಲಿ ತಮ್ಮ ಕರಪತ್ರ-ಬ್ಯಾನರುಗಳಲ್ಲಿ ತಮ್ಮನ್ನು ಭದ್ರಾ ಮೇಲ್ದಂಡೆ ಯೋಜನೆಯ ರೂವಾರಿ ಎಂದೇ ಬಿಂಬಿಸಿಕೊಂಡರು. ಚುನಾವಣೆಯಲ್ಲಿ ಸೋಲಾದ ಕೂಡಲೇ ರಾಜೀನಾಮೆಯೊಂದನ್ನು ಗೀಚಿ ಕಳುಹಿಸಿದರು.

ಇಷ್ಟಾಗಿಯೂ ಹೋರಾಟ ಸಮಿತಿ ಕೋದಂಡರಾಮಯ್ಯನವರ ರಾಜೀನಾಮೆಯನ್ನು ಅಂಗೀಕರಿಸಲಿಲ್ಲ, ಹೋರಾಟ ಸಮಿತಿಯ ಪ್ರಮುಖರು ಎರಡು-ಮೂರು ಬಾರಿ ಬೆಂಗಳೂರಿಗೆ ಹೋಗಿ ಮನವೊಲಿಸುವ ಪ್ರಯತ್ನ ಮಾಡಿದರು. ನೀವು ಚುನಾವಣೆಯ ಸೋಲನ್ನು ನೆಪ ಮಾಡಿಕೊಂಡು ರಾಜೀನಾಮೆ ನೀಡಿದರೆ ಜನರಿಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ. ರಾಜೀನಾಮೆ ವಾಪಸ್ಸು ಪಡೆಯಿರಿ, ಹೋರಾಟ ಮುಂದುವರಿಸೋಣ ಎಂದು ಹೇಳಿದರು.


ಬಂಜಗೆರೆ ಜಯಪ್ರಕಾಶ್‌ರವರೂ ಕೂಡಾ ಕೋದಂಡರಾಮಯ್ಯನವರೊಂದಿಗೆ ಮಾತುಕತೆ ನಡೆಸಿ ಹೋರಾಟ ಮುನ್ನಡೆಸೋಣ ಎಂದು ಸಲಹೆ ನೀಡಿದಾಗಲೂ ಕೋದಂಡರಾಮಯ್ಯ ಜಪ್ಪಯ್ಯ ಅನ್ನಲಿಲ್ಲ. ಮುರುಘರಾಜೇಂದ್ರ ಒಡೆಯರ್ ಕೋದಂಡರಾಮಯ್ಯನವರ ಈ ಹಠಮಾರಿ ಧೋರಣೆಯನ್ನು ತೀವ್ರವಾಗಿ ವಿಮರ್ಶಿಸಿ ಹಿಗ್ಗಾ-ಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದರು. ಆದರೂ ಕೋದಂಡರಾಮಯ್ಯ 'ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಕಡ್ಡಿ ಮುರಿದಂತೆ ಮಾತನಾಡಿದ್ದರು. ಹೋರಾಟ ಸಮಿತಿ ಕೋದಂಡರಾಮಾಯ್ಯನವರ ರಾಜೀನಾಮೆ ಅಂಗೀಕರಿಸದೇ ಕಾರ್ಯಾಧ್ಯಕ್ಷರಾಗಿದ್ದ ಜಯಣ್ಣನವರ ನೇತೃತ್ವದಲ್ಲಿ ಚಟುವಟಿಕೆಗಳನ್ನು ಪುನರಾರಂಭಿಸಿತು.

ಮೇಲಿಂದ ಮೇಲೆ ಮನವಿಗಳ ಸಲ್ಲಿಕೆ ಸೇರಿದಂತೆ ಸರ್ಕಾರದ ಗಮನ ಸೆಳೆಯುವಂತಾ ಚಟುವಟಿಕೆಗಳು ಆರಂಭವಾದವು. ಭದ್ರೆಗೆ ಬಾಗಿನ ಅರ್ಪಿಸುವ ಕಾರ್ಯಕ್ರಮ ಜಿಲ್ಲೆಯಾದ್ಯಂತ ಭದ್ರಾ ಮೇಲ್ದಂಡೆ ಹೋರಾಟಕ್ಕೆ ಹೊಸ ಹುರುಪನ್ನು ನೀಡಿತು. ಅನಂತರ ತಾಲ್ಲೂಕುವಾರು ಬಂದ್‌ಗಳು ನಡೆದವು. ಕೆ.ಸಿ. ರೆಡ್ಡಿ ನೇತೃತ್ವದ ಸಮಿತಿ ಚಿತ್ರದುರ್ಗಕ್ಕೆ ಬಂದಾಗ ಸಾವಿರಾರು ಜನ ಸೇರಿ ಜಿಲ್ಲೆಯ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟರು. ಸರ್ಕಾರದಿಂದ ಸಕಾರಾತ್ಮಕ ಪ್ರತಿಕ್ರಿಯೆ [illegible]

ಯಾವಾಗ ಈ ಬೆಳವಣಿಗೆಗಳು [illegible]

ಹೋರಾಟ ಸಮಿತಿಗೆ ರೀ-ಎಂಟ್ರಿ ಪಡೆಯುವ ಕಸರತ್ತುಗಳನ್ನು ಆರಂಭಿಸಿದರು. ತಮ್ಮ ಬೆಂಬಲಿಗರ ಮೇಲೆ ಕೋದಂಡರಾಮಯ್ಯ ಒತ್ತಡ ತರಲಾರಂಭಿಸಿದರು. ನೀರಾವರಿ ಹೋರಾಟ ಸಮಿತಿಯ ಮುಖಂಡರು ಬಂದು ತಮ್ಮನ್ನು ಹೋರಾಟಕ್ಕೆ ಕರೆಯಬೇಕೆನ್ನುವಂತ ಅಸಹಜ ನಿರೀಕ್ಷೆಯ ಬೇಡಿಕೆಯನ್ನು ಮುಂದಿಟ್ಟರು. ಈ ಬಗ್ಗೆ ತಮ್ಮ ಬೆಂಬಲಿಗರಿಗೂ ಸಂದೇಶ ರವಾನಿಸಿದರು. ಈ ಹಿನ್ನೆಲೆಯಲ್ಲಿಯೇ ಜಿಲ್ಲಾ ಎಬಿಪಿಜೆಡಿ ಮುಖಂಡ ಎಂ.ಡಿ. ರವಿ ಇತ್ತೀಚೆಗೆ ಹೋರಾಟ ಸಮಿತಿಯ ಕಾರ್ಯವೈಖರಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಪ್ರತ್ಯೇಕ ಹೋರಾಟ ಸಮಿತಿ ಕಟ್ಟುವ ಬೆದರಿಕೆ ಹಾಕಿದರು. ಇತ್ತೀಚೆಗೆ ಹಿರಿಯೂರಿನಲ್ಲಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಕೋದಂಡರಾಮಯ್ಯನವರು ಪುನಃ ಬಂದು ಹೋರಾಟ ಸಮಿತಿಯ ನೇತೃತ್ವ ವಹಿಸಿಕೊಳ್ಳಬೇಕೆಂಬ ಹೇಳಿಕೆಯನ್ನೂ ನೀಡಿದರು.


ನೀರಾವರಿ ಹೋರಾಟ ಸಮಿತಿಯ ಸಂಘಟಕರುಗಳು ಹೇಳುವುದೇನೆಂದರೆ 'ಕೋದಂಡರಾಮಯ್ಯ ಈಗಲೂ ಹೋರಾಟ ಸಮಿತಿಯ ಅಧ್ಯಕ್ಷರು. ಯಾವಾಗ ಬೇಕಾದರೂ ಬಂದು ಹೋರಾಟದಲ್ಲಿ ಪಾಲ್ಗೊಳ್ಳಬಹುದು. ಇದು ಜಿಲ್ಲೆಯ ಜನರ ಹಿತಾಸಕ್ತಿಯ ಪ್ರಶ್ನೆಯಾಗಿರುವುದರಿಂದ ಯಾರು ಬೇಕು ಯಾರು ಬೇಡಗಳೆಂಬ ಪ್ರಶ್ನೆಗಳೇ ಬರುವುದಿಲ್ಲ' ಎಂಬುದಾಗಿದೆ. ಈಗಾಗಲೇ ಕೋದಂಡರಾಮಯ್ಯನವರನ್ನು ಬಹಳಷ್ಟು ಸಾರಿ ಆಹ್ವಾನಿಸಲಾಗಿದೆ. ಅವರು ಬರುವುದಾದರೆ ಯಾರ ವಿರೋಧವೂ ಇಲ್ಲ ಎಂದೇ ಹೇಳುತ್ತಿದ್ದಾರೆ.



ಈಗ ಬರುವ 31 ನೇ ತಾರೀಖು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಭದ್ರಾ ಮೇಲ್ದಂಡೆ ಯೋಜನಾ ವಲಯದ ಜನಪ್ರತಿನಿಧಿಗಳ ಸಭೆ ನಡೆಯಲಿದೆ. ಈ ಸಭೆಗೆ ನೀರಾವರಿ ಹೋರಾಟ ಸಮಿತಿಯ ಮುಖಂಡರನ್ನೂ ಆಹ್ವಾನಿಸಲಾಗಿದೆ. ಕೆ.ಸಿ. ರೆಡ್ಡಿ ಸಮಿತಿಯ ಶಿಫಾರಸ್ಸಿನನ್ವಯ ಸರ್ಕಾರ ಯೋಜನೆಯ ಜಾರಿಯ ಕುರಿತು ತನ್ನ ಅಂತಿಮ ತೀರ್ಮಾನ ಪ್ರಕಟಿಸಲಿವೆ. ಇಂಥಾ ಗಳಿಗೆಯಲ್ಲಿ ಹೋರಾಟದಲ್ಲಿ ಭಾಗವಹಿಸಿ ಕೈಜೋಡಿಸುವುದು ಬಿಟ್ಟು ತೆರೆಮರೆಯ ಕಸರತ್ತುಗಳಲ್ಲಿ ಮುಳುಗಿದರೆ ಕೋದಂಡರಾಮಯ್ಯನವರಿಗಾಗುವ ಲಾಭವಾದರೂ ಏನು? ಇದನ್ನು ಕೋದಂಡರಾಮಯ್ಯನವರಿಗೆ, ಅವರ ಬೆಂಬಲಿಗರಿಗೆ ಅರ್ಥ ಮಾಡಿಸುವವರಾರು?

ಯಾದವರ ನಾಯಕ

ಕೋದಂಡರಾಮಯ್ಯ ತಮ್ಮ ಉನ್ನತ ಪೊಲೀಸು ಹುದ್ದೆಗೆ ರಾಜೀನಾಮೆ ನೀಡಿ ರಾಜಕೀಯ ಪ್ರವೇಶಿಸಿದಾಗ ತಮಗೊಬ್ಬ ಪ್ರಭಾವಿ ನಾಯಕ ದೊರೆತನೆಂದೇ ಯಾದವ ಸಮುದಾಯ ಸಂಭ್ರಮಿಸಿತ್ತು. ಹಾಗಾಗಿ ಕೋದಂಡರಾಮಯ್ಯ ಚಿತ್ರದುರ್ಗ ಜಿಲ್ಲೆಗೆ ಭೇಟಿ ನೀಡಿದಾಗ ಅಭೂತಪೂರ್ವ ಸ್ವಾಗತವೇ ಸಿಕ್ಕಿತ್ತು. ಬಹುಶಃ ಮೊಟ್ಟಮೊದಲ ಬಾರಿಗೆ ಇಡೀ ಜಿಲ್ಲೆಯ ಯಾದವ ಸಮುದಾಯ ಬೃಹತ್ ಒಗ್ಗಟ್ಟನ್ನು ಪ್ರದರ್ಶಿಸಿತು. ಇದರ ರಭಸ ಹೇಗಿತ್ತೆಂದರೆ ಆಗ ನಡೆದ ಲೋಕಸಭಾ ಚುನಾವಣೆಯಲ್ಲಿ ಕೋದಂಡರಾಮಯ್ಯ ಅನಾಯಾಸವಾಗಿ ಸಂಸದರಾಗಿ ಆಯ್ಕೆಯಾದರು. ಆರಂಭದಲ್ಲೇ ತಮ್ಮ ಛಾಪನ್ನು ಮೂಡಿಸಿದ ಕೋದಂಡರಾಮಯ್ಯ ಜನತಾದಳದ [illegible] ನಾಯಕರುಗಳಲ್ಲೊಬ್ಬರಾಗಿ [illegible] ಕೊಂಡರು. ದೆಹಲಿ ರಾಜಕೀಯ ವಲಯದಲ್ಲೂ ಗುರುತಿಸಿಕೊಂಡರು.





[illegible]

ಮ್ಯೂಸಿಕಲ್ ಚೇರಲ್ಲಿ ಕೋದಂಡ್ರ

ಅದೇನಾಯಿತೋ ಇದ್ದಕ್ಕಿದ್ದಂತೆ ದೇವೇಗೌಡರ ವಿರುದ್ಧ ಬಂಡಾಯದ ಬಾವುಟ ಹಾರಿಸಿದರು. 'ದೇವೇಗೌಡ ಡಿಕ್ಟೇಟರ್' ಅಂತಾ ಹೇಳಿ ಮೆಗಾ ಸುದ್ದಿಯಲ್ಲಿ ಗುರುತಿಸಿಕೊಂಡರು. 'ಲೋಕಶಕ್ತಿ'ಗೆ ಸೇರ್ಪಡೆಯಾಗಿ ಲೋಕಸಭೆಗೆ ಸ್ಪರ್ಧಿಸಿ ಸೋತರು. ಮತ್ತೆ ಹೆಗಡೆಯವರ ಆಳ್ವ ಕಾರ್ಯವೈಖರಿಯ ಬಗೆಗೆ ಅಸಮಾಧಾನ ವ್ಯಕ್ತಪಡಿಸಿ ಅಲ್ಲೂ ಬಂಡಾಯದ ಬಾವುಟ ಹಾರಿಸಿದರು. ಇದೆಲ್ಲಾ ತನ್ನ ಜಾಯಮಾನಕ್ಕೊಗ್ಗುವುದಿಲ್ಲ ಎನ್ನುತ್ತಲೇ ತಾವು ಅತ್ಯುಗ್ರವಾಗಿ ವಿರೋಧಿಸುವುದಾಗಿ ಹೇಳುತ್ತಿದ್ದ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು. ಆಗ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ನಿರಾಕರಿಸಿದಾಗ ನಿರಾಸೆಗೊಳಗಾಗಿ ಸಂಯುಕ್ತ ಜನತಾದಳದಿಂದ ಸ್ಪರ್ಧಿಸಿದ್ದ ಶಶಿಕುಮಾರ್ ಪರವಾಗಿ ಚುನಾವಣಾ ಪ್ರಚಾರ ಮಾಡಿದರು. ಇದನ್ನು ಗಮನಿಸಿದ ಕಾಂಗ್ರೆಸ್ ಕೋದಂಡರಾಮಯ್ಯನವರನ್ನು ಉಚ್ಛಾಟಿಸಿತು. ನಿಧಾನವಾಗಿ ಕಾಂಗ್ರೆಸ್‌ನಿಂದ ದೂರವಾದ ಕೋದಂಡರಾಮಯ್ಯ ಭದ್ರಾ ಮೇಲ್ದಂಡೆ ಯೋಜನೆ ಜಾರಿಗಾಗಿ ಒತ್ತಾಯಿಸಿ ನಡೆಯುತ್ತಿದ್ದ ಹೋರಾಟದಲ್ಲಿ ಸಕ್ರಿಯವಾದರು.

ಮತ್ತೆ ಚುನಾವಣೆಗಳು ಸಮೀಪಿಸುತ್ತಿದ್ದಂತೆ ಜೆಡಿಎಸ್‌ನ ಸಖ್ಯ ಬೆಳೆಸಿದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರು. ಸೋತ ನಂತರವೂ ಕಾಂಗ್ರೆಸ್-ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಾಗ ಯಾವುದಾದರೊಂದು ಗೂಟದ ಕಾರು ಸಿಗಬಹುದೆಂದು ಕಾದರು. ಅದಕ್ಕಾಗಿ ಸಿದ್ಧರಾಮಯ್ಯನವರ ಬೆನ್ನಿಗೆ ನಿಂತರು. ಅಷ್ಟೊತ್ತಿಗಾಗಲೇ ಸಿದ್ದುಗೆ ಗುದ್ದು ನೀಡುವ ತಂತ್ರ ರೂಪಿಸುತ್ತಿದ್ದ ಗೌಡರು ಕೋದಂಡರಾಮಯ್ಯನವರನ್ನು ದೂರವಿಡಲಾರಂಭಿಸಿದರು. ಕೋದಂಡರಾಮಯ್ಯ ಮತ್ತೆ ಬಂಡಾಯದ ಬಾವುಟ ಬೀಸಿದರು.

ಆಗ ಅತೃಪ್ತರಾಗಿದ್ದ ವೈಜನಾಥ್ ಪಾಟೀಲ್, ಎ.ಕೆ. ಸುಬ್ಬಯ್ಯನಂಥವರು ಜೊತೆಯಾದರು. ರಾಜ್ಯದಾದ್ಯಂತ ದೇವೇಗೌಡರ ಹಿಟ್ಲರ್ ರಾಜಕೀಯದ ವಿರುದ್ಧ ಹೋರಾಡುವುದಾಗಿ ಘೋಷಿಸಿದರು. ಹಾಗೆ ಪ್ರವಾಸ ಹೊರಟು ಚಿತ್ರದುರ್ಗಕ್ಕೆ ಬಂದಾಗ ಕೋದಂಡರಾಮಯ್ಯನವರನ್ನು ಬರಮಾಡಿಕೊಂಡದ್ದು ಬೆರಳೆಣಿಕೆಯ ಬೆಂಬಲಿಗರು ಮಾತ್ರ. ಸಿದ್ದು ನೇತೃತ್ವದ ಅಹಿಂದದ ಅಬ್ಬರದ ಪ್ರಚಾರ, ಸಭೆ-ಸಮಾರಂಭಗಳಲ್ಲಿ ಕೋದಂಡರಾಮಯ್ಯನವರ ಬೆಂಬಲಿಗರು ಸೇರಿದ್ದು ಅಷ್ಟಕ್ಕಷ್ಟೇ.

ಕೋದಂಡರಾಮಯ್ಯನವರ ಮ್ಯೂಸಿಕಲ್ ಚೇರ್ ಶೈಲಿಯ ರಾಜಕೀಯದ ಬಗ್ಗೆ ಅದಾಗಲೇ ಅಸಮಾಧಾನಗಳು ವ್ಯಕ್ತವಾಗಲಾರಂಭಿಸಿದವು. ಇನ್ನು ಕೋದಂಡರಾಮಯ್ಯನವರ ರಾಜಕೀಯ ಹಿಡಿತ ಬಿಗುವನ್ನು ಕಳೆದುಕೊಂಡಂತೆಯೇ ಎಂಬ ವಾತಾವರಣ ನಿರ್ಮಾಣವಾಗಿತ್ತು. ಈಗ ಕಾಂಗ್ರೆಸ್‌ನ ಮೂಲಕ ರೀ-ಎಂಟ್ರಿಯಾಗಿರುವುದರಿಂದ ಒಟ್ಟಾರೆ ರಾಜಕೀಯ ಪರಿಸ್ಥಿತಿಯೂ ಕಾಂಗ್ರೆಸ್‌ಗೆ ಅನುಕೂಲಕರವಾಗಿರುವುದರಿಂದ ಅವರ ಬೆಂಬಲಿಗರು ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಾರೆ. ಹಾಗೆಯೇ ಇದೇ ಕೋದಂಡರಾಮಯ್ಯನವರ ಕೊನೆ ಪಕ್ಷವಾಗಲೀ ಎಂದು ಆಶಿಸುತ್ತಿದ್ದಾರೆ. ಕೋದಂಡರಾಮಯ್ಯ ಕೂಡಾ ಶಕ್ತ ರಾಜಕಾರಣದ ಏಳು-ಬೀಳುಗಳಲ್ಲಿ ಪೊಲೀಸ್ ಗತ್ತುಗಾರಿಕೆಗಳು, ಇಗೋಗಳು ವರ್ಕ್‌ಔಟ್ ಆಗುವುದಿಲ್ಲವೆಂಬುದನ್ನು ಮನಗಂಡಂತಿದೆ. ಬಹುಶಃ ಕಾಂಗ್ರೆಸ್ ಲಾಸ್ಟ್ ರೆಸಾರ್ಟ್ ಆಗಬಹುದು.

ಕೋದಂಡರಾಮಯ್ಯನವರ ಸೇರ್ಪಡೆ ಜಿಲ್ಲಾ ಕಾಂಗ್ರೆಸ್ ಮಟ್ಟಿಗಂತೂ ನಿರ್ಣಾಯಕ ಲಾಭವಾಗಲಿದೆ. ಹೊಳಲ್ಕೆರೆಯ ಶಾಸಕ ಎ.ವಿ.ಉಮಾಪತಿಯಂತವರಿಗೆ ಕೋದಂಡರಾಮಯ್ಯನವರ ಕಾಂಗ್ರೆಸ್ ಸೇರ್ಪಡೆಯ ವಿಚಾರ [illegible]

[illegible]

ವೆಟರ್ನರಿ ಯುನಿವರ್ಸಿಟಿ

ಸರ್ಕಾರದ ಕಣ್ಣಲ್ಲಿ ಗೊಡ್ಡೆಮ್ಮೆ!



ತೆವಲಿಗೆ, ಪ್ರಚಾರಕ್ಕೆ ಅವಸರವಸರದಲ್ಲಿ ಯೋಜನೆ ...ಭಿಸಿ, ಸೀನ್‌ನಿಂದ ಮಾಯವಾಗಿಬಿಡುವ ಪುಡಾರಿಗಳಿಂದ ಮತ್ತವರ ಸರ್ಕಾರಗಳಿಂದ ಆಗುವ ಹಾನಿ ಅಷ್ಟಿಷ್ಟಲ್ಲ.


ಇದು ಬೀದರ್‌ನ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಕತೆ. ಇದು ಹೆಸರಿಗಷ್ಟೇ ವಿ.ವಿ.! ಒಳಹೊಕ್ಕರೆ ಬಡಾದಿ ದನಗಳನ್ನು ಕೂಡಿ ಹಾಕುವ ಕೊಂಡವಾಡ (ಕೊಟ್ಟಿಗೆ) ದಂತೆ ಕಾಣುತ್ತದಷ್ಟೇ.

ರಾಜ್ಯ ಸರ್ಕಾರ ವಿ.ವಿ.ಯೊಂದನ್ನು ಹೇಗೆ ಕೊಂದು ಹಾಕಬಲ್ಲದು ಎಂಬುದಕ್ಕೆ ಈ ವಿ.ವಿ.ಯೇ ಮೊದಲ ಉದಾಹರಣೆಯಾಗಿ ನಿಲ್ಲುವುದೇನೊ? ವರ್ಷಕ್ಕೆ 5 ಕೋಟಿ ಫಂಡ್ ನೀಡಿ ಕೈ ತೊಳೆದುಕೊಳ್ಳುವ ಸರ್ಕಾರಗಳಿಗೆ ವಿ.ವಿ.ಯಲ್ಲೇನು ನಡೆಯುತ್ತಿದೆ? ಈ ವಿ.ವಿ. ಯಿಂದಾದ ಪ್ರಯೋಜನಗಳೇನು ಎಂಬುದನ್ನು ಅರಿಯುವ 'ಗೊಡವೆ'ಯೇ ಬೇಡವಾಗಿದೆ.

ಹೋಗಲಿ, ನಿವೃತ್ತ ಐ.ಎ.ಎಸ್. ಅಧಿಕಾರಿ ಚಿರಂಜೀವಿ ಸಿಂಗ್ ನೇತೃತ್ವದ ಸಮಿತಿ ಈ ವಿ.ವಿ.ಗೆ ಸಕಲ ಅನುದಾನವನ್ನು ರಾಜ್ಯ ಸರ್ಕಾರವೇ ನೀಡಬೇಕು ಎಂದು ವರದಿ ನೀಡಿದ್ದಕ್ಕಾದ್ದರೂ ಬೆಲೆ ಬೇಡವೆ? ಬೀದರ್‌ನಲ್ಲಿ ಕೇಂದ್ರ ಸ್ಥಾನ ಹೊಂದಿರುವ ಈ ರಾಜ್ಯಮಟ್ಟದ ಪಶು ವೈದ್ಯಕೀಯ ವಿ.ವಿ.ಗೆ ರಾಜ್ಯ ಸರ್ಕಾರ ಪ್ರತಿವರ್ಷ ಕೊಡುತ್ತಿರುವ ಗ್ರ್ಯಾಂಟ್ ಎಷ್ಟು ಗೊತ್ತೆ? ಕೇವಲ 5 ಕೋಟಿ ರೂ. ಮಾತ್ರ!

ಈ ವಿ.ವಿ. ಆರಂಭವಾಗಿ ಒಂದು ವರ್ಷ ದಾಟಿತು ಎಂಬುದೇ ಯಾರಿಗೂ ನೆನಪಿದ್ದಂತಿಲ್ಲ. ಈ ವಿ.ವಿ.ಯ ವ್ಯಾಪ್ತಿ ಎಷ್ಟು ವಿಶಾಲವಾಗಿರಬೇಕಿತ್ತು ಎಂಬುದನ್ನು ಅದರ ಹೆಸರೇ ಹೇಳುತ್ತದೆ. 'ಕರ್ನಾಟಕ ಪಶುವೈದ್ಯಕೀಯ, ಪಶುಸಂಗೋಪನಾ ಮತ್ತು ಮೀನುಗಾರಿಕಾ ವಿ.ವಿ.'! ಇಷ್ಟೆಲ್ಲದಕ್ಕೂ ಕೇವಲ 5 ಕೋಟಿ ರೂಪಾಯಿ. ಈ ಇಡೀ ವಿ.ವಿ.ಯಲ್ಲಿಂದು 450 ವಿದ್ಯಾರ್ಥಿಗಳು ಮಾತ್ರ ಓದುತ್ತಿದ್ದಾರೆ. ಈ ವರ್ಷದ ಪ್ರವೇಶ ಮುಗಿದರೆ 550 ಆಗಬಹುದಷ್ಟೇ. ಉಪನ್ಯಾಸಕರಿಗೆ, ನೌಕರ ವರ್ಗಕ್ಕೆ ಸಂಬಳ ಕೊಡಲು ಆಗುತ್ತಿಲ್ಲವಾದ್ದರಿಂದ ಇನ್ನು ಮೂಲಭೂತ ಸೌಕರ್ಯಗಳ ಮಾತು ದೂರ ಉಳಿಯಿತು.

1984 ರಲ್ಲಿ ಧಾರವಾಡ ಕೃಷಿ ವಿ.ವಿ.ಯ ಆಧೀನದಲ್ಲಿ ಪಶುವೈದ್ಯಕೀಯ ಕಾಲೇಜನ್ನು ಇಲ್ಲಿ ಆರಂಭಿಸಲಾಯ್ತು. ಒಂದು ಕಾಲೇಜಾಗಿ ಯಾವ ಸ್ಥಿತಿಯಲ್ಲಿತ್ತೋ, ಇವತ್ತು ಒಂದು ವಿ.ವಿ. ಯಾಗಿ ಅದೇ ಸ್ಥಿತಿಯಲ್ಲಿದೆ! ಆದರೆ ಅಂದಿಗಿಂತ ಇಂದು ಖರ್ಚು ವೆಚ್ಚ ಹೆಚ್ಚಾಗಿ ಬಿಳಿಯಾನೆಯಾಗಿ ಹೋಗಿದೆ. ಕೃಷಿ ವಿ.ವಿ. ವ್ಯಾಪ್ತಿಯಲ್ಲಿ ಕೇವಲ ಕಾಲೇಜಿದ್ದಾಗ ಭಾರತೀಯ ಕೃಷಿ ಸಂಶೋಧನಾ ಪರಿಷತ್ (ICAR) ನಿಂದ ಹೇರಳವಾಗಿ ಅಭಿವೃದ್ಧಿ ಗ್ರ್ಯಾಂಟ್ಸ್ ಬರುತ್ತಿದ್ದವು. ಆಗ ರಾಜ್ಯ ಸರ್ಕಾರ ಕೇವಲ ಸಂಬಳ ಮಾತ್ರ ನೀಡಿದರೆ ಅದರ ಕರ್ತವ್ಯ ಮುಗಿದುಹೋಗುತ್ತಿತ್ತು. ಆದರೆ ಯಾವುದೇ ಪೂರ್ವ ಯೋಜನೆ ಇಲ್ಲದೇ ಕಾಲೇಜನ್ನು ವಿ.ವಿ. ಮಾಡುವುದಾಗಿ ಸರ್ಕಾರಗಳೆಲ್ಲ ಘೋಷಿಸುತ್ತಾ ಬಂದವು. ಆವಾಗಲೇ ICAR, 'ಕೃಷಿ ವಿ.ವಿ. ವ್ಯಾಪ್ತಿಯಿಂದ ಹೊರ ಹೋದರೆ ತಾನು ಅನುದಾನ ನೀಡಲಾಗುವುದಿಲ್ಲ' ಎಂದು ಎಚ್ಚರಿಸಿತ್ತು. ಆದರೆ ಹಠಕ್ಕೆ ಬಿದ್ದ, ಪ್ರಚಾರದ ತೆವಲಿಗೆ ಬಿದ್ದ ಸರ್ಕಾರಗಳು ಕೇಳಬೇಕಲ್ಲ? 2004 ರಲ್ಲಿ ಪಶುವೈದ್ಯಕೀಯ ವಿ.ವಿ. ಬಿಲ್ ರೆಡಿ ಆಯ್ತು. 2005 ರಲ್ಲಿ ಮಿರಾಜುದ್ದೀನ್ ಪಟೇಲ್ ಪಶು ಸಂಗೋಪನೆ ಸಚಿವರಾಗಿದ್ದಾಗ ಈ ನತದೃಷ್ಟ ವಿ.ವಿ. ಯ ಉದ್ಘಾಟನೆ ಆಗೇ ಬಿಟ್ಟಿತು. ಬೀದರ್ ಕ್ಯಾಂಪಸ್ ಅಲ್ಲದೇ, ಬೆಂಗಳೂರಿನ ವೆಟರ್ನರಿ ಕಾಲೇಜು, ಡೈರಿ ತರಬೇತಿ ಕಾಲೇಜು, ಮಂಗಳೂರಿನ ಮೀನುಗಾರಿಕಾ ತರಬೇತಿ ಕಾಲೇಜು ಹಾಗೂ ಯೋಜಿತ ಶಿವಮೊಗ್ಗ ವೆಟರ್ನರಿ ಕಾಲೇಜುಗಳು ಈ ವಿ.ವಿ. ವ್ಯಾಪ್ತಿಗೆ ಬರುತ್ತವೆ. ಕಾಲೇಜಿನ ಸ್ವರೂಪದಲ್ಲೇ ಇರುವ ಈ ವಿ.ವಿ.ಗೆ ಒಬ್ಬ ವೈಸ್‌ಚಾನ್ಸಲರ್, ರಿಜಿಸ್ಟ್ರಾರ್, ಕಂಟ್ರೋಲರ್, ನಾಲ್ವರು ಡೀನ್‌ಗಳು, 11 ಸದಸ್ಯರ ಬೋರ್ಡ್‌ಗಳೆಲ್ಲ ಇಂದು ಹೊರೆ ಹೊರೆಯಾಗಿ ಹೋಗಿವೆ. ಒಟ್ಟು 150 ಟೀಚಿಂಗ್ ಸ್ಟಾಫ್ ಇರಬೇಕಾಗಿತ್ತು. ಆದರೆ ಫಂಡ್‌ಗಳ ಕೊರತೆಯಿಂದ ನೂರು ಹುದ್ದೆ ಖಾಲಿ ಬಿದ್ದಿವೆ ಎಂದರೆ ಇಲ್ಲಿನ ಪರಿಸ್ಥಿತಿ ಅರ್ಥವಾದೀತು.



ವಿ.ಸಿ. ಆರ್.ಎಂ. ಶ್ರೀನಿವಾಸಗೌಡ

ಬೀದರ್

ಫಂಡ್ ಶೂನ್ಯ ಅಧ್ವಾನಗಳು ನೂರು! ನೂರು!


ಕೃಷಿ ವಿ.ವಿ. ವ್ಯಾಪ್ತಿಯಿಂದ ಹೊ... ಬರುವಾಗ ಕಟ್ಟಡ, ಕಚೇರಿಗಳೆಲ್ಲ ಕ... ವಿ.ವಿ. ಪಾಲಾಗಿ, ಬರೀ ಖಾಲಿ ಜಾಗ... ಈ ವಿ.ವಿ. ಯ ಮಡಿಲಿಗೆ ಬಂದ... ಸದ್ಯ 100 ಎಕರೆ ಜಾಗದಲ್ಲಿ ... ಬಿಲ್ಡಿಂಗ್‌ನಲ್ಲಿ ಈ ವಿ.ವಿ. ಜೀವ ಬಿಡುತ್ತಿ... ಪ್ರಾಯೋಗಿಕ ತರಬೇತಿಯನ್ನು ಲಕ್ಷ... ದಲ್ಲಿಟ್ಟುಕೊಂಡರೆ 300 ಎಕರೆ ಜಾ... ಬೇಕಾಗುತ್ತದೆ. ಆದರೆ ಕಳೆದ ವ... ಸರ್ಕಾರ ಅರಣ್ಯ ಭೂಮಿಯನ್ನು ವಿ.ವಿ... ಪಡೆದುಕೊಂಡು, ಅಲ್ಲಿ ಸಿಬ್ಬಂದಿಗೆ ಕ್ವಾರ್ಟರ್ಸ್ ಕಟ್ಟ... ಸುಪ್ರೀಂಕೋರ್ಟ್‌ನಿಂದ ಉಗಿಸಿಕೊಂಡು ತೆಪ್ಪಗಾಯ... ಈ ಎಡವಟ್ಟಿಗೆ ಎರಡು ಕೋಟಿ ರೂಪಾಯಿ... ಪೋಲಾಯ್ತು, ಯೋಜನೆಯೂ ಬಿದ್ದು ಹೋಯ...

ಫಂಡ್‌ಗಳಿಲ್ಲದೇ 24 R&D ಯುನಿಟ್‌ಗ... ನೊಣ ಹೊಡೆಯುತ್ತಿವೆ. ಗೋಕಾಕ್ ಬಳಿ... ಅರಭಾವಿಯಲ್ಲಿನ ಕಿಲಾರಿ (ಪ್ರಸಿದ್ಧ ಎತ್ತಿನ ತಳಿ) ತ... ಸಂರಕ್ಷಣಾ ಕೇಂದ್ರವನ್ನು ಮುಚ್ಚಿ ಅದನ್ನು ತೋಟಗಾರಿ... ಇಲಾಖೆಗೆ ಮಾರಿಕೊಳ್ಳಲಾಗಿದೆ. ಬೀದರ್... ಹಳ್ಳಿಖೇಡ್‌ನಲ್ಲಿ ದೇವನಿ ತಳಿ ಪಶು ಸಂರಕ್ಷಣಾ... ಸಂಶೋಧನಾ ಕೇಂದ್ರದಲ್ಲಿ ಸಮತೂಕದ ಆಹಾರ (Fee... Blocks) ತಯಾರಿಕಾ ಯೋಜನೆ ಫಂ... ಇಲ್ಲದೇ ನಿಂತೇ ಹೋಗಿದೆ. ಧಾರವಾ... ದಲ್ಲಿನ ಕುರಿ ಸಂರಕ್ಷಣಾ ಕೇಂದ್ರ 'ಬ... ಬ್ಯಾ' ಎಂದು ಅರಚುತ್ತಾ ಬಿದ್ದಿದೆ.

2004 -05ರಲ್ಲಿ ಆಂಧ್ರ ಸರ್ಕಾರ ತಿರುಪತಿಯ... ಆರಂಭಿಸಿದ ಪಶುವೈದ್ಯಕೀಯ ವಿ.ವಿ.ಗೆ ಹೇರಳ ಫಂಡ... ನೀಡಲಾಗುತ್ತಿದೆ. ತಿಮ್ಮಪ್ಪನ ಟ್ರಸ್ಟೇ 20 ಕೋ... ನೀಡಿದೆ. ತಮಿಳುನಾಡು ಸರ್ಕಾರ ತನ್ನ ಪಶು ವೈದ್ಯಕೀಯ... ವಿ.ವಿ. ಗೆ ವರ್ಷಕ್ಕೆ 37 ಕೋಟಿ ರೂ. ಅನುದಾ... ನೀಡುತ್ತಿದೆ. ಆದರೆ ಇಲ್ಲಿ ಕರ್ನಾಟಕ ಸರ್ಕಾರ ಐ... ಬಿಟಿ ಎನ್ನುತ್ತಾ ಪಶುವೈದ್ಯಕೀಯ ವಿ.ವಿ. ಗೆ 5 ಕೋ... ನೀಡಿ ತನ್ನ ಕಂತ್ರಿ ಬುದ್ಧಿ ತೋರಿಸುತ್ತಿದೆ. ಬೆಂಗಳೂರಿ... ITPLನಲ್ಲಿರುವ 30-40 ವಿದ್ಯಾರ್ಥಿಗಳಿಗೆ ಐ.ಟಿ...

'ಆಶ್ರಯ' ಮನೆಗಳಿಗೆ ಹೊನ್ನಳ್ಳಿ ಹುಳಗಳ ಮುತ್ತಿಗೆ!

ಜಬ್ಬಾರ್‌ಖಾನ್ ಹೊನ್ನಳ್ಳಿ ಸಮಾಜವಾದಿಯಾ? ತಾನೂ ತಿಂದು, ತನ್ನ ಹಿಂಬಾಲಕರಿಗೂ ತಿನ್ನಲು ಯಥೇಚ್ಛ ಅವಕಾಶ ನೀಡುವ ಹೊನ್ನಳ್ಳಿ ಹುಬ್ಬಳ್ಳಿ ಪಾಲಿಗೆ ಸಮಾಜ'ವ್ಯಾಧಿ'!



'ಆಶ್ರಯ' ಮನೆಗಳ ಹೆಸರಲ್ಲಿ ಸೂರಿಲ್ಲದ ಬಡವರನ್ನು ವಂಚಿಸಲೆಂದೇ ಶಾಸಕ ಜಬ್ಬಾರ್‌ಖಾನ್ ಹೊನ್ನಳ್ಳಿಯ ಬಾಲಗಳು ಸದಾ ರೆಡಿಯಾಗಿ ಕುಳಿತಿರುತ್ತವೆ.

ಸದ್ಯ ಹೊನ್ನಳ್ಳಿಯ ಆಶ್ರಯದಲ್ಲಿ ಆಶ್ರಯ ಮನೆಗಳ ಹೆಸರಲ್ಲಿ ದುಡ್ಡು ಮಾಡುತ್ತಿರುವಾತ ಶಿರಾಜ್ ಅಹ್ಮದ್ ಕುಡಚಿವಾಲೆ ಎಂಬ ದಗಲ್ಬಾಜಿ.


ಬೀಡಿ ಕಾರ್ಮಿಕರಿಗೆ 'ಮೋಡಿ'!

ಈಗ ಹೊನ್ನಳ್ಳಿ, ಶಿರಾಜ್ ಕುಡಚಿವಾಲೆಗಳ ಕಣ್ಣು ಬಿದ್ದಿರುವುದು ಬೀಡಿ ಕಾರ್ಮಿಕರ ಮೇಲೆ. ಬೀಡಿ ಕಾರ್ಮಿಕರಿಗೆ ಆಶ್ರಯ ಮನೆಗಳನ್ನು ನಿರ್ಮಿಸಿ ಕೊಡುತ್ತೇವೆಂದು ಅನಧಿಕೃತವಾಗಿ ಹಣ ಸಂಗ್ರಹ ಮಾಡುತ್ತಲೇ ಇದೆ ಈ ಜೋಡಿ.

ಬೀಡಿ ಕಾರ್ಮಿಕರನ್ನು ಯಾಮಾರಿಸಲೆಂದೇ ಹುಬ್ಬಳ್ಳಿ ತಾಲ್ಲೂಕು ಬೀಡಿ ಕಾರ್ಮಿಕರ ವಿವಿಧೋದ್ದೇಶ ಸಹಕಾರಿ ಸಂಘವನ್ನು ರಾತ್ರೋರಾತ್ರಿ ಹುಟ್ಟು ಹಾಕಿದೆ ಶಾಸಕನ ನುಂಗಣ್ಣರ ಪಡೆ. ಶಿರಾಜ್ ಅಹ್ಮದ್ ಕುಡಚಿವಾಲೆಯೇ ಈ ಪಡೆಗೆ ಲೀಡರ್. ಈಗಾಗಲೇ 500 ರಿಂದ 600 ಬೀಡಿ ಕಾರ್ಮಿಕರು ತಲಾ 1400 ರೂಪಾಯಿ ಕೊಟ್ಟು ಈ ಸಂಘದ ಸದಸ್ಯರಾಗಿ, ಟೋಪಿ ಹಾಕಿಸಿಕೊಳ್ಳಲು ರೆಡಿಯಾಗಿದ್ದಾರೆ. ಸಂಘದ ಪರವಾಗಿ ಶಿರಾಜ್ ರಸೀದಿ ಕೊಡುವುದು 1000 ರೂ.ಗಳಿಗೆ ಮಾತ್ರ! 400 ರೂ. ಏನು ಆತನ ಫೀಜಾ? ಅಥವಾ ಶಾಸಕ ಹೊನ್ನಳ್ಳಿಯ ಹಫ್ತಾ ವಸೂಲಿಯಾ? ನಿವೃತ್ತಿಯಾದ ಕಾರ್ಮಿಕರು, ತನಗೆ ಬೇಕು ಬೇಕಾದವರಿಗೆಲ್ಲ ಸದಸ್ಯತ್ವ ನೀಡಿರುವ ಶಿರಾಜ್, ಅಮಾಯಕ ಕಾರ್ಮಿಕರನ್ನೂ ಬುಟ್ಟಿಗೆ ಹಾಕಿಕೊಳ್ಳುತ್ತಿದ್ದಾನೆ. ನಿಜವಾದ ಬೀಡಿ ಕಾರ್ಮಿಕರ ಸಂಘ ತಕರಾರು ಎತ್ತದೆ ಸುಮ್ಮನೆ ಹೊಗೆ ಬಿಡುತ್ತಾ ಕುಳಿತಿದೆ.

ಹುಬ್ಬಳ್ಳಿ

ಶಿರಾಜ್ ಅಹ್ಮದ್ ತನ್ನ ನೇತೃತ್ವದ ಸಂಘದ ಹೆಸರಲ್ಲಿ ದೇನಾ ಬ್ಯಾಂಕ್‌ನಲ್ಲಿ ಎರಡು ಖಾತೆ (S.B. A/c No. 8602 ಮತ್ತು Current A/c No. C/A 445) ತೆಗೆದು, ಕಾರ್ಮಿಕರಿಗೆ ಹಣ ಜಮೆ ಮಾಡಲು ಫರ್ಮಾನು ಹೊರಡಿಸಿದ್ದಾನೆ. ಸರ್ಕಾರದ 'ಆಶ್ರಯ' ಮನೆಗಳನ್ನು ತನ್ನ ಸ್ವಂತ ಮನೆಗಳೆಂಬಂತೆ ಬಿಕರಿಗೆ ಇಟ್ಟಿರುವ ಶಿರಾಜ್ ಅಹ್ಮದನನ್ನು ನಂಬಿದ 300 ಕ್ಕೂ ಹೆಚ್ಚು ಕಾರ್ಮಿಕರು ಹಣ ಜಮೆ ಮಾಡಿಯಾಗಿದೆ. ಎಸ್.ಬಿ. ಅಕೌಂಟಿಗೆ 2 ಲಕ್ಷ ರೂಪಾಯಿ. ಕರೆಂಟ್ ಅಕೌಂಟಿಗೆ 14 ಲಕ್ಷ ರೂ.ಗಳು ಆಗಲೇ ಜಮೆಯಾಗಿವೆ. ಸಂಘದ ಸದಸ್ಯರಿಗೆ ಮನೆ ಕಟ್ಟಿಸಲಿರುವ ಭೂಮಿ ಎಲ್ಲಿದೆ ಎಂಬುದನ್ನೂ ತೋರಿಸದೆ ಹಗಲು ದರೋಡೆ ನಡೆಸಿರುವ ಶಿರಾಜ್‌ಗೆ ಕಾರ್ಪೊರೇಷನ್‌ನ ಕೊಳಕರ ಬೆಂಬಲವೂ ಇದೆ. ಪಾಲಿಕೆಯ 'ಆಶ್ರಯ' ಯೋಜನೆಯ ಅಧಿಕಾರಿಯಾಗಿ ನಿವೃತ್ತಿಯಾಗಿ, ಈಗ ಹೊನ್ನಳ್ಳಿ, ಜಗದೀಶ್ ಶೆಟ್ಟರ್, ಎಸ್.ಆರ್. ಮೋರೆಗಳ ಬೆಂಬಲದಿಂದ ಮತ್ತೆ ಪಾಲಿಕೆ... ವಕ್ಕರಿಸಿರುವ ಜಕ್ಕನಕಟ್ಟಿ ಎಂಬಾತ ಶಿರಾಜ್ ಅಹ್ಮದ್... ಕಂತ್ರಿ 'ಆಶ್ರಯ' ಸ್ಕೀಮ್‌ಗೆ ಬೆನ್ನೆಲುಬಾಗಿ ನಿಂತಿದ್ದಾ... ಈತನನ್ನು ಅದ್ಯಾವ ಮುನ್ಸಿಪಲ್ ಆಕ್ಟ್ ಪ್ರಕಾ...



ಮುಲ್ಲಾ ಮತ್ತು ಜಕ್ಕನಕಟ್ಟಿ

ಮರುನೇಮಕ ಮಾಡಿಕೊಳ್ಳಲಾಗಿದೆ ಎನ್ನುವುದನ್ನ... ಕಮಿಷನರ್ ಮಣಿವಣ್ಣನ್‌ರೇ ಹೇಳಬೇಕು! ಈ ಹಿಂದ... ಅಧಿಕಾರದಲ್ಲಿದ್ದಾಗ ಈ ಜಕ್ಕನಕಟ್ಟಿ 'ಆಶ್ರಯ... ಯೋಜನೆಯ ಫಲಾನುಭವಿಗಳ ಫೈಲ್‌ನ್ನೇ ಮಾಯ... ಮಾಡಿಬಿಟ್ಟಿದ್ದ. ತನಗೆ ಎರಡೆರಡು ಸಾವಿರ ಲಂಚ...

ಕುಡಚಿವಾಲೆಯ ಕುಕೃತ್ಯಗಳು!

ಹಿಂದೆ ಹಿಂಡಸಗೇರಿಯ ಹಿಂದೆ ಹಿಂದೆ ತಿರುಗುತ್ತಿದ್ದ ಶಿರಾಜ್ ಅಹ್ಮದ್ ಕುಡಚಿವಾಲೆ, ನಂತರ ಶಾಸಕ ಹೊನ್ನಳ್ಳಿಯ ಬಾಲಬಡುಕನಾದ. ಹಿಂದೊಮ್ಮೆ ನಾಟಿವೈದ್ಯರ ವಿರುದ್ಧ ಸಮರ ಸಾರಿ, ಆ ವೈದ್ಯರಿಂದ 'ನೈವೇದ್ಯ' ತಿಂದವನು ಇದೇ ಕುಡಚಿವಾಲೆಯೇ. ರೇಷನ್ ಕಚೇರಿಯಲ್ಲಿ ಗಜಿಬಿಜಿ ಮಾಡಿ 20 ನಕಲಿ ರೇಷನ್ ಕಾರ್ಡ್ ಪಡೆದು, ಅದರಲ್ಲಿ ಬರುವ ಅಕ್ಕಿ, ಸೀಮೆಎಣ್ಣೆ ಮಾರಿಕೊಳ್ಳುತ್ತಾನೆ. ತಾನು ನಿರುದ್ಯೋಗಿಯೆಂದು ಪಾಲಿಕೆಗೆ ವಂಚಿಸಿ ಯಲ್ಲಾಪುರ ಓಣಿಯಲ್ಲಿನ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆಯೊಂದನ್ನು ಬಾಚಿಕೊಂಡಿದ್ದಾನೆ. ಈಗ ಟಿಪ್ಪು ಶಾಹೀದ್ ಶಿಕ್ಷಣ ಸಂಸ್ಥೆಯ ಒಳಹೊಕ್ಕು, ರೊಕ್ಕ ಎಬ್ಬಿಸಲು ಕಾಯುತ್ತಿದ್ದಾನೆ.

ಇಂತಹವನನ್ನು ನಂಬಿದರೆ ಬೀಡಿ ಕಾರ್ಮಿಕರು ಆಶ್ರಯ ಮನೆ ಇರಲಿ, ಇದ್ದ ಮನೆಗಳನ್ನೂ ಕಳೆದುಕೊಳ್ಳಬೇಕಾಗುತ್ತದೆ. ಈ ಹಿಂದೆ ಕಾಂಗ್ರೆಸ್‌ನ ಪಾಲಿಕೆ ಸದಸ್ಯರಾದ ಖಾಸೀಮ್‌ಸಾಬ್ ನಿರುಗುಪ್ಪಿ, ಅಲ್ತಾಫ್ ಕಿತ್ತೂರ್, ಪ್ರಕಾಶ್ ಕ್ಯಾರಕಟ್ಟಿಗಳೇ ಹೊನ್ನಳ್ಳಿಯ ಆಶ್ರಯ-ಅವ್ಯವಹಾರಗಳ ವಿರುದ್ಧ ಧ್ವನಿ ಎತ್ತಿದ್ದನ್ನು ಬೀಡಿ ಕಾರ್ಮಿಕರು ನೆನಪು ಮಾಡಿಕೊಳ್ಳಲಿ.



ಕುಡಚಿವಾಲೆ

ಬೀಡಿ ಕಾರ್ಮಿಕರು ದಿಕ್ಕಾಪಾಲು!

ಶಿರಾಜ್ ಅಹ್ಮದ್ ಕುಡಚಿವಾಲೆ ಈಗ ಬೀಡಿ ಕಾರ್ಮಿಕರನ್ನು ಮೋಸ ಮಾಡುತ್ತಿರುವುದಕ್ಕೆ ಕಾರಣ ಬೀಡಿ ಕಾರ್ಮಿಕ ಸಂಘಟನೆ ದಾರಿ ತಪ್ಪಿರುವುದು. ಈ ಹಿಂದೆ ದಿವಂಗತ ಎ.ಜೆ. ಮುಧೋಳರಿದ್ದಾಗ ಬೀಡಿ ಕಾರ್ಮಿಕರಿಗೆ ಸಕಲ ಸವಲತ್ತುಗಳು ಸಿಗುತ್ತಿದ್ದವು. ನಂತರದ ದಿನಗಳಲ್ಲಿ ಹಲವಾರು ಬೀಡಿ ಕಂಪನಿಗಳು ಮುಚ್ಚಿ ಕಾರ್ಮಿಕರು ನಿರುದ್ಯೋಗಿಗಳಾದರು. ಈಗ ರಾಯಲ್ ಬೀಡಿ ಕಂಪನಿಯಲ್ಲಿ ಕೇವಲ 200 ಜನಕ್ಕೆ ವಾರದಲ್ಲಿ ಕೇವಲ 2-3 ದಿನ ಮಾತ್ರ ಕೆಲಸ. ಗಣೇಶ, ನಂಬರ್ 30 ಮತ್ತು ಮಂಗಳೂರು ಮೂಲದ ಕೆಲ ಬೀಡಿ ಕಂಪನಿಗಳು ಕಾಂಟ್ರ್ಯಾಕ್ಟ್ ಆಧಾರದ ಮೇಲೆ ಕೆಲಸ ನೀಡಿ ಕಾರ್ಮಿಕರನ್ನು ವಂಚಿಸುತ್ತಿವೆ. ಸುಮಾರು 400 ಕಾರ್ಮಿಕರು ಕಳೆದ 5 ವರ್ಷಗಳಿಂದ ಗ್ರ್ಯಾಚುಯಿಟಿ ಹಣಕ್ಕಾಗಿ ರಾಯಲ್ ಬೀಡಿ ಮಾಲೀಕರ ಕದ ತಟ್ಟುತ್ತಲೇ ಇದ್ದಾರೆ.

ಇಂತಹ ಅತಂತ್ರ ಸ್ಥಿತಿಯಲ್ಲಿರುವ ಕಾರ್ಮಿಕರಿಗೆ ಈಗ ಹೊನ್ನಳ್ಳಿ ಗ್ಯಾಂಗ್ ಗಂಟುಬಿದ್ದಿದೆ.

[illegible] ತನ್ನ ಪ್ರೇಯಸಿಯ ಕೊಲೆಯ [illegible] ಪುಳಕಗೊಳ್ಳುವನು

ಬೀದರ್‌ನಲ್ಲಿ ವಿ.ವಿ. ಬೆಂಗಳೂರಲ್ಲಿ ವಿ.ಸಿ.

ಇಲ್ಲಿಯ ಲೆಕ್ಚರರ್ಸ್, ಪ್ರೊಫೆಸರ್‌ಗಳಿಗೆ 22 ವರ್ಷಗಳಿಂದ ಪ್ರಮೋಷನ್ ಇಲ್ಲ. ಅವರು ವಿ.ವಿ. ಆರಂಭವಾದಾಗ ಯಾವ ಸ್ಥಾನದಲ್ಲಿದ್ದರೋ ಅಲ್ಲೇ ಇದ್ದಾರೆ. ಇಂತಹ ವಿ.ವಿ.ಗೆ ಬೆಂಗಳೂರು ಕಡೆಯ ಆರ್. ಎಮ್. ಶ್ರೀನಿವಾಸಗೌಡ ಎಂಬಾತನನ್ನು ವಿ.ಸಿ. ಯನ್ನಾಗಿ ಮಾಡಲಾಗಿದೆ. ಈತ ಬೀದರಲ್ಲಿರುವುದೇ ಇಲ್ಲ. ಬೆಂಗಳೂರೆಂದರೆ ಆತನಿಗೆ ಫುಲ್ ಲವ್ವು! So, ಆತ ಬೆಂಗಳೂರಲ್ಲೇ ಕುಳಿತು ಫೋನ್ ಮೂಲಕವೇ ಆಡಳಿತ ನಡೆಸುತ್ತಾನೆ. ಮೀಟಿಂಗ್ ಇದ್ದಾಗ, ಬೆಂಗಳೂರಿನಿಂದ ಹೈದರಾಬಾದ್‌ಗೆ ವಿಮಾನದಲ್ಲಿ ಪ್ರಯಾಣಿಸಿ, ಅಲ್ಲಿಂದ ಬೀದರ್‌ಗೆ ಬರುತ್ತಾನೆ. ಬಂದಷ್ಟೇ ವೇಗದಲ್ಲಿ ತಿರುಗಿ ಬೆಂಗಳೂರು ಪಾಲಾಗುತ್ತಾನೆ.

ವಿ.ವಿ. ಒಂದು ದಿಕ್ಕಿಗೆ,

ವಿ.ಸಿ. ಇನ್ನೊಂದು ದಿಕ್ಕಿಗೆ!

ವಿದ್ಯಾರ್ಥಿಗಳು ದಿಕ್ಕಾಪಾಲಾಗದೇ ಇರುತ್ತಾರಾ?

ಹೇಳಿ ಕೊಡುವ IIITಗೇ ಹತ್ತಾರು ಕೋಟಿ ನೀಡುವ ಸರ್ಕಾರ, ಗ್ರಾಮೀಣ ಭಾಗದ ಜೀವನಾಡಿ ಆದ ಜಾನುವಾರು ಸಂಪತ್ತನ್ನು ಬೆಳೆಸಲು ಕೇವಲ 5 ಕೋಟಿ ನೀಡುತ್ತದೆ ಎಂದರೆ ಅದು ನಾಚಿಕೆಗೇಡು!

ವಿ.ವಿ. ಗಳನ್ನು ಘೋಷಿಸುವ ಮೊದಲು ಪೂರ್ವ ತಯಾರಿ ಮಾಡದಿದ್ದರೆ ಹೀಗೇ ಆಗುತ್ತದೆ. ಬಿಜಾಪುರದ ಮಹಿಳಾ ವಿ.ವಿ., ತುಮಕೂರು ವಿ.ವಿ.ಗಳೂ ಆಕ್ಸಿಜನ್ ಇಲ್ಲದೇ ವಿಲವಿಲ ಒದ್ದಾಡುತ್ತಿವೆ. ಇಂತಹ ಈ ವೇಳೆಯಲ್ಲಿ ಸರ್ಕಾರ ಧಾರವಾಡದಲ್ಲಿ ಕಾನೂನು ವಿ.ವಿ. ಸ್ಥಾಪಿಸಿದರೂ ಅದು ವ್ಯರ್ಥಸಾಹಸವಲ್ಲವೇ?

ಇರುವ ವಿ.ವಿ. ಗಳಿಗೇ ಫಂಡ್ಸ್ ಕೊಡದ ಈ ಸರ್ಕಾರಗಳು ಊರೂರಲ್ಲಿ ವಿ.ವಿ. ಸ್ಥಾಪಿಸುತ್ತಾವೇನೊ?

– ಪಿ. ಕೆ. ಮಲ್ಲನ್‌ಗೌಡರ್

ಕೊಟ್ಟವರ ಹೆಸರನ್ನೆಲ್ಲಾ ಸೇರಿಸಿ ಹೊಸ ಫೈಲ್ ರೆಡಿ ಮಾಡಿಬಿಟ್ಟಿದ್ದ ಈ ಮನೆಗಳ್ಳ ಜಕ್ಕನಕಟ್ಟಿಗೆ ಶಿರಾಜ್‌ನಂತವರ ಸಾಥ್ ಸಿಕ್ಕಾಗ, ಬೀಡಿ ಕಾರ್ಮಿಕರ ತಲೆಗೆ ಟೋಪಿ ಬೀಳದೇ ಇರುತ್ತಾ?

ಮನೆಗಳನ್ನು ಕಟ್ಟಿಸಲು ಭೂಮಿ ಖರೀದಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದನ್ನು ಕೇಳಿದರೆ, "ಲ್ಯಾಂಡ್ ಗ್ರ್ಯಾಬರ್ ಕಾರ್ಪೊರೇಟರ್ ಹೊನ್ನಳ್ಳಿ ಶಿಷ್ಯ ಬರ್ನಾಬಸ್ ಮಂಟೂರ್ ರೋಡ್‌ನಲ್ಲಿ ಲ್ಯಾಂಡ್ ಕೊಡಿಸಿದ್ದಾನೆ" ಎಂಬ ಹಾರಿಕೆ ಉತ್ತರ ಕೊಡುತ್ತಿದ್ದಾರಷ್ಟೇ.

600 ರೂ. ಗೆ ಬೋರ್‌ವೆಲ್ ನೀರು!

ಆರು ವರ್ಷಗಳ ಹಿಂದೆಯೇ ತಲೆ ಎತ್ತಿದ 1600 ಮನೆಗಳ ಎಸ್.ಎಂ. ಕೃಷ್ಣ ನಗರ ಎಂಬ 'ಆಶ್ರಯ' ಬಡಾವಣೆಗೆ ಇನ್ನೂ ಮಲಪ್ರಭೆಯ ನೀರು ಹರಿಸಲಾಗಿಲ್ಲ. ಆದರೂ ಬೋರ್‌ವೆಲ್‌ಗಳ ನೀರಿನಿಂದಲೇ ಜನ ಹೇಗೋ ಬದುಕುತ್ತಿದ್ದರು. ಆದರೆ ಹೊನ್ನಳ್ಳಿಯ ಭಂಟರ ಕಣ್ಣು ಇಲ್ಲೂ ಬಿತ್ತು. ಹೊನ್ನಳ್ಳಿಯ ಚೇಲಾ ಲಕ್ಕಡ್‌ಹಾರ್‌ನ ಗ್ಯಾಂಗ್ ಈಗ "ಈ ನೀರು ಬಳಸುವವರು ಪ್ರತಿ ತಿಂಗಳು 600 ರೂ. ಕೊಡಬೇಕು" ಎಂದು ಸರ್ಕಾರದ ನೀರನ್ನೇ ಮಾರಲು ತಯಾರಾಗಿದೆ. ಆಶ್ರಯ ಕಾಲೋನಿಗಳಲ್ಲಿರುವ ನಲ್ಲಿಗಳನ್ನು ಕಿತ್ತು ಹಾಕುವುದಾಗಿ ಧಮಕಿ ಹಾಕುತ್ತಿದ್ದಾರೆ ಈ ಭಂಡರು!

ಹೊನ್ನಳ್ಳಿಯ ಆಪ್ತ ಕಾರ್ಯದರ್ಶಿ ಮುಲ್ಲಾ ಎಲ್ಲಾರೂ ನುಂಗೋದನ್ನು ನೋಡ್ತಾ ಸುಮ್ನೆ ಚಕ್ಕಳಮಕ್ಳ ಹಾಕಿಕೊಂಡು ಕೂಡುವುದಕ್ಕಾಗುತ್ತಾ? ಎಸ್.ಎಂ. ಕೃಷ್ಣ ನಗರದಲ್ಲಿ ಸರ್ಕಾರಿ ಶಾಲೆಗೆಂದು ಮೀಸಲಿಟ್ಟಿದ್ದ ಜಮೀನನ್ನೇ ಮುಲ್ಲಾ ಎಗರಿಸಿದ್ದಾನೆ. ಅಲ್ಲಿ ತನ್ನ ಖಾಸಗಿ ಶಾಲೆ ತೆರೆಯುತ್ತಾನಂತೆ ಈ ಹೊನ್ನಳ್ಳಿಯ ಬಾಲಬಡುಕ.

ಹಾಗೆಯೇ ಹನುಮಂತಪ್ಪ ದೊಡ್ಡಮನಿಗೆ ವಿದ್ಯುತ್ ಸಂಪರ್ಕ ನೀಡುವ 'ಜವಾಬ್ದಾರಿ', ರಾಕೇಶ್‌ಗೆ ಈ 'ಆಶ್ರಯ' ಬಡಾವಣೆಯಲ್ಲೇ ಪಡಿತರ ಅಂಗಡಿ ದಯಪಾಲಿಸುವ ಮೂಲಕ ಹೊನ್ನಳ್ಳಿ 'ಸರ್ವರಿಗೂ ಸಮಪಾಲು' ಎಂದು ಸರ್ಕಾರಿ ಆಸ್ತಿಯನ್ನು ತನ್ನಪ್ಪನ ಆಸ್ತಿಯೆಂಬಂತೆ ಬೇಕಾಬಿಟ್ಟಿಯಾಗಿ ಹಂಚಿ ತಿನ್ನುತ್ತಿದ್ದಾನೆ.

ಶಿರಾಜ್ ಅಹ್ಮದ್‌ನ ಟೋಪಿ ಬೀಳುವ ಮುನ್ನ ಬೀಡಿ ಕಾರ್ಮಿಕರು ಎಚ್ಚೆತ್ತುಕೊಳ್ಳಲಿ. ದಕ್ಷ ಎನಿಸಿಕೊಂಡ ಕಮಿಷನರ್ ಮನೆಗಳ್ಳರ 'ಆಶ್ರಯ' ದಾಹಿಗಳ, 'ಆಶ್ರಯ' ಬಯಸುವವರ ಹಿತಾಸಕ್ತಿ ಕಾಪಾಡುತ್ತಾರೆಯೆ?

-ವರದಿಗಾರ

ಲೋಕಾಯುಕ್ತರ ಬಲೆಗೆ ಎಂ.ಪಿ. ಪ್ರಕಾಶ್ ಶಿಷ್ಯ

ಇದು ನುಂಗಾಟದ ವಿಷ್ಯ




ಲೋಕಾಯುಕ್ತರ ಬಲೆಗೆ ಬಿದ್ದ ಎಂ.ಎಸ್.ಎಂ. ಶ್ರೀಪ್ರಕಾಶ್

ಕೊಪ್ಪಳ

ಕೊಪ್ಪಳ ವಿಭಾಗ ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್, ಸೊಕ್ಕಿನ ಸರದಾರ, ಸರ್ವಾಧಿಕಾರಿ ಎಂ.ಎಸ್.ಎಂ. ಶ್ರೀಪ್ರಕಾಶ್ ಎಂಬ ಖದೀಮ ಬರೀ ಹನ್ನೆರಡೂವರೆ ಸಾವಿರ ಲಂಚ ಪಡೆಯುವಾಗ ಜುಲೈ 26 ರಂದು ಲೋಕಾಯುಕ್ತರಿಗೆ ಸಿಕ್ಕು ಬಿದ್ದಿದ್ದಾನೆ. ಬೇಲ್ ಪಡೆದು ಮತ್ತೆ ಎಂದಿನಂತೆ 27 ರಂದು ಕಚೇರಿಗೆ ಬಂದು 8 ಕೋಟಿ ಎಲ್‌ಓಸಿ ಹಣದ ಚೆಕ್ ಬರೆಯುತ್ತ ಕುಳಿತಿದ್ದಾನೆ. ಯಥಾ ಪ್ರಕಾರ ಈತನ ತಿನ್ನಾಟ ಮುಂದುವರಿದಿದೆ. ಜಿಲ್ಲೆಯ ಜನ ಪ್ರತಿನಿಧಿಗಳ ಮುಖದ ಮೇಲೆ ಸ್ವಲ್ಪವೂ ನಾಚಿಕೆ ಎಂಬುದು ಕಾಣುತ್ತಿಲ್ಲ.

ಗ್ರಾಮೀಣ ರಸ್ತೆಗಳ ರಿಪೇರಿಗೆಂದು ಜಿಲ್ಲೆಗೆ ಬಂದ 80 ಲಕ್ಷ ಹಣ ಒಯ್ದು ಸಚಿವ ಅನ್ಸಾರಿಯ ಕೈಗೆ ಕೊಟ್ಟು, ಗಂಗಾವತಿ ಸಿಟಿಯ ರೋಡ್‌ಗಳನ್ನು ಮಾಡಿಸಿಕೊಳ್ಳಿ ಎಂದಿದ್ದಾನೆ ಈ ಪ್ರಕಾಶ. ಕೆಲಸವೂ ಆಗಿಹೋಗಿದೆ. ಇದು ಬಯಲಾಗಿಯೇ ಮೊನ್ನೆ ಜಿಲ್ಲಾ ಪಂಚಾಯ್ತಿಯ ಕೆಡಿಪಿ ಮೀಟಿಂಗ್‌ನಲ್ಲಿ ಇವನ ವಿರುದ್ಧ ಕ್ರಿಮಿನಲ್ ಕೇಸ್ ಹಾಕಲು ನಿರ್ಣಯವಾಗಿತ್ತು. ಅಷ್ಟರಲ್ಲೇ ಲೋಕಾಯುಕ್ತರಿಗೆ ಸಿಕ್ಕು ಬಿದ್ದಿದ್ದಾನೆ.



ಈ ಪ್ರಕಾಶ ಹುಂಬ ಅಂತೀರೋ, ಭಂಡ ಅಂತೀರೋ ನೀವೇ ನಿರ್ಧರಿಸಿ. ಸಿಕ್ಕುಬಿದ್ದ ಈತನ ಕಚೇರಿ ಎದುರೇ ಲೋಕಾಯುಕ್ತ ಕಚೇರಿ ಇದೆ. ಎರಡೂ ಕಚೇರಿ ನಡುವೆ 20 ಅಡಿ ರಸ್ತೆ ಮಾತ್ರ ಗ್ಯಾಪ್ ಇರುವುದು. ಈತನ ಕಚೇರಿ ಪಕ್ಕದಲ್ಲಿ ಸಾಲಾಗಿ ಅಸಿಸ್ಟೆಂಟ್ ಕಮಿಷನರ್, ನ್ಯಾಯಾಧೀಶರು, ಡಿವೈಎಸ್‌ಪಿ, ಎಸ್.ಪಿ., ತಹಶೀಲ್ದಾರ್ ಮನೆಗಳಿವೆ. ಈತನ ಬಿಂದಾಸ್ ಭಂಡತನಕ್ಕೆ ಕಾರಣವಾಗಿರೋದು ರಾಜ್ಯದ ಗೃಹಮಂತ್ರಿ 'ಜೋಕುಮಾರಸ್ವಾಮಿ' ಎಂ.ಪಿ. ಪ್ರಕಾಶರ ಶಿಷ್ಯ ತಾನು ಎಂಬುದು. ಮೇಲಾಗಿ ಸ್ವಜಾತಿ ಬಾಂಧವ ಎಂಬುದು! ಈತನನ್ನು ಕೊಪ್ಪಳಕ್ಕೆ ಕರೆತಂದು ಪುಣ್ಯ ಕಟ್ಟಿಕೊಂಡವನು ಕ್ಲಾಸ್ ಒನ್ ಗುತ್ತಿಗೆದಾರ ಮತ್ತು ಸಂಘದ ಗೌರವಾಧ್ಯಕ್ಷ ಎಸ್.ಆರ್. ನವಲಿ ಹಿರೇಮಠ!


ಯಲಬುರ್ಗಾದ ಗುತ್ತಿಗೆದಾರ ನಡುಲಮನಿ ಯಮನೂರಪ್ಪ ಅಲ್ಲಿನ ಪಟ್ಟಣ ಪಂಚಾಯಿತಿಗೆ ಕಂಪೌಂಡ್ ಕಟ್ಟಿದ್ದ ಬಾಕಿ ಮೊತ್ತ 1 ಲಕ್ಷ 20 ಸಾವಿರ, ಅದೇ ರೀತಿ ಗುತ್ತಿಗೆದಾರ ಚನ್ನಬಸಪ್ಪ ಮಾಲಗಿತ್ತಿ ಎಂಬುವವರು ಕುಕನೂರ ಪೊಲೀಸ್ ಠಾಣೆಯ ಕಂಪೌಂಡ್ ಕಟ್ಟಿಸಿದ್ದ ಬಿಲ್‌ನಲ್ಲಿ 25 ಸಾವಿರ ಬಾಕಿ ಉಳಿಸಿಕೊಂಡಿದ್ದ ಈ ಪ್ರಕಾಶ. ಬಿಲ್ ನೀಡುವಂತೆ ಹಲವಾರು ಸಾರಿ ಮನವಿ ಮಾಡಿದರೂ ಪ್ರಕಾಶನದು ಒಂದೇ ವಾಕ್ಯದ ಉತ್ತರ 'ಚಲ್‌ರೇ... ಚಲ್... ಚಲ್....'! ಹಾಗಂತ ಕೊಪ್ಪಳ ಪಿಡಬ್ಲ್ಯುಡಿ ಏನು ಖಾಲಿ ಖಜಾನೆಯಲ್ಲ, ಪ್ರತಿ ವರ್ಷ ಹತ್ತಾರು ಕೋಟಿ ರೂಪಾಯಿ ಬರ್‍ತದೆ. ಆದರೆ ಬಂದ ಹಣವೆಲ್ಲ ಬೇನಾಮಿ ಮೆಟೀರಿಯಲ್ ಸರಬರಾಜುದಾರರಿಗೆ ಹೋಗಿ ಬಿಡುತ್ತದೆ. ಹೀಗಾಗಿ ಸಾಲಸೋಲ ಮಾಡಿ ದುಡ್ಡು ಹಾಕಿದ ಗುತ್ತಿಗೆದಾರರಿಗೆ ಬಾಯಿ ಬಡಿದುಕೊಳ್ಳುವುದೇ ಖಾಯಂ ಕಾಯಕ! ಅಷ್ಟೇ ಅಲ್ಲ, ಜಿಲ್ಲಾ ಗುತ್ತಿಗೆದಾರರ ಸಂಘದಿಂದ ಈತನ ಕೂದಲು ಕೊಂಕಿಸಲು ಆಗುತ್ತಿಲ್ಲ, ಏಕೆಂದರೆ ಸಂಘದ ಗೌರವಾಧ್ಯಕ್ಷನೇ ಈತನ ರಕ್ಷಾಕವಚ. ಇವನು ರೈಡಿಗೆ ಬಿದ್ದ ಕೂಡಲೇ ಈ ಸಂತಸದ ಸುದ್ದಿ ಹೇಳಿಕೊಳ್ಳಲು ಜಿಲ್ಲೆಯ ಗುತ್ತಿಗೆದಾರರು, ಹಾಲಿ, ಮಾಜಿ, ಸಣ್ಣಪುಟ್ಟ ರಾಜಕಾರಣಿಗಳ ಸುಮಾರು ಐನೂರು ಫೋನ್ ಕಾಲ್‌ಗಳಲ್ಲಿ ಇವನದೇ ಸುದ್ದಿ. ಅಂದ್ರೆ ಪ್ರಕಾಶ ಎಷ್ಟು ಬೇಸರವಾಗಿರಬಹುದು?

ಎಷ್ಟೇ ಗೋಗರೆದರೂ 'ಪೆಹಲೆ ಹಾಥ್‌ಮೆ ಪೈಸಾ' ತತ್ವದ ಪ್ರಕಾಶನ ಅಹಂಕಾರಕ್ಕೆ ಗತಿ ಕಾಣಿಸಲೆಂದೇ ಇಬ್ಬರು ಗುತ್ತಿಗೆದಾರರು ಲೋಕಾಯುಕ್ತರಿಗೆ ದೂರು ನೀಡಿದ್ದಾರೆ. ದಾಳಿಯ ದಿನ ಕುಷ್ಟಗಿಯಲ್ಲಿ ಆಗಸ್ಟ್ 11 ರಂದು ನಡೆಯುವ ಉಪ್ಪಾರ ಸಮಾವೇಶಕ್ಕೆ ಬರುವ ಕುಮಾರ್, ದೇವೇಗೌಡರಿಗಾಗಿ ಹೆಲಿಪ್ಯಾಡ್ ನಿರ್ಮಾಣ ನೋಡಲು ಹೋಗಿದ್ದ. ಅಲ್ಲಿಂದ ಯಲಬುರ್ಗಿಗೆ ಹೋಗಬೇಕಿತ್ತು. ಆದರೆ ಪ್ರಕಾಶನ ಪಾಪದ ಕೊಡ ತುಂಬಿತ್ತು. ಅಂದು ಸಂಜೆ ಯಲಬುರ್ಗಿ ಟೂರ್ ಕ್ಯಾನ್ಸಲ್ ಮಾಡಿ ಕೊಪ್ಪಳಕ್ಕೆ ಬಂದು ಸಿಕ್ಕು ಬಿದ್ದಿದ್ದಾನೆ. ನಾಳೆ ಆಗಸ್ಟ್ 11 ರಂದು ಈತನೇ ಮುಂದೆ ನಿಂತು ಕುಮಾರ್-ಪ್ರಕಾಶರನ್ನು ಸ್ವಾಗತಿಸಿದರೂ ಆಶ್ಚರ್ಯವಿಲ್ಲ.

ಇಡೀ ಗುತ್ತಿಗೆದಾರರನ್ನು ಎದುರು ಹಾಕಿಕೊಂಡು ಪ್ರಕಾಶ ಸೊಕ್ಕಿನಿಂದ ಮಾತಾಡಲು, ಸರ್ವಾಧಿಕಾರಿಯಾಗಲು ಜಿಲ್ಲೆಯ ರಾಜಕಾರಣಿಗಳೇ ಕಾರಣ. ಏಕೆಂದರೆ 1989 ರಿಂದ ಆರು ವರ್ಷ ಹಿರೇಹಳ್ಳ ಯೋಜನೆಯಲ್ಲಿ ತಿಂದು, ತಿನ್ನಿಸಿ ನಂತರ ಇದೇ ಕೊಪ್ಪಳದಲ್ಲಿ ಜೇಇಯಾಗಿ ತಿಂದಿದ್ದು ಅರಗಿಸಿಕೊಳ್ಳುವುದನ್ನು ಕಲಿತ ಪ್ರಕಾಶ ಕೆಲ ಕಾಲ ಕಾರವಾರದಲ್ಲಿದ್ದ. ಅಲ್ಲಿಂದ ಕೈ ಹಿಡಿದು ಕರಕೊಂಡು ಬಂದದ್ದು ನವಲಿಹಿರೇಮಠ. 'ಕೊಪ್ಪಳದಾಗ ತಿಂದುಂಡುಕೊಂಡು ಹಾಯಾಗಿರಪ್ಪ' ಅಂತ ಹಾರೈಸಿದವರು ಮಾತ್ರ ಎಂ.ಪಿ. ಪ್ರಕಾಶ್.

ಎಷ್ಟು ತಿಂದ್ರೂ ರುಬ್ಬಿ ಅರಗಿಸಿಕೊಳ್ಳುವ ಗ್ರೈಂಡರ್ ಏನಾದರೂ ಈತನ ಹೊಟ್ಟೆಯಲ್ಲಿದೆಯೇನೋ ಅಂತ ಅನುಮಾನ. ಈಗ ಇಲಾಖೆ ಕಚೇರಿ ಕಟ್ಟಡದ 40 ಲಕ್ಷದ ಟೆಂಡರನ್ನು ಗಂಗಾವತಿಯ ಆನಂದ ಎಂಬ ಬೇನಾಮಿ ಹೆಸರಲ್ಲಿ ಇವನೇ ನಿರ್ಮಿಸುತ್ತಿದ್ದಾನೆ. ನಿಯಮದ ಪ್ರಕಾರ ಟೆಂಡರ್ ಕಾಮಗಾರಿಗಳಿಗೆ ಇಲಾಖೆ ವಾಹನ ಬಳಸಬಾರದು. ಆದರೆ ಟ್ರಾನ್ಸ್‌ಪೋರ್ಟ್ ಹಣ ಉಳಿಸಲು ಇಲಾಖೆಯ ಲಾರಿಯಲ್ಲೇ ಸಿಮೆಂಟು, ಕಬ್ಬಿಣ ಎಲ್ಲಾ ತಂದಿದ್ದಾನೆ.

ಕಟ್ಟಡ ಅರ್ಧವಾಗಿದ್ದರೂ ಅಲ್ಲೇ ಕಚೇರಿ ಆರಂಭಿಸಿದ್ದಾನೆ. ಸಿಬ್ಬಂದಿಗೆ ವಿಪರೀತ ಕಾಟ ನೀಡುತ್ತಾನೆ. ಇವನ ಕಾಟಕ್ಕೆ AEE ಪ್ರೊಬಾಂಡ್ VRS ತೆಗೆದುಕೊಳ್ಳಲು ರೆಡಿ ಆಗಿದ್ದಾನೆ. ವಿಐಪಿಗಳಿಗಾಗಿ ಲಕ್ಷಾಂತರ ಬೆಲೆಯ 5 ಮೊಬೈಲ್ ಶೌಚಾಲಯ ಖರೀದಿಯಾಗಿದ್ದರೂ ಕೂಡ ಅವೆಲ್ಲಾ ನಾಪತ್ತೆಯಾಗಿಬಿಟ್ಟಿವೆ. ಪ್ರತಿಸಾರಿ ಎಲ್‌ಓಸಿ ಹಣ ಬಂದಾಗ ಪ್ರತಿ ಉಪ ವಿಭಾಗದಿಂದ ಸ್ಟೇಷನರಿ ಖರ್ಚು ಅಂತ ಐದೈದು ಲಕ್ಷ ಜೇಬಿಗಿಳಿಸುವ ಪ್ರಕಾಶ ಮೊಬೈಲ್ ಶೌಚಾಲಯಗಳನ್ನೂ ಹೊಟ್ಟೆಗೆ ಇಳಿಸಿಬಿಟ್ಟನೆ? ಖದೀಮ ಪ್ರಕಾಶನ ಇನ್ನೊಂದು ವಿಶೇಷ ಅಂದ್ರೆ ಜಿಲ್ಲೆಯ ಕಚೇರಿಗಳು ರವಿವಾರ ಬಾಗಿಲು ಹಾಕಿದ್ರೆ, ಇವನು ಕಚೇರಿಯಲ್ಲಿ ಕುಂತು ಚೆಕ್‌ಗಳನ್ನು ಬರೀತಿರುತ್ತಾನೆ. ಕೆಲವೊಮ್ಮೆ ಅಂತೂ ಬ್ಲಾಂಕ್ ಚೆಕ್‌ಗಳಿಗೆ ಸಹಿ ಹಾಕಿ ಹೊಸಪೇಟೆಯ ಮನೆಯಲ್ಲಿ ಮಲಗಿಬಿಡ್ತಾನೆ. ನವಲಿ ಹಿರೇಮಠನಂತಹ ಪೋಷಕ ಪಾತ್ರಗಳಿಗೆ ಚೆಕ್ ಕೊಡುವಂತೆ ಫೋನ್‌ನಲ್ಲಿಯೇ ಸಿಬ್ಬಂದಿಗೆ ಆದೇಶ ನೀಡುತ್ತಾನೆ. ಇನ್ನು ಹೊಸಪೇಟೆಯ 'ಟೈಸ್' ಕಂಪನಿ ಮತ್ತು ಇವನ ಮಧ್ಯೆ ನಡೆದಿರುವ ಲೇವಾದೇವಿಯ ಹೂರಣ ಬಯಲಿಗೆ ಬರಲಿದೆ. ಅಲ್ಲದೇ ಗಂಜ್ ಸರ್ಕಲ್‌ನಿಂದ ಗಡಿಯಾರ ಕಂಬದವರೆಗಿನ ರಸ್ತೆ ಅಗಲೀಕರಣ, ಅಭಿವೃದ್ಧಿಯ 40 ಲಕ್ಷದಲ್ಲಿ ಆಗಿರುವ




ಸರ್ಕಾರಿ ವಾಹನಗಳನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿರುವುದು

ಅವ್ಯವಹಾರ ಮತ್ತು ಚಿಕ್ಕಸಿಂದೋಗಿ-ಮಂಗಳಾಪುರ ರಸ್ತೆಯ 48 ಲಕ್ಷದ ಕೆಲಸ, ಅಳವಂಡಿ-ನೀರಲಗಿ ನಡುವಿನ 15 ಲಕ್ಷದ ಸೇತುವೆ, ಹಾಲವರ್ತಿ ರಸ್ತೆಯ 90 ಲಕ್ಷದ ಕಳಪೆ ಕಾಮಗಾರಿ ಇವುಗಳ ಬಗ್ಗೆಯೂ ತನಿಖೆ ಆಗಬೇಕಿದೆ. ಇನ್ನು ಪ್ರಕಾಶನ ಉದ್ಧಟತನದ ಬಗ್ಗೆ ಹೇಳಬೇಕೆಂದರೆ ವಿಐಪಿಗಳಿಗೆ ಕಟ್ಟಿಸಿರುವ ಐಬಿ ಎಂಬುದು ಇವನ ಪಾಲಿಗೆ . ಫುಟ್‌ಪಾತ್‌ಗಳಿಗೆ ಹೊಂದಿಸುವ ಸ್ಲ್ಯಾಬ್ ತಯಾರಿಸುವ ಕೊಟ್ಟಿಗೆಯಾಗಿದೆ. ವಿವಾದದಲ್ಲಿರುವ ಹಲಗೇರಿ ಬಸವರಾಜರ ಜಾಗದಲ್ಲಿ ಮಿನಿ ಬಸ್‌ಸ್ಟ್ಯಾಂಡ್ ನಿರ್ಮಿಸಲು ಹೋಗಿ ಮತ್ತೊಂದು ವಿವಾದ ಹುಟ್ಟಿಸುತ್ತಿದ್ದಾನೆ.

ಲೋಕಾಯುಕ್ತ ದಾಳಿಗೆ ಸಿಕ್ಕು ಬೇಲ್ ಪಡೆದು ಮರುದಿನ ಬಂದ ಪ್ರಕಾಶನಿಗೆ ಗುತ್ತಿಗೆದಾರನೊಬ್ಬ 'ಏನ್ಸಾರ್, ಹಿಂಗಾಯ್ತು ಛೇ' ಎಂದರೆ 'ಅಯ್ಯೋ ಇರ್‍ಲಿ ಬಿಡು, ನಮ್ಮ ಗುರು ಎಂ.ಪಿ. ಪ್ರಕಾಶ್, ಸಿಎಂ ಕುಮಾರಸ್ವಾಮಿನೆ 150 ಕೋಟಿಯಲ್ಲಿ ಬಿದ್ದಿರುವಾಗ ನಂದೇನು ಮಹಾ' ಅಂದನಂತೆ. ಥೂ-ಭಂಡತನಕ್ಕೂ ಒಂದು ಮಿತಿ ಬೇಡವಾ? ಆಳುವವರಲ್ಲಿಯೇ ಅದಿಲ್ಲದಿರುವಾಗ ಇವನಲ್ಲಿ ಎಲ್ಲಿಂದ ಬಂದೀತು?

-ಹುಸೇನ್ ಪಾಷಾ



ಪಿ.ಕೆ. ಮಲ್ಲನಗೌಡರ್

ಬಿಟ್ bit ಹಿಟ್!



ನೀ ಹಿಂಗ್ ಸುಮ್ಮನಿದ್ರ ಮೈಮ್ಯಾಗ್ ಏರಿ ಬರ್‍ತಾವ ಈ ಬಾಡ್‌ಕೊಗಳು... ಇವತ್ ನಿನಗ ಅಂತಾನ... ನಾಳೆ ರಕ್ಷಿತಾಗ ಅಂತಾನ.... ಹಂಗ ಬಿಟ್ರ ನಮ್ಮಂತಾ ಕಾಲೇಜ್ ಹುಡುಗ್ಯಾರ್ನೂ ಅಂತಾನ ಈ ಶ್ರೀವಸ್ತ...

ನಮ್ ಗೌರು ಮೇಡಮ್ಮು ನಾಲ್ಕೈದು ಸಲ ಉಗಿದು ಬರೆದಿದ್ರೂ ಶ್ರೀಮನ್ನಾಗೆ ಬುದ್ಧಿ ಬಂದಿಲ್ಲ ನೋಡು. ಶೆಟ್ಟಿ ಸರ್‌ಗೆ ಏನೇನೋ ಬೈದು, ಕೊನಿಗೆ ಎಲ್ಲಾರ್ ಮುಂದ್ ಮುಂಗ್ಯಾ ಆಗಿದ್ದ ಆ ಹಲ್ಕಟ್ 'ಶ್ರೀವಸ್ತ'... ಅಲ್ಲಾ 'ರಾತ್ರಿ 10ರಿಂದ ಮುಂಜಾನೆ 5ರ ತನಕ ಪಾರ್ಟಿ ಮಾಡ್ತಾಳನು ಕೇಳು' ಅಂತಾನಂದ್ರ ಅಂವ ಮೆಂಟಲ್ ನನ್ಮಗನೇ ಇರ್ಬೇಕು... ತಾರಕ್ಕಂಗೂ ಬೈದಾನಂತ....

ಅದೆಲ್ಲ ಇರ್ಲಿ, ನೀವೆಲ್ಲಾ ನಟಿಯರೂ ಸುಮ್ನೆ ಬಾಯ್ಮುಚ್ಚಿಕೊಂಡು ಕುಂತರ ಹ್ಯಾಂಗಿದು? ಶ್ರೀಮನ್ನಗಳೂ ಬಾಯಿ ತೆರೆದೇ ಇರ್‍ತಾವು ನೋಡು. ಅವ್ನ ತಗಡು ಸಿನಿಮಾ ಗಂಡ-ಹೆಂಡ್ತಿ ಹಳ್ಳ ಹಿಡಿಯೋದಂತೂ ಗ್ಯಾರಂಟಿ ಬಿಡ್ಬೆ...

ಇಲ್ಲಿ ಹುಬ್ಬಳ್ಳಾಗ್ ಏನರ ಅವ ಹಿಂಗ್ ಮಾತಾಡಿದ್ದಂದ್ರ ಹೆಣ್ಮಕ್ಕಳೇ ಸೇರಿ ಚಪ್ ಚಪ್ಲೀಲಿ ಹೊಡೆತಿದ್ರು...

ನೀ ಮೊದ್ಲ ಆಳಮುಂಜಿ... ಅತಗೊಂತ ಕುಂದ್ರ ಬ್ಯಾಡ ನೋಡವಾ... ನಮ್ಗೂ ಅಳು ಬರ್‍ತೈತಿ...

ಅಂತ ಬಾಡ್‌ಕೊಗಳಿಗೆ ಇನ್ಮೇಲೆ ಯಾರೂ ಕೇರ್ ಮಾಡಬ್ಯಾಡ್ರಿ... ಅಂವಾ ಓದಿದ School of thought(ತಾಟು!) ಗಬ್ ಇರುವಾಗ ಏನ್ ಮಾಡಕಾಗುತ್ತೆ? ಮಹೇಂದರ್ ಮಾಮಾಗ ನನ್ ನಮಸ್ಕಾರ ತಿಳಿಸು.....

-ಇಂತಿ ಮುನ್ನಿ (Zero Hour), ಧಾರವಾಡ



ಕಾರ್ಪೊರೇಟ್ ಪ್ರಭುತ್ವ!

ಮಾಹಿತಿಹಕ್ಕು ಕಾಯ್ದೆಗಾದ ಗತಿಯೇ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (NREGA)ಗೂ ಆಗುತ್ತಿದೆ.

ವಿಕೇಂದ್ರೀಕರಣದ ಬೇರುಮಟ್ಟದ ನ್ಯೂಕ್ಲಿಯಸ್‌ಗಳಾದ ಪಂಚಾಯ್ತಿಗಳಿಗೆ ಸಂಪೂರ್ಣ ಅಧಿಕಾರ ಕೊಡದ ಹೊರತು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಯಶಸ್ವಿ ಆಗುವುದು ಸಾಧ್ಯವೇ ಇಲ್ಲ. ರಾಜ್ಯ ಸರ್ಕಾರಗಳು ಎಲ್ಲ ತಮ್ಮ ಮೂಗಿನ ನೇರಕ್ಕೇ ಆಗಬೇಕು ಎನ್ನುತ್ತಿದ್ದರೆ, ಕೇಂದ್ರ ಸರ್ಕಾರವೂ ರಾಜ್ಯಗಳ ಮೇಲಿನ ತನ್ನ ಹಿಡಿತ ಸಡಿಲವಾಗಬಾರದು ಎಂದು ಯೋಚಿಸುತ್ತಿದೆ. ಪಂಚಾಯ್ತಿಗಳು ನೇರವಾಗಿ ರಾಷ್ಟ್ರೀಯ ಬ್ಯಾಂಕ್‌ಗಳಿಂದ ಫಂಡ್ ಸ್ವೀಕರಿಸುವಂತಾಗಬೇಕು ಎಂದರೆ ಆರ್ಥಿಕ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣೆ ಕಾಯ್ದೆಗೆ ತಿದ್ದುಪಡಿ ತರಲೇಬೇಕು. ಆದರೆ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಇದು ಇಷ್ಟವೇ ಇಲ್ಲ. ರೈತರ ಆತ್ಮಹತ್ಯೆಗಳನ್ನು ತಡೆಯಲು ವಿದರ್ಭಕ್ಕೆ ಹೋದ ಪ್ರಧಾನಿ 3750 ಕೋಟಿ ರೂಪಾಯಿಗಳ ಪ್ಯಾಕೇಜ್ ಘೋಷಿಸಿ ಬಂದರು. ಆದರೆ ಅವರು ಪ್ರಮುಖ ವಿಷಯಗಳ ಕುರಿತು ಮಾತೇ ಆಡಲಿಲ್ಲ. ಸಣ್ಣ ಮಧ್ಯಮ ರೈತರು WTO ನಿಯಮಗಳ ಅಡಿಗೆ ಸಿಕ್ಕು, ಸಬ್ಸಿಡಿ ಮತ್ತು ಬೆಳೆವಿಮೆಗಳಿಂದ ದೂರವಾಗಿ ಆತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾರೆ ಎನ್ನುವ ಸತ್ಯವನ್ನು ಗಂಟಲಲ್ಲೇ ಇಟ್ಟುಕೊಂಡು ಹೋದರು ನಮ್ಮ ಪ್ರಧಾನಿ! ಸರ್ಕಾರವೇ ಗ್ರಾಮೀಣರಿಗೆ ಸಾಲಸೌಲಭ್ಯ ಒದಗಿಸಬೇಕಾದ ಜವಾಬ್ದಾರಿ ಹೊರಬೇಕು ಎನ್ನುವುದು ಗೊತ್ತಿದ್ದೂ ಮೂಕನಂತಾಗಿದ್ದಾರೆ ನಮ್ಮ ಪ್ರಧಾನಮಂತ್ರಿ.

ಯಾಕೆ ಗೊತ್ತೆ?

ಐಎಮ್‌ಎಫ್, ವಿಶ್ವಬ್ಯಾಂಕ್‌ಗಳ ಪ್ರಕಾರ "ಕಾರ್ಪೊರೇಟ್ ಸಂಸ್ಥೆಗಳು ಆರ್ಥಿಕ ದರ (GDP) ವೃದ್ಧಿ ಮಾಡುತ್ತವೆ... ಅದರಿಂದ ಬಡತನ ನಿರ್ಮೂಲನೆ ಆಗುತ್ತದೆ...!"



ಈ ನೀತಿಯನ್ನೇ ಮಂತ್ರದಂತೆ ಭಾವಿಸಿವೆ ನಮ್ಮ ಸರ್ಕಾರಗಳು!

ಹೀಗಾದಾಗ ಏನಾಗುತ್ತದೆ?

* ಒರಿಸ್ಸಾದ ಕಳಿಂಗ ನಗರದಲ್ಲಿ ತಮ್ಮ ಭೂಮಿಗಾಗಿ ಹೋರಾಡಿದ ಹನ್ನೆರಡು ಆದಿವಾಸಿಗಳು ಜೀವ ಕಳೆದುಕೊಳ್ಳುತ್ತಾರೆ.

* ಗುರುಗಾಂವ್‌ನಲ್ಲಿ ಹೊಂಡಾ ಕಂಪನಿ ವಿರುದ್ಧ ನ್ಯಾಯಯುತ ಬೇಡಿಕೆಗಳಿಗಾಗಿ ಪ್ರತಿಭಟಿಸಿದ ಕಾರ್ಮಿಕರನ್ನು ಪೊಲೀಸರೇ ಹಿಡಿದು ಅರೆಜೀವ ಮಾಡುತ್ತಾರೆ.

* ಲಭ್ಯವಿರುವ ಮಾಹಿತಿ ಪ್ರಕಾರ, ಮಹಾರಾಷ್ಟ್ರದ 64 ಹಳ್ಳಿಗಳ ಜನರನ್ನು ಎತ್ತಂಗಡಿ ಮಾಡಿ, ಆ ಜಾಗವನ್ನು ಕಾರ್ಪೊರೇಟ್ ಸಂಸ್ಥೆಯೊಂದಕ್ಕೆ ನೀಡಲು ನಿರ್ಧರಿಸಿದ್ದಾರೆ.

* ಎನ್ರಾನ್ ಡೀಲ್‌ನಲ್ಲಿ ತಿಂದವರ್‍ಯಾರು ಎಂದು ಪತ್ತೆಯೇ ಆಗುವುದಿಲ್ಲ.

ಹೇಗಿದೆ ನೋಡಿದಿರಾ? ಕಾರ್ಪೊರೇಟ್ (MNC) ಸಂಸ್ಥೆಗಳಿಗಾಗಿ ನಮ್ಮ ಹಳ್ಳಿಗರು, ಆದಿವಾಸಿಗಳೆಲ್ಲ ಜೀವ ಬಿಡುತ್ತಿದ್ದಾರೆ. ಆದರೆ IMF, ವಿಶ್ವಬ್ಯಾಂಕ್ ಪ್ರಕಾರ "ಕಾರ್ಪೊರೇಟ್ ಸಂಸ್ಥೆಗಳು ಆರ್ಥಿಕ ದರ ವೃದ್ಧಿ ಮಾಡಿ, ಬಡತನ ತೊಲಗಿಸುತ್ತವೆ....."


ರೈತರಿಗೆ, ಆದಿವಾಸಿಗಳಿಗೆ ಸಹಾಯ ಮಾಡಲು ಸರ್ಕಾರದ ಬಳಿ ಹಣವಿಲ್ಲ... ಆದರೆ ಜನರಲ್ ಇಲೆಕ್ಟ್ರಿಕಲ್ಸ್ (GE) ಮತ್ತು ಬ್ರಿಟ್‌ಟೆಲ್ ಕಂಪನಿಗಳ 305 ಮಿಲಿಯನ್ ಡಾಲರ್ ಮೌಲ್ಯದ ಶೇರುಗಳನ್ನು ಖರೀದಿಸಲು ಸರ್ಕಾರದ ಬಳಿ ಹಣವಿದೆ! ಆದರೆ ಈ ಮೊದಲು ಈ ಶೇರುಗಳನ್ನು GE ಮತ್ತು ಬ್ರಿಟ್‌ಟೆಲ್ ಕಂಪನಿಗಳು ಕೇವಲ 20 ಮಿಲಿಯನ್ ಡಾಲರ್‌ಗೆ ಕೊಂಡುಕೊಂಡಿದ್ದವು. 20 ಮಿ. ಡಾಲರ್ ಶೇರುಗಳಿಗೆ 305 ಮಿ. ಡಾಲರ್ ಹಣ ಹಾಕುವ ನಮ್ಮ ಸರ್ಕಾರಕ್ಕೆ ಕನಿಷ್ಠ 60 ರೂ. ದಿನಗೂಲಿ ನೀಡಲೂ ಆಗುವುದಿಲ್ಲ!

ಅದಕ್ಕೇ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯೂ ಹಳ್ಳ ಹಿಡಿದಿದೆ.

ಇದು ಪ್ರಜಾಪ್ರಭುತ್ವವಾ? ಖಂಡಿತ ಅಲ್ಲ.... ಇದು ಕಾರ್ಪೊರೇಟ್ ಪ್ರಭುತ್ವವಷ್ಟೇ.....

ಒಂದು CDಗವನ

ಭೇದ ಭಾವವಿಲ್ಲ
ಆ ಹುಣ್ಣಿಮೆ ಚಂದಿರನಿಗೆ...
ಆ ಉರಿವ ಸೂರ್ಯನಿಗೆ....
ಈ ಭೂಮಿತಾಯಿಗೆ...
ಆದರೆ ಭೇದ-ಭಾವವೇ ಉಸಿರು
ಈ ನಮ್ಮ ಮೇಲ್ಜಾತಿಗಳಿಗೆ...



ಸಿನಿಮಾ, ಸಿನಿಮಾ

ಸಿನಿಮಾಗಳು ಪ್ರೇಕ್ಷಕರಿಗೆ ಮಜ ನೀಡುತ್ತವೆ. ಆದರೆ ಅದೇ ಸಿನಿಮಾ ತಯಾರಾಗುವಾಗ ನಟ-ನಟಿಯರ ಮೇಲುಗೈ ಆಟ, ನಿರ್ಮಾಪಕರ ಆತಂಕ, ನಿರ್ದೇಶಕರ ಹಪಹಪಿ, ತಂತ್ರಜ್ಞರ ಚಮತ್ಕಾರ, ಛಾಯಾಗ್ರಾಹಕರ ಸಾಹಸ, ಸಂಕಲನಕಾರರ ಕೈಚಳಕ.... ಎಲ್ಲವೂ ಅಡಗಿರುತ್ತವೆ.

ನಮ್ಮ ಟೀಬಿ (ಕವಿತಾ ಲಂಕೇಶ್) ಸಿನಿಮಾಗಳನ್ನು, ಟಿವಿ ಧಾರಾವಾಹಿಯನ್ನು ಮಾಡುತ್ತಿದ್ದಾಗ ಅಂದು ನಡೆದ ತಮಾಷೆಯ, ಚಕಿತಗೊಳಿಸುವ, ವಿವಾದದ ಪ್ರಸಂಗಗಳ ಬಗ್ಗೆ ಹೇಳುತ್ತಿದ್ದಳು. ಆಗೆಲ್ಲಾ "ಬ ಮೇಕಿಂಗ್ ಆಫ್ ಪ್ರೀತಿ ಪ್ರೇಮ ಪ್ರಣಯ / ಮಾಲ್ಗುಡಿ ಡೇಸ್ ಅಂತ ಮತ್ತೊಂದು ಸಿನಿಮಾ ಹೇಗೆ ಮಾಡಬಹುದು ನೋಡು" ಎಂದು ಹೇಳುತ್ತಿದ್ದೆ. ಈಗ ಕವಿತಾ 'ತನನಂ ತನನಂ' ಸಿನಿಮಾ ಹೇಗೆ ಮೂಡಿಬಂತು ಎಂಬುದರ ಬಗ್ಗೆ ಹೇಳಲು ನಿರ್ಧರಿಸಿದ್ದಾಳೆ. ಕವಿತಾ ಅನುಭವಗಳನ್ನು ನಮ್ಮ ಮಲ್ಲನಗೌಡರ್ ನಿರೂಪಿಸುತ್ತಾರೆ. ಅವಳ ಈ ಧಾರಾವಾಹಿಯೂ ನಿಮಗೆ ಇಷ್ಟವಾಗುತ್ತೆ ಎಂದು ನಂಬಿದ್ದೇನೆ.

—ಸಂ

ಒಂದು ಪ್ಲಸ್ ಮತ್ತೆರಡು ಜಡೆ

ಮೊದಲ ಓದಿಗೇ ಆ ಕತೆ ತುಂಬ ಇಷ್ಟವಾಯ್ತು. ನಾನು ಮತ್ತೆ ಮತ್ತೆ ಓದಿದೆ. ಅದರಲ್ಲಿ ಸತ್ವದ ಜೊತೆಜೊತೆಗೆ ಸಂಗೀತ, ಡ್ರಾಮ, ಪ್ರೇಮ, ಎಲ್ಲವೂ ಇದ್ದು ಒಂದು ಒಳ್ಳೆಯ ಫ್ಯಾಮಿಲಿ ಸಿನಿಮಾ ಆಗುವ ಲಕ್ಷಣಗಳಿದ್ದವು. ಆದ್ದರಿಂದಲೇ ಅದನ್ನು ಸಿನಿಮಾಕ್ಕೆ ರೂಪಾಂತರಿಸಲು ನಿರ್ಧರಿಸಿದೆ.

ಇವತ್ತು ಹೂವಂತೆ ನಳನಳಿಸುತ್ತಿರುವ 'ತನನಂ ತನನಂ' ಅವತ್ತು ಹೀಗೆ ಮೊಳಕೆಯೊಡೆದಿತ್ತು. ಈ 'ತನನಂ ತನನಂ' ಅರಳಿದ ಪರಿಯನ್ನು ಒಂದಿಷ್ಟು ಕಂತುಗಳಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುವಾಸೆ.

ತಮಿಳಿನ ಹಳೆಯ ಕತೆಗಾರ ಕಲ್ಕಿ ಅವರ ಪುಟ್ಟ ಕತೆಯಾದ 'ಶಿವಕೋಜಿ ಆಫ್ ತಿರುವನಂತಪುರಂ'ನಿಂದ ಸ್ಫೂರ್ತಿ ಪಡೆದು ಅದನ್ನು ಒಂದು ಸಂಪೂರ್ಣ ಚಿತ್ರಕತೆಯಾಗಿ ರೂಪಾಂತರಿಸಿದೆ. ಆದರೆ ಕತೆ ಮೆಚ್ಚುಗೆಯಾದಾಕ್ಷಣ ನಿರ್ಮಾಪಕರನ್ನು ಹುಡುಕಿಕೊಂಡು ಹೋಗುವ ಜಾಯಮಾನ ನನ್ನದಲ್ಲ. ಸಿನಿಮಾ ಸಿದ್ಧಪಡಿಸಲು ಬೇಕಾದ ಕ್ರಿಯೇಟಿವ್ ಕೆಲಸಗಳಿಗೆ ಮೊದಲ ಆದ್ಯತೆ ನೀಡಬೇಕೆನ್ನುವವಳು ನಾನು. ಆಗಿಂದಲೇ ನಾನು ನನ್ನ ಮಿತ್ರ ನಿರ್ದೇಶಕ ಆರ್ಯನ ಜೊತೆ ಕೂತು ಸ್ಕ್ರಿಪ್ಟ್ ಡೈಲಾಗ್, ವಿವಿಧ ಟ್ರ್ಯಾಕ್‌ಗಳ ಬಗ್ಗೆ ಚರ್ಚಿಸಿ ನನ್ನ ಕೆಲಸದಲ್ಲಿ ಮಗ್ನಳಾಗಿಹೋದೆ.



ಈ ಕತೆಗೆ ಇಬ್ಬರು ನಾಯಕಿಯರ ಅಗತ್ಯವಿತ್ತಲ್ಲ? ಮೊದಲಿಗೆ ಥಟ್ಟನೇ ಹೊಳೆದದ್ದು ರಮ್ಯಾ! ಲವಲವಿಕೆಯ, ಮುದ್ದಾದ ರಮ್ಯಾ ಜೊತೆ ಊರ್ಮಿಳಾ ಮಾತೊಂಡ್ಕರ್ ಅಥವಾ ಸುಸ್ಮಿತಾ ಸೇನ್‌ಳನ್ನು ಆಯ್ಕೆ ಮಾಡುವ ವಿಚಾರ ಹೊಳೆದಿತ್ತು. ಸ್ಕ್ರಿಪ್ಟ್ ಓದಿದ ತಕ್ಷಣವೇ ಹಿರಿಹಿರಿ ಹಿಗ್ಗಿದ ರಮ್ಯ ಖುಷಿಯಿಂದ ``I am ready... I love this role'' ಎಂದು ಒಪ್ಪಿಯೇ ಬಿಟ್ಟಳು.

ನಂತರ ನಾನು ಊರ್ಮಿಳಾ, ಸುಸ್ಮಿತಾ ಸೇನ್‌ರಿಗೆ ಚಿತ್ರದ ಸಾರಾಂಶ ಕಳಿಸಿ ನೋಡಿದೆ. ಅದನ್ನು ತುಂಬಾ ಮೆಚ್ಚಿಕೊಂಡ ಸುಸ್ಮಿತಾ ಸೇನ್, ತನಗೆ ಆ ಪಾತ್ರ ತೀವ್ರ ಕುತೂಹಲ ಮೂಡಿಸಿದ್ದನ್ನು ವಿವರಿಸಿ, "ಸದ್ಯ ಒಂದು ವರ್ಷ ಡೇಟ್ಸ್ ಇಲ್ಲದಿರುವುದರಿಂದ ಬೇಜಾರಾಗು... ಖಂಡಿತ I miss it... ಎಂದು ತನ್ನ ಅಸಹಾಯಕತೆ ತೋಡಿಕೊಂಡಳು.

ಕೃತಜ್ಞತೆ, responsiveness ಎಂದರೆ ಇದಲ್ಲವೆ? ವಿಶ್ವ ಸುಂದರಿಯಾಗಿ ಬಾಲಿವುಡ್‌ನಲ್ಲಿ busy ಆಗಿರುವ ವೇಳೆಯಲ್ಲೂ ಸುಸ್ಮಿತಾ ಬಿಡುವು ಮಾಡಿಕೊಂಡು ಪ್ರತಿಕ್ರಿಯಿಸುವ ಪರಿಪಾಠ ಇಟ್ಟುಕೊಂಡಿದ್ದಾಳಲ್ಲ? ಈ ಗುಣ ನಮ್ಮ ಕನ್ನಡದ ಎಷ್ಟೋ ನಟ, ನಟಿಯರ ಲ್ಲಿಲ್ಲವಲ್ಲ ಎಂದು ಬೇಜಾರಾಯಿತು. Keep it up Sush....

ತನನಂ ತನನಂ

ತೇಲಿ ಬಂದ ದಾರಿ



ನಮ್ಮ ಚೋಟು ಚೆಲ್ವಿ ರಮ್ಯಾ ಎದುರು ಎತ್ತರದ ಸುಸ್ಮಿತಾ...? ನಂತರ ನನಗೆ ಹೊಳೆದದ್ದು ರಕ್ಷಿತಾ! ಇಲ್ಲಿ ರಕ್ಷಿತಾ ಖ್ಯಾತಿಯಲ್ಲಿರುವ ನಟಿ ಎಂಬುದು ನನಗೆ ಮುಖ್ಯವಾಗಿರಲಿಲ್ಲ. ಆ ಪಾತ್ರ ನನ್ನಲ್ಲಿ ಹೆಚ್ಚು ಹೆಚ್ಚು ಇಳಿದಂತೆ, ಅದಕ್ಕೆ ರಕ್ಷಿತಾಳೇ ಸೂಕ್ತ ಎನ್ನಿಸಿದ್ದರಿಂದ ಆಕೆಯನ್ನು ಕೇಳಿ ನೋಡಿದೆ.

ಅಬ್ಬಾ! ಈ ನಿಮ್ಮ ರಕ್ಷಿತಾಳನ್ನು ಒಪ್ಪಿಸಲು ಒಂದು ತಿಂಗಳು ಹಿಡಿಯಿತು. ರಕ್ಷಿತಾ ಸ್ಕ್ರಿಪ್ಟ್ ಓದಿದಳು. "ಆಂ, ಊಂ, ಆಂ, ಊಂ" ಎಂದಳು. ಸ್ಪರ್ಧೆ ರಮ್ಯ ಜೊತೆ ಮಾಡಬೇಕಲ್ಲ? Next ರಕ್ಷಿತಾ ತಾಯಿ ಮಮತಾ ರಾವ್ ಸರದಿ... ಅವರೂ ಸ್ಕ್ರಿಪ್ಟ್ ಓದಿದರು. ಆದರೆ ಒಳ್ಳೆಯ ಹೆಸರಿರುವ ಈ peak ದಿನಗಳಲ್ಲಿ ಇಬ್ಬರು ಟಾಪ್ ನಟಿಯರು ಒಂದೇ ಚಿತ್ರದಲ್ಲಿ ನಟಿಸುವುದು ಅವಶ್ಯವಿದೆಯೇ ಎಂಬುದು ತಾಯಿ-ಮಗಳ ಜಿಜ್ಞಾಸೆ. ರಕ್ಷಿತಾಳ ಪಾತ್ರ ಕೊಂಚ ನೆಗೆಟಿವ್ ಇದೆ, ಅದೂ-ಇದೂ ಅಂತಾ ಕೊನೆಗೂ ಒಪ್ಪಿಕೊಂಡರು.

"ಉಸ್" ಎನ್ನುವಷ್ಟರಲ್ಲಿ ರಮ್ಯಳ ಕಾಲ್! ರಕ್ಷಿತಾಳೂ ನಟಿಸುವುದಾದರೆ ನನಗೆ ಇನ್ನೂ ಸ್ವಲ್ಪ ಸಂಭಾವನೆ ಜಾಸ್ತಿ ಬೇಕು ಎಂಬ ಹಠ ಆ ಹುಡುಗಿಯದು!

ಅಂತೂ ಒಂದು ತಿಂಗಳಲ್ಲಿ ಈ ಇಬ್ಬರು ಟಾಪ್ ನಟಿಯರು ನನ್ನ 'ತನನಂ ತನನಂ' ರಾಗಕ್ಕೆ ಹಾಡಲು, ಕುಣಿಯಲು, ನಲಿಯಲು ಮನಃಪೂರ್ತಿ ಒಪ್ಪಿಯಾಯ್ತು. ಆದರೆ ಈ ಗಾಂಧಿನಗರದಲ್ಲಿ ಸ್ವಲ್ಪ ಹೊಟ್ಟೆಕಿಚ್ಚಿನವರು ಇದ್ದಾರಲ್ಲ? ಅವರು ರಮ್ಯ, ರಕ್ಷಿತಾ ಒಟ್ಟಿಗೆ ನಟಿಸದಂತೆ ಚುಚ್ಚಿ ನೋಡಿದರು. ಆದರೆ ರಮ್ಯ, ರಕ್ಷಿತಾ ತಮ್ಮ ನಿರ್ಧಾರವನ್ನು ಬದಲಿಸಲೇ ಇಲ್ಲ!

ಇನ್ನು ಈ ಚಿತ್ರಕ್ಕೆ ಪ್ರೊಡ್ಯೂಸರ್ ಸಿಕ್ಕ ರೀತಿಯೂ ಕುತೂಹಲಕರವೇ! 'ಪ್ರೀತಿ ಪ್ರೇಮ ಪ್ರಣಯ' ನೋಡಿದಾಗಲೇ ಕೆ. ಮಂಜು ತಮಗೊಂದು ಚಿತ್ರ ನಿರ್ದೇಶಿಸಿ ಕೊಡುವಂತೆ ಆಫರ್ ನೀಡಿದ್ದರು. ಅದೇ ಹೊತ್ತಿನಲ್ಲಿ 'ರಾಮ ಶಾಮ ಭಾಮ'ದಲ್ಲಿ ಬಿಜಿ ಇದ್ದ ಮಂಜು ಅದು ಬಿಡುಗಡೆಯಾದ ನಂತರ ಇದನ್ನು ಪ್ರಾರಂಭಿಸೋಣ ಎಂದಿದ್ದರು. ಆಗ ನಾನು ನನ್ನ ಸ್ಕ್ರಿಪ್ಟ್ ಕೆಲಸವನ್ನು ಮುಂದುವರೆಸಿದ್ದೆ. ಆದರೆ ಬಾಯಿಬಡುಕ ಆರ್ಯ ಎಲ್ಲೋ ಎಂದಿನಂತೆ ಹರಟುತ್ತಿದ್ದಾಗ 'ಕವಿತಾ ರಂಗಭೂಮಿ ಹಿನ್ನೆಲೆಯ ಚಿತ್ರ ಮಾಡಲಿದ್ದಾರೆ' ಎಂದು ಹೇಳಿದ. ಆಗ ಅಲ್ಲಿದ್ದ ಎನ್.ಎಂ. ಸುರೇಶ್ ಕುತೂಹಲಗೊಂಡು 'ನಾನೇ ಅದನ್ನು ಪ್ರೊಡ್ಯೂಸ್ ಮಾಡುವೆ' ಎಂದರು. ರಂಗಭೂಮಿ ಕುರಿತ ಚಿತ್ರ ಮಾಡಿದರೆ ಖಂಡಿತಾ ಹಿಟ್ ಆಗುತ್ತೆ ಎಂದು ಅವರಿಗೆ ಯಾರೋ ಹೇಳಿದ್ದರಂತೆ! ಅದಕ್ಕೆ ಸುರೇಶ್ 'ರಂಗಭೂಮಿ' ಎಂಬ ಟೈಟಲ್ ರಿಜಿಸ್ಟರ್ ಮಾಡಿಯೇ ಕಾಯುತ್ತಿದ್ದರಂತೆ. ಇರಲಿ, ಇದಾದ ನಂತರ ನನ್ನ ಅವರ ಪ್ರಥಮ ಭೇಟಿ. ಅವರ ಸಹಾಯಕ ಸ್ಕ್ರಿಪ್ಟ್ ಓದಿ ಮುಖ ಅರಳಿಸಿದ್ದೇ ತಡ ಎನ್.ಎಂ. ಸುರೇಶ್ ಹಿಂದೆ ಮುಂದೆ ನೋಡದೇ ಒಪ್ಪಿಕೊಂಡು ಬಿಟ್ಟರು. ಆದರೆ ನನಗೆ ಒಂದು ಸಂದಿಗ್ಧತೆ..... ಮೊದಲೇ ಆಫರ್ ನೀಡಿದ್ದ ಕೆ. ಮಂಜು ಅವರಿಗೆ ಒಂದು ಮಾತು ಕೇಳಬೇಕಿತ್ತಲ್ಲ ಎಂದು...ತಮಾಷೆಯ ವಿಷಯ ಯಾವುದೆಂದರೆ, ಒಂದು ಒಳ್ಳೆಯ ಸಿನಿಮಾ ಮಾಡಬಯಸುವವರಿಗೆ ನಿರ್ಮಾಪಕರು ಸಿಗುವುದೇ ಕಷ್ಟ. ಆದರೆ ಇಲ್ಲಿ ನನಗೆ ಒಂದೇ ಸಿನಿಮಾಗೆ ಇಬ್ಬರು ನಿರ್ಮಾಪಕರು ಸಿಕ್ಕು, ನಾನು ಆಯ್ಕೆ ಮಾಡಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿದ್ದೆ! .... ಕೊನೆಗೆ ಸುರೇಶ್ ಅವರಿಗೆ ನೀವೇ ಮಂಜು ಜೊತೆ ಮಾತಾಡಿ, ಯಾರು ಪ್ರೊಡ್ಯೂಸ್‌ಮಾಡುವುದೆಂದು ನೀವಿಬ್ಬರೆ ನಿರ್ಧರಿಸಿ ಎಂದು ಉಪಾಯ ದಿಂದ ಹೇಳಿ ನಾನು ಬಚಾವ್ ಆದೆ.

ಸುರೇಶ್ ಮತ್ತು ಮಂಜು ಫ್ರೆಂಡ್ಸ್ ಆಗಿದ್ದರಿಂದ ಸಮಸ್ಯೆಯೇ ಇಲ್ಲವಾಗಿಸಿತು. ಅವತ್ತು, ಡಿಸೆಂಬರ್ 13, ನನ್ನ ಹುಟ್ಟಿದ ಹಬ್ಬ. ಅವತ್ತು ನನಗೆ ವಿಷ್ ಮಾಡಿದ ಮಂಜುರವರು "ತನನಂ ತನನಂ' ಅನ್ನು ಸುರೇಶ್‌ರೇ ನಿರ್ಮಿಸಲಿ... ನಾನು ಮುಂದೆ ನಿಮ್ಮಿಂದ ಮತ್ತೊಂದು ಸಿನಿಮಾ ನಿರ್ದೇಶಿಸಿಕೊಳ್ಳುವೆ" ಎಂದು ಹೇಳಿ ಸುರೇಶ್‌ಗೆ ಗ್ರೀನ್‌ಸಿಗ್ನಲ್ ನೀಡಿಯೇ ಬಿಟ್ಟರು.

ಹೀರೋಯಿನ್, ಅಲ್ಲಲ್ಲಾ... ಹೀರೋಯಿನ್‌ಗಳು, ಪ್ರೊಡ್ಯೂಸರ್ ಎಲ್ಲ ನಿರ್ಧಾರವಾಯಿತೆಂದು ನಾನು ನಿರಾಳವಾಗಿ ಇರುವಂತಿರಲಿಲ್ಲ. ನನ್ನ ಚಿತ್ರದ ನಾಯಕ ನಟನ ಆಯ್ಕೆ ಇನ್ನೂ ಆಗಿರಲಿಲ್ಲ. ಆದರೆ ಆ ಪಾತ್ರಕ್ಕೆ ಎಂತಹ ನಟನಿರಬೇಕೆಂಬುದನ್ನು ನಾನು ಮನದಲ್ಲೇ ನಿರ್ಧರಿಸಿದ್ದೆ.... ಆಗ ಅದಕ್ಕೆ ಸರಿಯಾದ ನಟನೆಂದರೆ ನಮ್ಮ ಕನ್ನಡದ ಹುಡುಗ, ಆದರೆ ತಮಿಳಿನಲ್ಲೇ ಮಿಂಚುತ್ತಿರುವ ಶ್ಯಾಮ್ ಅನಿಸಿತು.....

ಕನ್ನಡದ ಸುದೀಪ್, ದರ್ಶನ್, ಪುನೀತ್- ಇವರ್‍ಯಾಕೆ ಆ ಪಾತ್ರಕ್ಕೆ ಒಗ್ಗುತ್ತಿರಲಿಲ್ಲ?

ನಿರೂಪಣೆ : ಪಿ.ಕೆ. ಮಲ್ಲನಗೌಡರ್

ಕಥೆ

ಮಳೆ



ಸೂರಿನಿಂದ ಬೀಳುತ್ತಿದ್ದ ನೀರಿನ ರಭಸದಲ್ಲಿ ಅವನ ದೋಣಿ ತುಯ್ದಾಡಿ, ಸ್ತಬ್ಧವಾಯಿತು. ಗರಿಯಷ್ಟು ನಯವಾಗಿ, ಹಗುರಾಗಿದ್ದ ಅವಳ ದೋಣಿ ಸ್ವಲ್ಪ ಕಂಪಿಸಿದರೂ ನೀರಿನ ಸೆಳವಿನಲ್ಲಿ ಸರಾಗವಾಗಿ ಜಾರುತ್ತ ಹೋಯಿತು.

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

(ಮೂಲ: ಮಲಯಾಳಮ್ ಲೇಖಕಿ ಸಾರಾ ಜೋಸೆಫ್ ಅವರ ಸಣ್ಣ ಕಥೆ 'ಮಳಾ' ವಿಮೆನ್ ರೈಟಿಂಗ್ ಇನ್ ಇಂಡಿಯಾ. ಸಂ: ಸೂಸಿ ಥಾರು ಮತ್ತು ಲಲಿತಾ ಕೆ.)

ಮಧ್ಯಾಹ್ನ ಒಮ್ಮೆಲೇ ಮಳೆ ಧೋ ಎಂದು ಬೀಳಲಾರಂಭಿಸಿದಾಗ ಬಾಗಿಲು ಹಾಕಿ ಮುಂದುಗಡೆಯ ರೂಮಿನ ಕಿಟಕಿಗಳನ್ನು ಎಳೆದು ಮುಚ್ಚಿದಳು. ಪಶ್ಚಿಮಕ್ಕೆ ಮುಖ ಮಾಡಿದ್ದ ಕಿಟಕಿಯ ಹಲಗೆಯನ್ನು ಸ್ವಲ್ಪವೇ ತೆಗೆದು ಅಬ್ಬರಿಸುತ್ತಿದ್ದ ಮಳೆಯನ್ನೇ ದಿಟ್ಟಿಸುತ್ತಾ ನಿಂತಳು. ಸ್ವಲ್ಪ ದೂರದಲ್ಲೆಲ್ಲೋ ಮಳೆಯ ಒತ್ತಿ ಹಿಡಿದ ಬಿಕ್ಕಳಿಕೆಗಳು ಬೆಟ್ಟ ಕಣಿವೆಗಳಲ್ಲಿ ಆಸ್ಫೋಟಿಸುತ್ತಿದ್ದದ್ದು ಕೇಳಿಸುತ್ತಿತ್ತು.

'ಅಯ್ಯಮ್ಮ!' ಭಾರವಾಗಿ ಎದೆಗೆ ಕೈಯೊತ್ತಿ ನರಳಿದಳು. 'ಅತ್ತುಬಿಡಬೇಕು. ಈ ಭೋರಿಡುತ್ತಿರುವ ಮಳೆಯಂತೆ ಕಿರುಚುತ್ತಾ ಅಳಬೇಕು.' ಕಿಟಕಿಯ ಕಬ್ಬಿಣದ ಕಂಬಿಗಳಿಗೆ ಕೆನ್ನೆಯೊತ್ತಿ ನಿಂತಳು. ಕಿಟಕಿಯ ಹರವಾದ ತಳಕಟ್ಟಿನ ಮೇಲೆ ಮುಖವನ್ನು ಮಂಡಿಯಲ್ಲಿ ಹುದುಗಿಸಿ ಕುಸಿದು ಕುಳಿತಳು.

ಮುಂದಿನ ರೂಮಿನಲ್ಲಿ ನ್ಯೂಸ್ ಪೇಪರ್ ಓದುತ್ತಾ ಬೆತ್ತದ ಹೆಣಿಗೆಯ ಕುರ್ಚಿಯಲ್ಲಿ ಅವಳ ಗಂಡ ಒರಗಿ ಕುಳಿತಿದ್ದ. ಮೋಡಗಳು ದಟ್ಟಯಿಸಿ, ಆಕಾಶ ಕಪ್ಪಾಗಾದಾಗ ಎದ್ದು ದೀಪ ಹಾಕಿದ. ಮಳೆ ಬಿರಿಯುವಂತೆ ಸುರಿಯುತ್ತಿತ್ತು, ಬೀಸುತ್ತಿದ್ದ ಗಾಳಿ ಕಾಲೊರೆಸುವ ತಟ್ಟಿನ ಮೇಲೆ, ಕಿಟಕಿಯ ಪರದೆಗಳ ಮೇಲೆ ಮಳೆಯ ತುಂತುರನ್ನು ಸಿಂಪಡಿಸಹತ್ತಿದಾಗ, ಎದ್ದು ಮುಂದಿನ ಬಾಗಿಲನ್ನು ಮುಚ್ಚಿದ. ಆದರೂ ಪರದೆಗಳು ಗಾಳಿಯಲ್ಲಿ ಮಿಡುಕುತ್ತಲೇ ಇದ್ದವು. ಒದ್ದೆಯಾದೀತು ಎಂದು ಸೋಫಾದ ಆಚೀಚೆ ಅವಳು ಹರಡಿದ್ದ ಪುಸ್ತಕ, ಪತ್ರಿಕೆಗಳನ್ನು ಶೆಲ್ಫಿಗೆ ಸೇರಿಸಿದ. ಪೇಪರೆತ್ತಿಕೊಂಡು ಮತ್ತೆ ಒರಗಿ ಕೂತು ಓದಲಾರಂಭಿಸಿದ.

ಅವನ ಮಕ್ಕಳು ಯಾವುದೋ ಗೀಚುವ ಹಾಳೆಯನ್ನು ಹುಡುಕಿ ಹೊಂದಿಸಿಕೊಂಡು, ಪಕ್ಕದಲ್ಲಿಯೇ ನೆಲದ ಮೇಲೆ ಕೂತು ಕಾಗದದ ದೋಣಿ ಮಾಡುವುದರಲ್ಲಿ ಮಗ್ನರಾಗಿದ್ದರು. 'ಅಚ್ಚಾ... ಬಾಗಿಲು ತೆಗೆ,' ಅಲುಗಾಡಿಸುತ್ತಾ ಕರೆದರು.

'ಅಂ...ಹ್ಞಾ...' ಪೇಪರಿಂದ ಕಣ್ಣು ತೆಗೆಯದೇ ಗೊಣಗಿದ.

'ಬಾಗಿಲು ತೆಗೀ ಅಂತ ಹೇಳಿದೆ ಅಲ್ವಾ....' ಬಲಗೈಯಲ್ಲಿ ಕಾಗದದ ದೋಣಿ ಹಿಡಿದು ಎಡಗೈಯಲ್ಲಿ ಪ್ಯಾಂಟನ್ನು ಮೇಲೆತ್ತಿ ಹಿಡಿದ ಮಗ ಮತ್ತೆ ಕುಂಯ್ ಗುಟ್ಟಿದ. 'ಅಚ್ಚಾ...' ಮತ್ತೆ ಅಪ್ಪನನ್ನು ಜಗ್ಗಿ ಎಳೆದ.

'ಏನೋ ಅದು?'

'ಬಾಗಿಲೂ...'

'ಬಾಗಿಲೂ?'

'ಹೂಂ...ತೆಗಿ ಮತ್ತೆ'

'ಬಾಗಿಲು ಯಾಕೋ ತೆಗೀಬೇಕೂ?'

'ದೋಣಿ ಬಿಡಕ್ಕೆ...'

'ದೋಣಿ? ಹುಚ್ಚುಚ್ಚಾಗಿ ಆಡಬೇಡಿ. ಮಳೇಲಿ ನೆಂದು ಒದ್ದೆಯಾಗಿ ಜ್ವರ ಬರಿಸಿಕೊಳ್ತೀರಾ ಅಷ್ಟೆ. ದೋಣಿ ಅಂತೆ ದೋಣಿ...'

ಪೇಪರಿನಿಂದ ಕಣ್ಣು ಕೀಳದೆ ಹೇಳಿದ ಅಪ್ಪ. ನಿರಾಸೆಯಾಗಿ ಕೋಪಿಸಿಕೊಂಡಿದ್ದ ಹುಡುಗ ಅಕ್ಕನ ಕಡೆಗೆ ನೋಡಿದ. ಈಗ ಅತ್ತು ಹಟ ಮಾಡುವುದೊಂದೇ ದಾರಿಯೇ?

ತಮ್ಮನಂತೆ ಒಡ್ಡೊಡ್ಡಾದ ದೋಣಿ ಮಾಡುವುದರಲ್ಲಿ ಹುಡುಗಿಗೆ ಆಸಕ್ತಿ ಇರಲಿಲ್ಲ. ನಿಧಾನವಾಗಿ ಮುದ್ದಾದ ದೋಣಿಯೊಂದನ್ನು ಮಾಡುವುದರಲ್ಲಿ ನಿರತಳಾಗಿದ್ದಳು. 'ಪರವಾಗಿಲ್ಲ, ಏನೂ ಯೋಚನೆ ಮಾಡಬೇಡ,' ಕಣ್ಣಿನಲ್ಲೇ ಆಶ್ವಾಸನೆಯಿತ್ತು ದೋಣಿ ಮಾಡುವುದನ್ನು ಮುಂದುವರೆಸಿದಳು. ಜಾಗರೂಕತೆಯಿಂದ ಅಂಚುಗಳನ್ನು ಮಡಿಚಿ, ಒಂದಿಷ್ಟೂ ಸುಕ್ಕು ಬಾರದಂತೆ ಬೆರಳುಗಳ ಮಧ್ಯದಲ್ಲಿಟ್ಟು ನೇವರಿಸಿದಳು. ಸ್ವಲ್ಪ ಹೊತ್ತು ತಾಳ್ಮೆಯಿಂದ ನೋಡುತ್ತಾ ನಿಂತಿದ್ದ ಹುಡುಗನಿಗೆ ಕಿರಿಕಿರಿಯಾಗಹತ್ತಿತು. 'ಅವಳೋ, ಅವಳ ದೋಣಿನೂ! ಮಳೆನೇ ನಿಂತು ಹೋದ್ರೆ ಅವಳ ದಡ್ಡ ದೋಣಿಯನ್ನ ಎಲ್ಲಿ ಬಿಡ್ತಾಳೋ!'

'ಬೇಗ ಬಾ...ಚೇಚಿ...'

'ಹೇ, ಸ್ವಲ್ಪ ತಡಿಯೋ, ಇನ್ನೇನು ಮುಗೀತು.'

ಶಬ್ದ ಮಾಡದೇ ಕಿಟಕಿಯ ಕಬ್ಬಿಣದ ಸರಳಿನ ಚೌಕಟ್ಟಿನ ಮೇಲೆ ಹತ್ತಿ, ಹೊರಕ್ಕೆ ಕೈ ಚಾಚಿ, ದೋಣಿಗಳನ್ನು ಹೊರಗಿನ ಅಂಗಳದ ನೀರಿನ ಮೇಲೆ ಬಿಟ್ಟರು.

ಸೂರಿನಿಂದ ಬೀಳುತ್ತಿದ್ದ ನೀರಿನ ರಭಸದಲ್ಲಿ ಅವನ ದೋಣಿ ತುಯ್ದಾಡಿ, ಸ್ತಬ್ಧವಾಯಿತು. ಗರಿಯಷ್ಟು ನಯವಾಗಿ, ಹಗುರಾಗಿದ್ದ ಅವಳ ದೋಣಿ ಸ್ವಲ್ಪ ಕಂಪಿಸಿದರೂ ನೀರಿನ ಸೆಳವಿನಲ್ಲಿ ಸರಾಗವಾಗಿ ಜಾರುತ್ತ ಹೋಯಿತು.

''ಏನು ಅದ್ಭುದಿದ್ದಿ ದೋಣಿನೋ ನಿಂದು? ಅದಕ್ಕೆ ತೇಲ್ತಾನೇ ಇಲ್ಲ' ತಮ್ಮನನ್ನು ಛೇಡಿಸಿದಳು.

'ಮಳೆ ತುಂತುರಲ್ಲಿ ಒದ್ದೆಯಾಗ್ತೀರಾ. ಇಬ್ರೂ ಕಿಟಕಿಯಿಂದ ಇಳೀತೀರೋ ಇಲ್ವೋ?' ಪೇಪರಿನಿಂದ ಕಣ್ಣು ತೆಗೆಯದೇ ಅಪ್ಪ ಜೋರು ಧ್ವನಿಯಲ್ಲಿ ಕರೆದ. ಸುಮ್ಮನಿರುವಂತೆ ಅಕ್ಕನಿಗೆ ಸಂಜ್ಞೆ ಮಾಡಿ ಹುಡುಗ ಕಿಟಕಿಯ ಚೌಕಟ್ಟಿಗೆ ಆತು ಇದ್ದಲ್ಲೇ ನಿಂತ.

ಹುಚ್ಚನಂತೆ ಅಬ್ಬರಿಸುತ್ತಾ ಸುರಿಯುತ್ತಿತ್ತು, ಪಶ್ಚಿಮದ ಆಕಾಶ ಮಳೆಯ ಮೋಡಗಳಿಂದ ತುಂಬಿ ಭಾರವಾಗಿತ್ತು. ದೂರದ ಬೆಟ್ಟಗಳ ಸುತ್ತ ಮಬ್ಬೊಂದು ಕವಿದಿತ್ತು. ಸುರಿಯುತ್ತಿದ್ದ ಮಳೆ ತನ್ನನ್ನು ಅಸಹಾಯಕಳನ್ನಾಗಿ ಮಾಡಿ ಧೃತಿಗೆಡಿಸುತ್ತಿದೆ ಎನ್ನಿಸಿತು. ಯಾಕೆ ಹೀಗೆ? ಆದರಿಂದ ಏನು ಉಪಯೋಗ? ಏನು ಪರಿಹಾರ? ಸಮಾಧಾನ ಮಾಡಿಕೊಳ್ಳಲೆತ್ನಿಸಿದಳು.

'ನನಗ್ಯಾಕೆ ಹೀಗೆ ಅಳು ಬರುತ್ತಿದೆ? ಯಾಕೆ?' ಮತ್ತೊಮ್ಮೆ ಕೇಳಿಕೊಂಡಳು.

ಥಟ್ಟನೆ ಸಪೋಟಾ ಮರದಿಂದ ಮೊಟ್ಟೆಯ ಗಾತ್ರವೇ ಇದ್ದ ಪುಟ್ಟ ಹಕ್ಕಿ ಮರಿಯೊಂದು ಧೊಪ್ಪನೆ ಅಂಗಳಕ್ಕೆ ಬಿತ್ತು. ಮರದ ಬುಡದಲ್ಲಿದ್ದ ನೀರಿನಲ್ಲಿ ಸುಳಿಸುಳಿಯಾಗಿ ಸುತ್ತುತ್ತಾ ಕಣ್ಮರೆಯಾಯಿತು. ಅವಳಿಗೆ ಒಮ್ಮೆಲೇ ಉಸಿರು ನಿಂತಂತೆನ್ನಿಸಿತು. ಸತ್ತೇ ಹೋಯಿತೇ? ಹಠಾತ್ತನೆ ಮುಂದಿನ ರೂಮಿನ ಬಾಗಿಲು ತೆಗೆದು ಹೊರ ಬಾಗಿಲಿಂದ ಅಂಗಳಕ್ಕೆ ಓಡಿದಳು. ತುಳಸಿಗಿಡದ ಸುತ್ತ ಮರಿ ಗಿರಕಿ ಹೊಡೆಯುತ್ತಿತ್ತು. ಮಣ್ಣು ನೀರು ಅವಳ ಕಾಲುಗಳ ಸುತ್ತ ಸುತ್ತುತ್ತಿತ್ತು. ಒದ್ದೆಮುದ್ದೆಯಾಗಿ ನಡುಗುತ್ತಿದ್ದ ಮರಿಗೆ ರೆಕ್ಕೆಗಳಿರಲಿಲ್ಲ. ಪಟಪಟನೆ ರೆಕ್ಕೆ ಬಡಿಯುತ್ತಾ, ಸಪೋಟಾ ಮರದ ಸುತ್ತ ಚಕ್ರ ಹೊಡೆಯುತ್ತಿದ್ದ ಹಕ್ಕಿಗಳನ್ನು ನೋಡಿ ವೇದನೆಗಿಂತ ಹೆಚ್ಚಾಗಿ ವಾಕರಿಕೆ ಬಂತು. ಜಿಗುಪ್ಸೆ, ತನ್ನ ಮೇಲೇ ತಿರಸ್ಕಾರ.

'ನಿನಗೆ ಹುಚ್ಚುಗಿಚ್ಚು ಹಿಡಿದಿದೆಯೋ ಹೇಗೆ? ಮಳೆಯಲ್ಲಿ ನೆನೀತಾ ಯಾಕಲ್ಲಿ ನಿಂತಿದೀಯಾ?' ಕೋಪದಿಂದ ಕೆಂಪಾಗಿದ್ದ ಗಂಡ ಬಾಗಿಲ ಹತ್ತಿರ ನಿಂತಿದ್ದ.

'ಒದ್ದೆಯಾಗ್ತೀಡಮ್ಮಾ...' ಮಗ ಕೂಗಿ ಹೇಳಿದ.

ಅಚಾನಕ್ಕಾಗಿ ಸಿಕ್ಕ ಅವಕಾಶವನ್ನು ಬಿಡದೆ, ತಂದೆಯಿಂದ ನುಣುಚಿಕೊಂಡು ಅವನೂ ಹೊರಗೆ ಓಡಿದ. ಲಕ್ಷ್ಯೆಯಾಗಿ ಬಿದ್ದಿದ್ದ ತನ್ನ ದೋಣಿಯನ್ನು ಮೇಲೆತ್ತಿ ಮತ್ತೊಮ್ಮೆ ನೀರಿಗೆ ಬಿಟ್ಟ. ಪೂರ್ತಿ ಒದ್ದೆಯಾಗಿದ್ದ ದೋಣಿ ಕಾಗದದ ಉಂಡೆಯಂತೆ ನೀರಲ್ಲಿ ಉರುಳುತ್ತಾ ಹೋಯಿತು.

'ಅದೆಂತಾ ದೋಣಿ ಮಾಡಿದೀಯೋ ನೀನು, ಗೂಬೆ!' ಅಕ್ಕ ಮತ್ತೊಮ್ಮೆ ರೇಗಿಸಿದಳು. ಅವಮಾನದಿಂದ ಕೋಪ ಬಂದು ಥೈಸ್ಥೈಷ್ ಎಂದು ಆಗಾಕಿಸಿದ. ವರಾಂಡಕ್ಕೆ ತಿರುಗಿ ಹೋಗಲು ಮೆಟ್ಟಿಲು ಹತ್ತಬೇಕೆನ್ನುವುದರಲ್ಲಿ, ಅವಳು ಕೂಗಿ ಹೇಳಿದಳು, 'ಅಚ್ಚಾ, ನೋಡು! ಸುರೇಶ ಮಳೇಲಿ ನೆನೀತಾ ನಿಂತಿದಾನೆ. ಹಂಗೆ ಆಗ್ಬೇಕು ಅವನಿಗೆ. ಕೂದಲೆಲ್ಲ ಒದ್ದೆಯಾಗಿ ನೀರಿಳೀತಾ ಇದೆ.'

'ನೆನೀಲಿ ಬಿಡು. ಹೇಳಿ ಏನು ಪ್ರಯೋಜನ? ದೊಡ್ಡವರ ಚಾಳಿನೇ ಮಕ್ಕಳಿಗೂನೂ.'

ಒಳಗೇನೋ ಥಟ್ಟನೆ ಹತ್ತಿ ಸಿಡಿದಂತೆನ್ನಿಸಿತು. ಎಡಗೈಯಲ್ಲಿ ಮರಿಯನ್ನು ಅವಚಿಕೊಂಡು ಸುರೇಶನತ್ತ ಧಾವಿಸಿ ಬಂದು ಫಟಾರನೆ ಒಂದು ಏಟು ಕೊಟ್ಟು ಕಿರುಚಿದಳು, 'ಒಳಗ್ ಹೋಗು, ತೊಲಗು ಇಲ್ಲಿಂದ, ಮಳೇಲಿ ನೆನೀಬೇಡ...'

ಬ್ಯಾ ಎಂದು ಅರಚಿಕೊಂಡ. ಪೆಟ್ಟಿಗಿಂತ ಅಮ್ಮನ ವರ್ತನೆಯಲ್ಲಿನ ಹಠಾತ್ ಬದಲಾವಣೆ ಅವನನ್ನು ಹೆಚ್ಚಾಗಿ ನೋಯಿಸಿತ್ತು. ಸ್ವಲ್ಪ ಸುಧಾರಿಸಿಕೊಂಡು ಗೊಣಗಿದಳು, 'ಎಲ್ಲ ಸೇರಿಕೊಂಡು ನನ್ನ ಬಲಿ, ಬಲಿ ತಗೋಳ್ತೀರಾ.'

'ಒಳಗೆ ಬರಬೇಕು ಅಂತ ಅನ್ಕೊಂಡಿದೀಯಾ ಹೇಗೆ?' ಗಂಡನ ಧ್ವನಿಯ ಬಿರುಸು ಇನ್ನೂ ಹೆಚ್ಚಾಗಿತ್ತು.

'ಇಲ್ಲ, ಇಲ್ಲೇ ನಿಂತ್ ಒದ್ದೆಯಾಗ್ಬೇಕ್ ಅನ್ಕೊಂಡಿದೀನಿ.'

'ಸರಿ ಬಿಡು, ಅಷ್ಟೇ ತಾನೆ?' ಕುಹಕವೋ, ತಿರಸ್ಕಾರವೋ ಅವಳಿಗೆ ಗೊತ್ತಾಗಲಿಲ್ಲ. ಸುರಿಯುವ ಮಳೆಯಲ್ಲಿ ಓಡಿ ಅಂಗಳದ ಮಧ್ಯೆ ನಿಲ್ಲುವಂತೆ ಮಾಡಿದ್ದು ಅವನ ಮೇಲಿನ ದ್ವೇಷವೆ?

'ಅಮ್ಮನಿಗೆ ಏನಾಗಿದೆ?' ಪಾಪದ ಹುಡುಗಿ ದಿಗ್ಭ್ರಮೆಯಿಂದ ಕೇಳಿದಳು.

'ಅವಳನ್ನೇ ಕೇಳು. ಎಷ್ಟೋ ತರದ ಹುಚ್ಚನ್ನ ನೋಡೀದೀನಿ. ಆದ್ರೆ ಇದು ಎಲ್ಲ ಹುಚ್ಚನ್ನೂ ಮೀರಿದ್ದು ಮಹಾ ಹುಚ್ಚು.'

ಚುರ್ರೆನ್ನುವಂತೆ ಒಮ್ಮೆ ಕಣ್ಣು ಬಿಟ್ಟು ಮಗಳನ್ನು ಹೆದರಿಸಿದಳು. ತಬ್ಬಿಬ್ಬಾದ ಹುಡುಗಿ 'ನಂಗೇನು? ನಿಂಗೇ ಜ್ವರ ಬರೋದು. ಖಾಯಿಲೆ ಬಿದ್ರೆ ನೀನೇ ನರಳೋದು' ಎಂದು ಹೇಳಿ ತೆಪ್ಪಗಾದಳು.

ಅವಳು ಮಾತಿಲ್ಲದೆ ಸುಮ್ಮನೆ ನಿಂತಳು. ಗದ್ದೆಯಲ್ಲಿ ಕಳೆ ಕೀಳುತ್ತಿದ್ದ ಹೆಂಗಸರು ಊಟಕ್ಕೆಂದು ಕೆಲಸ ಕೈಬಿಟ್ಟಿದ್ದರು. ತಾಳೆ ಎಲೆಯ ಕೊಡೆಗಳ ಕೆಳಗೆ ಒಬ್ಬೊಬ್ಬರಾಗಿ ಹೋಗುತ್ತಿದ್ದವರು ಅವಳನ್ನೇ ನೋಡುತ್ತಿರುವುದನ್ನು ಗಮನಿಸಿ ಒತ್ತಾಯದಿಂದ ಮತ್ತೊಮ್ಮೆ ಗದರಿಸಿದ, 'ಒಳಗ್ ಬಾ ಪದ್ಮ. ಬರ್ತೀಯೋ ಇಲ್ವೋ?'

ಅವಳು ಉತ್ತರಿಸಲಿಲ್ಲ, ತಿರುಗಿಯೂ ನೋಡಲಿಲ್ಲ. ಮರಿಯನ್ನು ಎದೆಗವಚಿಕೊಂಡು ಸುರಿಯುತ್ತಿದ್ದ ಹುಚ್ಚು ಮಳೆಯಲ್ಲಿ ತಲೆತಗ್ಗಿಸಿ ಅಂಗಳದಲ್ಲಿ ನಿಂತಳು. ಆಚೀಚೆ ಹೋಗುತ್ತಿದ್ದ ಪ್ರತಿಯೊಬ್ಬರೂ ಅವಳೊಂದು ವಿಚಿತ್ರ ಪ್ರಾಣಿ ಎಂಬಂತೆ ದಿಟ್ಟಿಸಿ ನೋಡುತ್ತಿದ್ದರು. 'ಹಾದರಗಿತ್ತೀನ್ ತಂದು...' ಕೆಟ್ಟದಾಗಿ ಬುಸುಗುಟ್ಟಿದ.

ಕೋಪ, ದ್ವೇಷದಿಂದ ತನ್ನೆದೆ ಬಿರಿಯುತ್ತಿದೆ ಅಂತೆನ್ನಿಸಿತು. ಅವಳ ಎಡಗೈಯಲ್ಲಿದ್ದ ಮರಿ ಅಪ್ಪಚ್ಚಿಯಾಗ ಲಾರಂಭಿಸಿತು. ಎಳೆಯ ಮೂಳೆಗಳು ಮುರಿಯುವ ಶಬ್ದಕ್ಕೆ ಥಟ್ಟನೆ ಎಚ್ಚರವಾದಳು. ಗಂಡ ಫಟಾರನೆ ಬಾಗಿಲು ಮುಚ್ಚಿದ. ಕಣ್ತೆರೆದು ಎಲ್ಲೋ ನೋಡುತ್ತಿದ್ದ ಹಕ್ಕಿಮರಿ ಅವಳ ಪೇಲವ ಕೈಯೊಳಗೆ ಹಲವು ಸಲ ಪತರಗುಟ್ಟಿತು. ಥಟ್ಟನೆ ಆವರಿಸಿಕೊಂಡ ಭಯದಲ್ಲಿ ಮರಿಯನ್ನು ಝಾಡಿಸಿ ಕೊಡವಿದಳು. ದಾಸವಾಳ ಗಿಡದ ಅಡಿಯ ಹುಲ್ಲಿನ ಮೇಲೆ ಹಕ್ಕಿಮರಿ ಸದ್ದಿಲ್ಲದೆ ಬಿತ್ತು. ಸಪೋಟಾ ಮರದ ಮೇಲಿದ್ದ ಉಳಿದ ಹಕ್ಕಿಗಳು ಒಮ್ಮೆಲೇ ಕೆಳಕ್ಕೆ ಎರಗಿದ ಮರಿಯ ಸುತ್ತ ಗಿರಕಿ ಹೊಡೆಯಹತ್ತಿದವು. ಮಳೆಯಲ್ಲಿ ತೊಯ್ದು ದೇಹಕ್ಕೆ ಅಂಟಿಕೊಂಡಂತಿದ್ದ ರೆಕ್ಕೆಗಳು, ಸುರಿಯುತ್ತಿದ್ದ ಮಳೆಗಿಂತ ಜೋರಾಗಿ ಕೇಳಿಸುತ್ತಿದ್ದ ಕಾಗುಡುವ ಕರ್ಕಶ ಶಬ್ದ, ಕೊಲೆಗಡುಕನ ಉನ್ಮಾದವೊಂದು ಅವಳನ್ನು ಆವರಿಸಿತು. ಅಂಗೈಗೆ ಮರಿಯ ಒದ್ದೆ ರೆಕ್ಕೆಗಳು ಅಂಟಿಕೊಂಡಿದೆ ಅಂತನ್ನಿಸಿತು. ವ್ಯಾಕುಲಳಾಗಿ ಎರಡೂ ಕೈಗಳನ್ನು ಉಜ್ಜಿದಳು. ವ್ಯಗ್ರ ಹಕ್ಕಿಗಳು ಅವಳ ಸುತ್ತ ಹಾರಹತ್ತಿದವು. ಹೇಸಿಗೆಯೆನ್ನಿಸಿತು. ಯಾಕೆ ಹೀಗನ್ನಿಸುತ್ತಿದೆ... ಹಾಗನ್ನಿಸಬಾರದಲ್ಲ... ತಲ್ಲಣಿಸಿದಳು.

ಅತೀವ ನೋವಿನಲ್ಲಿ ಕೈಯೆತ್ತಿ ಮುಖ ಮುಚ್ಚಿಕೊಂಡಳು. ಓಡಿ ಹೋಗಿ ಸುರೇಶನನ್ನು ತಬ್ಬಿಕೊಳ್ಳಬೇಕೆನ್ನಿಸಿತು. ಕೆಲವು ಕ್ಷಣಗಳ ಹಿಂದೆ ವಿನಾ ಕಾರಣ ತಾನು ಹೊಡೆದ ಮಗು. ಮೊದಲ ರೂಮಿನೊಳಗೆ ಹುಚ್ಚಿಯಂತೆ ಓಡಿ ಹೋಗಿ ಮುಚ್ಚಿದ ಬಾಗಿಲಿಗಾತು ಏದುಸಿರು ಬಿಡುತ್ತಾ ನಿಂತಳು. ಓಡಿ ಬರುವಾಗ ಒದ್ದೆ ಸೀರೆಯನ್ನು ಎಡವಿ ಎರಡು ಮೂರು ಬಾರಿ ಮುಗ್ಗರಿಸಿ ಬೀಳುವುದರಲ್ಲಿದ್ದಳು. ತಲೆಯಿಂದ ನೀರು ತೊಟ್ಟಿಕ್ಕುತ್ತಿತ್ತು, ಬಟ್ಟೆಗಳು ಜಿಗಿಯಾಗಿ ಮೈಗಂಟಿದ್ದವು. ತಲೆಯಿಂದ ಕಾಲಿನ ತನಕವೂ ಚಳಿಯಿಂದ ನಡುಗುತ್ತಿದ್ದಳು.

'ಓ, ಕೊನೆಗೂ ಸಾಕೆನ್ನಿಸ್ತಲ್ಲ...!' ಗಂಡನ ಚುಚ್ಚುಮಾತಿನಲ್ಲಿ ದ್ವೇಷ, ತಾತ್ಸಾರ ಜಿನುಗುತ್ತಿತ್ತು.

ತನ್ನಲ್ಲೇ ಏನೋ ಗೊಣಗಿಕೊಂಡಳು. ನನ್ನ ಮಗುವನ್ನು ನೋಡುವ ಹಂಬಲವಿಲ್ಲದಿದ್ದರೆ ನಿನ್ನ ತಾತ್ಸಾರವನ್ನು ಧಿಕ್ಕರಿಸಿ ನಿಲ್ಲುತ್ತಿದ್ದೆ ಎನ್ನುವಂತೆ. ಜೋರಾಗಿ ಬಾಯಿಂದ ಬಂದದ್ದು ಮಾತ್ರ 'ದಯವಿಟ್ಟು ಬಾಗಿಲು ತೆಗೀರಿ' ಎನ್ನುವ ಪದಗಳು. ಮಳೆಯ ಅಬ್ಬರದಲ್ಲಿ ಅವಳ ಮಾತುಗಳು ಮುಳುಗಿ ಹೋದರೂ ಅವನಿಗೆ ಏನು ಹೇಳುತ್ತಿದ್ದಾಳೆಂದು ಸರಿಯಾಗಿಯೇ ಅರ್ಥವಾಗಿತ್ತು, ಎದ್ದು ಬಾಗಿಲು ತೆಗೆದ. 'ಹೆಣ್ಣಿಗೆ ಈ ತರಹದ ದುರಹಂಕಾರ ಒಪ್ಪಲ್ಲ, ತಿಳ್ಕೋ.'

ಅವಳೇನೂ ಉತ್ತರ ಕೊಡಲಿಲ್ಲ, ಅವನ ಕಡೆ ತಿರುಗಿಯೂ ನೋಡಲಿಲ್ಲ. ಒಳಗಿನ ರೂಮಿಗೆ ಹೋಗಿ ಕೂದಲು ಒಣಗಿಸಿ, ಬಟ್ಟೆ ಬದಲಾಯಿಸಿ, ಮಲಗುವ ರೂಮಿಗೆ ಹೋದಾಗಲೂ ಅವನ ಕಡೆ ಅಪ್ಪಿತಪ್ಪಿಯೂ ಕಣ್ಣು ಹಾಯಿಸಲಿಲ್ಲ.

ಸುರೇಶ ಅತ್ತೂ ಅತ್ತೂ ಮಲಗಿದ್ದ. ಮಗನನ್ನೇ ದಿಟ್ಟಿಸುತ್ತಾ ಎಷ್ಟೋ ಹೊತ್ತು ನಿಂತಳು. ಮುತ್ತಿಡಲೆಂದು ಬಾಗಿದವಳು ಥಟ್ಟನೆ ಹಿಂಜರಿದು ನೆಟ್ಟಗೆ ನಿಂತಳು. ಅವನ ಮುಖ ತನಗೆ ಅಪರಿಚಿತ ಅಂತೆನ್ನಿಸಿತು. ಏನಾಗಿದೆ ತನಗೆ? ನೋವಲ್ಲಿ ಮತ್ತೆ ಮತ್ತೆ ಕೇಳಿಕೊಂಡಳು. ತನ್ನನ್ನು ಹಿಂಬಾಲಿಸಿ ಬಂದ ಮಗಳ ಮುಖ ಮಂಕಾಗಿತ್ತು, ಮಗಳನ್ನು ನೋಡುವಾಗ ಮರಿಹಕ್ಕಿಯ ನೆನಪಾಗಿ ನಡುಗಿದಳು. ಆದಷ್ಟೂ ಧ್ವನಿಯನ್ನು ಮೃದುವಾಗಿಸಿಕೊಂಡು ಪ್ರೀತಿಯಿಂದ 'ಬಾಮ್ಮ ಸುಧಾ, ಮಲಕ್ಕೊಳ್ಳುವೆಯಂತೆ,' ಎಂದು ಕರೆದಳು.

ಮಗು ಮೌನವಾಗಿ ಅಮ್ಮನ ಮಾತನ್ನು ಪಾಲಿಸಿತು. ಮಲಗಿದರೂ ಅವಳ ಅಗಲ ಕಣ್ಣುಗಳು ಅಮ್ಮನ ಮುಖದ ಮೇಲೆ ಹರಿದಾಡುತ್ತಿದ್ದವು. ನೀನೆಂದೂ ನನಗೆ ಅರ್ಥವಾಗುವುದಿಲ್ಲ ಎಂದು ಹೇಳುತ್ತಿದ್ದವೆ? ಮಕ್ಕಳ ಮೈಮೇಲೆ ದುಪಟಿಯೊಂದನ್ನು ಮೃದುವಾಗಿ ಎಳೆದು ಬಂದು ಕುರ್ಚಿಯಲ್ಲಿ ಅತೀವ ಆಯಾಸದಿಂದ ಧೊಪ್ಪನೆ ಕುಸಿದಳು.

ಮಕ್ಕಳು!

ತನ್ನಂತ ತಾಯಿ ಸಿಕ್ಕಿದ್ದು ಅವರ ಕರ್ಮವಲ್ಲದೆ ಮತ್ತೇನು? ಒಬ್ಬಳು ತಾಯಾಗಿ ತಾನವರನ್ನು ಪ್ರೀತಿಸುತ್ತಿಲ್ಲವೋ ಏನೋ. ನಿಜವಾದ ಅರ್ಥದಲ್ಲಿ, ಪ್ರಾಮಾಣಿಕವಾಗಿ ತಾನು ಅವರಿಗೆ ಪ್ರೀತಿಯನ್ನು ಕೊಡುತ್ತಿರುವೆನೆ? ಅಯ್ಯೋ, ದೇವರೆ, ನೀನೇ ಹೇಳಬೇಕು.

ಹೌದು, ಪ್ರೀತಿಸುತ್ತಿ...ಇಲ್ಲ, ಪ್ರೀತಿಸುವುದಿಲ್ಲ.... ಹೌದು...ಇಲ್ಲ...

ಹೌದು, ತಾನವರನ್ನು ತನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ. ಆದರೂ ಬೇರೆಯೊಬ್ಬ ತಾಯಿ ಅವರಿಗೆ ಸಿಕ್ಕಿದ್ದಿದ್ದರೆ ಚೆನ್ನಿರುತ್ತಿತ್ತು. ಎಂಥಾ ಮುದ್ದು ಮಕ್ಕಳು! ಆದರೂ ತಾನವರನ್ನು ಪ್ರೀತಿಸುವುದು ಸುಳ್ಳಲ್ಲ. ಮೆಲ್ಲಗೆ ಕೆನ್ನೆಗೆ ಮುತ್ತಿಟ್ಟಳು.

ಮಲಗಿದ್ದ ಮಕ್ಕಳ ಮುಖ ಮರಿಹಕ್ಕಿಯ ನೆನಪನ್ನು ಹೊತ್ತು ತಂದಿತು. ಸುರೇಶನ ಕತ್ತನ್ನು ತಿರುಚಿ ಸುಧಾಳ ಎಳೆಯ ಮೂಳೆಯನ್ನು ಮುರಿದಂತೆನ್ನಿಸಿತು. ಮತ್ತೆ ವ್ಯಾಕುಲಳಾಗಿ ಕೈಗಳನ್ನು ಉಜ್ಜಿದಳು.

ಮುಂದಿನ ರೂಮಿನಲ್ಲಿ ಅವಳ ಗಂಡ ರೆಕಾರ್ಡ್ ಪ್ಲೇಯರ್ ಹಚ್ಚಿದ್ದ. ಅವನು ಇಷ್ಟಪಡುವ ಪಾಪ್ ಸಂಗೀತ. ಅವಳು ದ್ವೇಷಿಸುವ ಸಂಗೀತದ ಲಯ್ಯ ಬೇಕೆಂತಲೇ ಹಾಕಿದ್ದ, ಅವಳಿಗೂ ಗೊತ್ತು.

ನನಗೆ ಈ ಕುಹಕ, ಮೂದಲಿಕೆಯ ಅಲಕ್ಷ್ಯವನ್ನು ತಡೆಯುವ ಶಕ್ತಿಯಿಲ್ಲ ದೇವರೇ. ನಾನಿಲ್ಲಿ ಯಾರೂ ಅಲ್ಲ, ಅಯ್ಯೋ, ಎಷ್ಟೊಂದು ಒಂಟಿತನ...ಯಾರೂ ಇಲ್ಲದ ಒಂಟಿ ನಾನು... ಮೆಲ್ಲಗೆ ಹೇಳಿಕೊಂಡಳು.

ಕೈಯೆತ್ತಿ ತನಗೆ ಮತ್ತೊಮ್ಮೆ ಹೇಳಿಕೊಂಡಳು. ನೀನು ಸಾಯಬೇಕು...

ಅಯ್ಯೋ! ನನ್ನ ಮಕ್ಕಳು! ಅವರಿಗೆ ಯಾರು ದಿಕ್ಕು?

ಥಟ್ಟನೆ ಹುರಿಬಾಳೆಯ ಮೇಲೆ ಬಿದ್ದು ಬಿಕ್ಕಳಿಸಿ ಅಳಲಾರಂಭಿಸಿದಳು.

ಮನುಷ್ಯ ಬಾಯಿಬಿಟ್ಟ ತಕ್ಷಣ ಒಂದು ಸುಳ್ಳು ಹೇಳುತ್ತಾನೆ

ಹೋಮಯಜ್ಞ=ಕತ್ತೆಗಳ ಮದುವೆ=ವಿಶ್ವಶಾಂತಿ!

ಕಲಿಗಾಲ, ಕಲಿಗಾಲದ ಮಹಾತ್ಮೆ ಇದು. ಇಲ್ಲಾಂದರೆ ಸ್ವಾಮಿ ಅಯ್ಯಪ್ಪನನ್ನು, ಪ್ರಧಾನ ಅರ್ಚಕ ಕಂಟರಾರು ಮೋಹನಾರು ಅವರನ್ನು ಈ ಪಾಟ ಆಪಾದನೆಗಳಿಗೆ ಗುರಿ ಮಾಡುವುದು ಎಂದರೇನು' ಎಂಬುದಾಗಿ ಸೌಟು ಹಿಡಿದು ಕರ್ನಾಟಕಕ್ಕೆ ಬಂದು, ಈಗ ಹಲವಾರು ಕೋಟಿ ರೂಪಾಯಿಗಳ ಒಡೆಯರಾಗಿರುವ, ಹೋಟೆಲ್ ಉದ್ಯಮಿ ಪಾಲ್ಗಾಟ್ ಅಯ್ಯರ್ ಅವರು ಪರಿತಪಿಸಿದರು. ಅವರ ಈ ವ್ಯಥೆಗೆ ಕಾರಣ ಕೇಳಲಾಗಿ ನೀಡಿದ ವಿವರಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಜಯಮಾಲಾ-ಅಯ್ಯಪ್ಪನ ಕಥೆ ಈಗಾಗಲೇ ಮೆಗಾಧಾರಾವಾಹಿಗಳಂತೆ ಬೋರ್ ಹೊಡೆದಿರುವುದರಿಂದ ವರದಿಯನ್ನು ಕಂಟರಾರು ಮೋಹನಾರು ಅವರಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಆಗಿದ್ದು ಏನಪ್ಪ ಅಂದರೆ (ಪಾಲ್ಗಾಟ್ ಅಯ್ಯರ್ ಅವರ ಹೇಳಿಕೆಯಂತೆ) ಪಾಪ ಈ ಕಂಟರಾರು ಎರ್ನಾಕುಲಂನ ಬೀದಿಯಲ್ಲಿ ಹೋಗುತ್ತಿದ್ದರಂತೆ. ಯಾವುದೋ ವಸತಿ ಸಂಕೀರ್ಣದ ಎದುರು ಬಂದರಂತೆ. ದೈವಸಂಭೂತರಿಗೆ ಕಿರುಕುಳ ನೀಡಲು ಎಲ್ಲಿಂದಲೋ ಮಾಯಾವಿ ರಾಕ್ಷಸರು ಪ್ರತ್ಯಕ್ಷ ಆಗಲ್ಲವೇ, ಅದೇ ಮಾದರಿ ಆರು ಜನ ದಾಂಢಿಗರು ಕಂಟರಾರು ಎದುರು ಕಂಟಕರಾಗಿ ಬಂದರಂತೆ. ಅವರ ಕೈಲಿದ್ದ ಚಿನ್ನದ ವಂಕಿ, ಕೊರಳಲ್ಲಿದ್ದ ಚಿನ್ನದ ಸರ, ಅದಕ್ಕೆ ನೇತುಹಾಕಿದ್ದ ಮೊಬೈಲ್ ಸಾಧನ ಕಿತ್ತುಕೊಂಡರಂತೆ. ಅಷ್ಟೇ ಆಗಿದ್ದರೆ ಇದು ದರೋಡೆ ಪ್ರಕರಣ ಅಂತ ಸುಮ್ಮನಿದ್ದುಬಿಡಬಹುದಿತ್ತು, ಯಾಕೆ ಅಂದರೆ ಈ ಕಾಲದಲ್ಲಿ ದರೋಡೆ ಮಾಡದವನೇ ಪಾಪಿ! ಆದರೆ ಮುಂದುವರಿದ ಈ ಪಾಪಿಗಳು ಏನು ಮಾಡಿದರು ಅಂದರೆ ಅವರನ್ನ ವಸತಿ ಸಂಕೀರ್ಣದ ಒಳಕ್ಕೆ ಎಳೆದೊಯ್ದರಂತೆ. ಅಲ್ಲಿದ್ದ ಹೆಂಗಸರಿಬ್ಬರಲ್ಲಿ ಹಿರಿಯಾಕೆಯ ವಿವಸ್ತ್ರಗೊಳಿಸಿದರಂತೆ. ತಂತ್ರಿವರ್ಯರಾದ ಕಂಟರಾರು ಅವರನ್ನೂ ಈ ಪಾಪಿಗಳು ವಿವಸ್ತ್ರಗೊಳಿಸಿದರಂತೆ. ಆನಂತರ ಒಬ್ಬರನ್ನೊಬ್ಬರು ತಬ್ಬಿಕೊಳ್ಳಲು ಹೇಳಿದರಂತೆ. ಧಾಂಡಿಗರ ಭಯ ನೋಡಿ, ಅವರು ಹೇಳಿದ ಹಾಗೇ ನಡೆದುಕೊಂಡರಂತೆ. ಆಗ ಆ ದುಷ್ಟರು ಆ ದೃಶ್ಯದ ಫೋಟೋ ತೆಗೆದರಂತೆ!

ಆ ಸಾಧ್ವೀಮಣಿ, ಬ್ರಹ್ಮಚಾರಿ ಅಯ್ಯಪ್ಪಸ್ವಾಮಿ ಎದುರೇ ಇರುವ ದೈವಾಂಶಸಂಭೂತ ಎಂತಹ ಮುಜುಗರ ಅನುಭವಿಸಬೇಕು! ಇಂತಹ ಸಮಯದಲ್ಲಿ ಅವರಿಬ್ಬರ ಮುಖದಲ್ಲಿ ಅವಮಾನ, ಕೋಪ ತಾಂಡವವಾಡುತ್ತಿರಬೇಕಲ್ಲ... ಆ ಪಾಪಿಗಳು ಏನು ಮಾಡಿದ್ದಾರೆ ಗೊತ್ತೇ? ಹಾಳು ತಂತ್ರಜ್ಞಾನ ಬಳಸಿಕೊಂಡು ಸಂತೋಷದ ಉನ್ಮಾದದಲ್ಲಿರುವಂತೆ ಅವರನ್ನು ತೋರಿಸಿದ್ದಾರೆ!

ದೈವಾಂಶಸಂಭೂತರಾದ ಈ ಕಂಟರಾರು ಏನು ಮಾಡಬೇಕು? ಕಂಟಕ ಪರಿಹಾರಕ್ಕಾಗಿ ಈ ಕಂಟರಾರು ಎಲ್ಲೆಲ್ಲಿ ಏನೇನು ಕೈಂಕರ್ಯ ನಡೆಸಿದರೋ ತಿಳಿಯದು. ಶಿಷ್ಟ ನಾಗರಿಕನಂತೆ ಪೊಲೀಸರಿಗೆ ದೂರು ನೀಡಿದರು. ಆ ಪೊಲೀಸಿನವರು ಹೀಗೆ ಮಾಡಬಹುದಾ.... ದೂರು ನೀಡಿದವನನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬಹುದಾ... ಆ ಹೆಂಗಸು ಹೆಸರು ಕೆಡಿಸಿಕೊಂಡೋರು. ನೀನು ಅಲ್ಲಿಗೆ ಹೋದದ್ದು ಇದೇ ಮೊದಲಲ್ಲಾ... ಇತ್ತೀಚೆಗೆ ಇಪ್ಪತ್ತು ಸಲ ಆ ಮನೆಗೆ ಹೋಗಿದ್ದೀಯಾ ಅಂತ ಏನೇನೋ ರಂಪ ಮಾಡಬಹುದಾ... ಕಲಿಗಾಲ... ಕಲಿಗಾಲ...

ಅಲ್ಲ, ಸೇವಾಕೈಂಕರ್ಯ ಕಾರ್ಯಗಳಿಗಾಗಿ ಭಕ್ತರ ಮನೆಗೆ ಈ ಹಿಂದೆ ಹೋಗಿರಬಹುದು. ಸೇವೆಯನ್ನೂ ಸಲ್ಲಿಸಿರಬಹುದು. ಇವತ್ತೂ ಆದಕ್ಕೇ ಹೋಗಿದ್ದಾನೆ ಅಂದರೆ ಅರ್ಥ ಇದೆಯಾ... ಆದರೂ ಈ ತರಲೆ ಪೊಲೀಸಿನವರ ಸಹವಾಸ ಕಷ್ಟ ಎಂದು ಈ ದೈವಾಂಶಸಂಭೂತರು ಮತ್ತೊಂದು ದೂರು ಸಲ್ಲಿಸಬೇಕಾಯಿತು.

ಆ ದೂರಿನ ವಿಷಯ ಏನು ಅಂದರೆ (ಪಾಲ್ಗಾಟ್ ಅಯ್ಯರ್ ಹೇಳಿದಂತೆ) ಈ ಮೋಹನಾರು ಮನೆ ಕೆಲಸಕ್ಕೆ ಒಬ್ಬ ಹೆಣ್ಣು ಮಗಳು ಬೇಕಿತ್ತಂತೆ. ಅವಳನ್ನು ಕರೆತರಲು ಆ ಮನೆಗೆ ಹೋಗಿದ್ದರಂತೆ. ಈ ಸಮಯದ ದುರ್ಬಳಕೆ ಮಾಡಿಕೊಂಡ ದುಷ್ಟರು ಇಂತಹ ನೀಚ ಕೆಲಸಕ್ಕೆ ಕೈ ಹಾಕಿದ್ದಾರೆ!

'ಇದೇನು ಕಾಗಕ್ಕ ಗೂಬಕ್ಕನ ಕಥೆ ತರಹ ಇದೆಯಲ್ಲಾ ಅಯ್ಯರೇ' ಅಂದದಕ್ಕೆ 'ಕಲಿಗಾಲ... ಕಲಿಗಾಲ' ಅಂತ ಕೆನ್ನೆಗೆ ಬಡಿದುಕೊಂಡರು.



ನನಗೊಂದು ಅನುಮಾನ, ದೇವಸ್ಥಾನಗಳಿಗೆ ಸಂಬಂಧಿಸಿದವರು ಇಂತಹ ಕೆಲಸಾನ ಮುಚ್ಚುಮರೇಲಿ, ಮನೆಯವರಿಗೆ ತಿಳಿಯದಂತೆ ಮಾಡುವುದು ಎಲ್ಲರಿಗೂ ತಿಳಿದದ್ದೆ. ಈ ವಿಷಯ ಥಾಣಾ ಡಂಗೂರ ಆದ ಮೇಲೆ ದೇವರ ಸೇವೆ ಮಾಡುವ ಈ ತಂತ್ರಿಗಳಿಗೆ ಎಂತಹ ಸೇವೆಗೆ ಮನೆಯಲ್ಲಿ ಸಿದ್ಧತೆ ನಡೆದಿರಬಹುದು? ಚಾಮರ ಸೇವೆ? ಮನೆಯ ಒಳಗೆ ಮನೆಯ ಹೊರಗೆ ಇಂತಹ ಸೇವೆ ನಡೆದರೆ ಪಾಪ ಕಂಟರಾರು ಮೋಹನಾರುಗೆ ಶಾನೆ ಕಷ್ಟ ಅಲ್ಲವಾ.

ಮಠಗಳು V/s ಕತ್ತೆಗಳು

ವಿಶ್ವಶಾಂತಿ!

ಬಹುಜನರ ಆಶಯ ಇದು.

ಇದಕ್ಕಾಗಿ ಏನು ಮಾಡಬೇಕು?

ಬೇರೆ ದೇಶಗಳ ವಿಷಯ ತಿಳಿದಿಲ್ಲ, ಪ್ರಾಯಶಃ ಅವರಿಗೆ ವಿಶ್ವಶಾಂತಿಯ ಬಗ್ಗೆ ಕಾಳಜಿ ಇಲ್ಲದಿರಬಹುದು. ಆದರೆ 'ವಸುದೈವ ಕುಟುಂಬಂ' ಎಂಬ ಭಾರತದಲ್ಲಿ? ಎಲ್ಲ ಮಠಗಳೂ ಆದಕ್ಕಾಗಿ ತನು, ಮನ, ಧನ (?) ಅರ್ಪಣೆ!

'ಯಾತಕ್ಕಾಗಿ ಹೋಮ ಹವನ?' ಮಠಾಧಿಪತಿಗಳನ್ನು ಕೇಳಿ ನೋಡಿ.

'ವಿಶ್ವಶಾಂತಿಗಾಗಿ!' ಸಿದ್ಧ ಉತ್ತರ ಸಿಗುತ್ತೆ.

'ಇದೊಂದು ಹಗಲು ದರೋಡೆ. ಅಗತ್ಯ ವಸ್ತುಗಳ ಅನಗತ್ಯ ಪೋಲು' ಎನ್ನುವವರಿಗೆ ಇಲ್ಲೊಂದು ಸುದ್ದಿ. ವಿಶ್ವಶಾಂತಿಗೆ ಇದು ಯಾವುದೂ ಬೇಕಿಲ್ಲ. ಇಲ್ಲಿದೆ ಒಂದು ಸರಳ ವಿಧಾನ.

ಏನು ವಿಧಾನ ಅದು?

ಕತ್ತೆಗಳ ಮದುವೆ!

ಕತ್ತೆಗಳನ್ನು ಮದುಮಕ್ಕಳಂತೆ ಶೃಂಗರಿಸಿ, ವೇದ-ಮಂತ್ರಗಳ ಘೋಷಣೆ ಆಗಲಿ. ಮಾಂಗಲ್ಯಧಾರಣೆ? ಅದೇ ತಾನೆ ಮುಖ್ಯ! ನಿಮ್ಮಲ್ಲೇ ಯಾರಾದರೂ ಕಟ್ಟಿ ಹೆಣ್ಣು ಕತ್ತೆಯ ಪರವಾಗಿ!

ಊಟ? ಇಂತಹ ಧಾರ್ಮಿಕ ಕಾರ್ಯಕ್ಕೆ ಹಣದ ಅಡ್ಡಿಯೆ? ಜನ ತಾಮುಂದು ನಾಮುಂದು ಎಂದು ಬರುತ್ತಾರೆ, ಅದೂ ನಡೆಯಲಿ.

ಅದು ಸರಿ. ಇಂತಹ ವಿವಾಹಕ್ಕೆ ಒಂದು ಹೆಸರು ಇರಬೇಕಲ್ಲ?

ಅದೂ ಇದೆ. 'ಕರ್ತವ್ಯ ವಿವಾಹಂ!'

ತಿರುಚಿನಾಪಳ್ಳಿಯ ಪೂವಲೂರು ಗ್ರಾಮದವರು ಇಂತಹ ವಿವಾಹಕ್ಕೆ ಮಾದರಿಯಾಗಿದ್ದಾರೆ ಎಂಬುದು ಸುದ್ದಿ. ಹಳ್ಳಿಯಲ್ಲಿ ನವದಂಪತಿಗಳ ಮೆರವಣಿಗೆಯೂ ನೆರವೇರಿಸಿದರಂತೆ. ಬೀದಿಗಳಲ್ಲಿ ಈ ವಧುವರರಿಗೆ ಆರತಿಗಳನ್ನೆತ್ತಿ ಜನ ಸಂಭ್ರಮಿಸಿದರಂತೆ.

ಅದು ಸರಿ. ತಾಳಿಯ ಭಾಗ್ಯ ಹಳ್ಳಿಯ ಹಿರಿಯರಿಂದ ನಡೆಯಿತು. ಅದರ ನಂತರದ್ದು? ನಿಷೇಕ... ಅದೂ ಹಿರಿಯರ ಹೊಣೇನಾ... ತಿಳಿದು ಬಂದಿಲ್ಲ!

ಅಲ್ಲ, ಕತ್ತೆ ಮದುವೆ ಮಾಡಿ 'ವಿಶ್ವಶಾಂತಿ' ತರೋದು; ಹೋಮ ಯಜ್ಞ ಮಾಡಿ 'ವಿಶ್ವಶಾಂತಿ' ತರೋದು ಇದನ್ನೆಲ್ಲ ನೋಡಿದರೆ... ಹೋಮ ಯಜ್ಞ= ಕತ್ತೆಗಳ ಮದುವೆ=ವಿಶ್ವಶಾಂತಿನಾ!

ಪವಿತ್ರ ಗೂಬೆ!

ಗೂಬೆ!

ಇದು ಬೈಗುಳದ ಪದ. ಇನ್ನು ಮೇಲೆ ಹಾಗೆಂದೀರಿ ಜೋಕೆ!

ಯಾಕೆ ಹಾಗನ್ನಬಾರದು?

ಅದು 'ಲಕ್ಷ್ಮಿ'ಯ ವಾಹನ! ಅಷ್ಟು ಮಾತ್ರ ಅಲ್ಲ, ಆ ದೇವಿ ಎಲ್ಲಿ ಹೋಗುತ್ತಾಳೋ ಅಲ್ಲಿ ಇದು ಪ್ರತ್ಯಕ್ಷ! ಪೊಲೀಸ್ ಸ್ಟೇಷನ್ನಿಗೋದರೂ ಅದು ಹಿಂಬಾಲಿಸುತ್ತೆ!

ವಾಹನ ಎಂದಮೇಲೆ ಲಕ್ಷ್ಮಿ ಅದರ ಮೇಲೆ ಸವಾರಿ ಮಾಡಬೇಕು. ಲಕ್ಷ್ಮಿಯನ್ನು ಹಿಂಬಾಲಿಸಿತು ಅಂದರೆ ವಾಹನಕ್ಕೆ ಅರ್ಥ ಇದೆಯಾ? ಇಂತಹ ಪ್ರಶ್ನೆ ಅನವಶ್ಯಕ. ಕಾನ್ಪುರದ ರಾಜ್‌ಪುರ ಪೊಲೀಸ್ ಸ್ಟೇಷನ್ನಿನಲ್ಲಿ ನಡೆದಿರುವ ವಿಸ್ಮಯ ನೋಡಿ.

ಲಕ್ಷ್ಮಿಯ ವಿಗ್ರಹವನ್ನು ಯಾರೋ ಕದ್ದ. ಪೊಲೀಸಿನವರು ಅದನ್ನು ಪತ್ತೆಹಚ್ಚಿ ಲಕ್ಷ್ಮಿಯನ್ನು ಸೆರೆಮನೆಗೆ ಹಾಕಿದರು!

ಕಳ್ಳ? ದೇವತೆ ಸಿಕ್ಕಿದ ಸಂಭ್ರಮದಲ್ಲಿ ಆತನನ್ನು ಮರೆತಿರಬೇಕು. ಅದು ಹಾಗಿರಲಿ, ಲಕ್ಷ್ಮಿಯನ್ನು ಸೆರೆಮನೆಗೆ ಹಾಕಿ ಆಯಿತಲ್ಲ, ಆಮೇಲೆ ನೋಡ್ತಾರೆ ಪೊಲೀಸಿನವರು... ಅದರ ಹಿಂದೆಯೇ ಅಮ್ಮನವರ ವಾಹನ 'ಗೂಬೆ' ಬಂದಿದೆ! ಲಾಠಿಚಾರ್ಜ್ ಮಾಡಿ, ಬೆಲ್ಟ್ ಬೀಸಿ ಅನುಭವ ಇತ್ತಲ್ಲಾ, ಅದರ ಆಧಾರದ ಮೇಲೆ ಇಲ್ಲೂ ಗೂಬೆ ಮುಂದೆ ಅವನ್ನ ಬೀಸಿದರು. ಗೂಬೆಗೆ ಬೆಳಗಿನ ಹೊತ್ತು ಕಣ್ಣು ಕಾಣಲ್ಲ ಅನ್ನೋದು ಈ ಪೊಲೀಸ್ ಗೂಬೆಗಳಿಗೆ ತಿಳಿದಿತ್ತೋ ಇಲ್ಲವೋ ಲಾಠಿ, ಬೆಲ್ಟು ಬೀಸಿ ಬೀಸಿ ಕೈ ನೋಯಿಸಿಕೊಂಡಿದ್ದೇ ಲಾಭ ಆಯಿತು. ಗೂಬೆ ಮಾತ್ರ ಅಲ್ಲಿಂದ ಕದಲಲಿಲ್ಲ.

ಈ ಪೆದ್ದು ಮುಂಡೇವು ಇಷ್ಟಕ್ಕೇ ಸುಮ್ಮನಿರಬಾರದ. ಹಿಂಗಿಂಗೆ ನಡೀತು ಅಂತ ಊರಿಗೆಲ್ಲ ಸಾರಿದೊ. ಇಷ್ಟು ಸಾಕಲ್ಲ ಆಧ್ಯಾತ್ಮಿಕ ಮನಸ್ಸುಗಳಿಗೆ. ಜನರ ದಂಡೇ ನೆರೀತು. ತಾಯಿ ಲಕ್ಷ್ಮಿದೇವಿಗೆ, 'ಪವಿತ್ರ ಗೂಬೆ'ಗೆ ಹೂವು ಸುರಿದರು. ಪೂಜೆ ಮಾಡಿದರು, 'ಪವಿತ್ರ ಗೂಬೆ'ಗೆ ಹಾಲು ಅರ್ಪಿಸಿ ಸಂಪ್ರೀತರಾದರು!

ಕತ್ತಲೆ ಕವಿದು ಗೂಬೆಗೆ ಕಣ್ಣು ಕಾಣಿಸಿದಾಗ ಅದು ಹಾರಿ ಹೋಗುತ್ತೋ ಅಥವಾ ಅಚ್ಚುಕಟ್ಟಾಗಿ ಹಣ್ಣು ಹಂಪಲ ಸಿಗುತ್ತೆ ಅಂತ ಇಲ್ಲೇ ಉಳಿಯುತ್ತೋ ತಿಳಿದುಬಂದಿಲ್ಲ, ಲಕ್ಷ್ಮಿ-ಗೂಬೆ ಪೂಜೆಗೆ ಒಬ್ಬ ಪೂಜಾರಿ ಇಷ್ಟರಲ್ಲೇ ನೇಮಕ ಆದರೂ ಆಗಬಹುದು!

ಅಲ್ಲ, ಈ ಗೂಬೇನ ಯಾರಾದರೂ ಸಾಕಿದ್ದು ಈ 'ಯಾಸ' ಕಟ್ಟಿರಬಹುದಾ!?


-ಎಚ್.ಎಲ್. ಕೇಶವಮೂರ್ತಿ

ಬೆಂಗಳೂರೆಂಬ ನಗರಕ

ಕಳೆದೆರಡು ತಿಂಗಳಿನಿಂದ ನನ್ನ ನೆಚ್ಚಿನ "ಲಂಕೇಶ್"ಗೆ ಯಾವುದೇ ಪತ್ರ ಕಳುಹಿಸಲಾಗಲಿಲ್ಲ, ಕಾರಣ ನಿರುದ್ಯೋಗದ ದಿನಗಳು. ಪದವೀಧರನಾದರೂ ತಿಂಗಳುಗಳ ಕಾಲ ನಿರುದ್ಯೋಗಿಯಾಗಿ ನಿರಾಸೆ, ಹತಾಶೆಯ ದಿನಗಳಲ್ಲಿದ್ದೆ. ಪದವಿಯಾಗಿದ್ದರೂ ಹೇಳಿಕೊಳ್ಳುವಂತಹ ಕೆಲಸ ಹೈಫೋಟಿ ಯುಗದಲ್ಲಿ ಇರಲಿಲ್ಲ. ಇಂದು ಕೆಲಸಕ್ಕೆ ಕೇವಲ ಪದವಿಯ ಅರ್ಹತೆ ಸಾಲದು, ಜೊತೆಗೆ ಇಂಗ್ಲಿಷ್ ಭಾಷಾ ಜ್ಞಾನ, ಕಂಪ್ಯೂಟರ್ ತಿಳುವಳಿಕೆ, ಟೈಪಿಂಗ್ ಹಾಗೂ ಎಲ್ಲಾದರೂ ಕೆಲಸ ಮಾಡಿದ ಅನುಭವ-ಹೀಗೆ ಹಲವುಗಳನ್ನು ಪದವಿಯೊಂದಿಗೆ ಹೊಂದಿದಾಗ ಮಾತ್ರ ಎರಡು ಮೂರು ಸಾವಿರ ಸಂಬಳದ ಕೆಲಸವಾದರೂ ದಕ್ಕೀತು. ಇಲ್ಲವಾದರೆ ಬೆಂಗಳೂರು ನಗರದಲ್ಲಿ ಜೀವನ ನಾಯಿ ಪಾಡು.

ಮೊದಲಿದ್ದ 'ರಿಕವರಿ' ಆಫೀಸ್‌ನಲ್ಲಿ ಅಲ್ಲಿಯವರ ಅಸಭ್ಯ ವರ್ತನೆ, ಅಸಹ್ಯ ಮಾತುಗಳು, ಎರಡು ಮೂರು ತಿಂಗಳಿಗೊಮ್ಮೆ ಸಿಗುತ್ತಿದ್ದ ಸಂಬಳದಿಂದ ಬೇಸರವಾಗಿ ಕೆಲಸ ತೊರೆದು ಹೊಸ ಕೆಲಸ ಹುಡುಕಲು ಶುರುಮಾಡಿದರೆ ಅದೇ ಇಂಗ್ಲಿಷ್, ಟೈಪಿಂಗ್, ಅನುಭವಗಳು ತೊಡಕಾಗಿದ್ದವು. ಈವೇಳೆ ಯೂ ಕೂಡ ಸಂಪೂರ್ಣವಾಗಿ "ಲಂಕೇಶ್" ಓದಲಾಗದಿದ್ದರೂ ಪ್ರತಿವಾರ "ಲಂಕೇಶ್" ನನ್ನ ರೂಮ್ ಸೇರುತ್ತಿತ್ತು. ಕೆಲಸವಿಲ್ಲದೆ ಬೇಸತ್ತು ಊರಿಗೆ ಹೋಗಿ ಮನೆಯವರ ಬಳಿ 'ನನಗೆ ಬೆಂಗಳೂರು ಜೀವನ ಸಾಕು... ಇಲ್ಲಿಂದ ಅಕ್ಕಿ-ರಾಗಿ, ಸೀಮೆಎಣ್ಣೆ ಕಾಳು-ಕಡ್ಡಿ ಎಲ್ಲವನ್ನು ಹೊತ್ತುಕೊಂಡು ಹೋಗಿ ನಾಯಿ ಗೂಡಂಗೆ ಇಷ್ಟಗಲ ರೂಮ್ ಮಾಡಿ ಸಿಟಲಿ ಬವಣೆಪಡೋ ಬದ್ಲು, ಊರಲ್ಲೇ ಜೀವನಕ್ಕೆ ಏನಾದ್ರೂ ಸ್ವಂತ ಉದ್ಯೋಗ ಮಾಡ್ತೀನಿ, ದಯವಿಟ್ಟು ಸಾಲ ಕೊಡ್ಸಿ' ಅಂದೆ. ಇದಕ್ಕೆ ನನ್ನ ತಂದೆ ತಾಯಿ ಒಪ್ಪಲಿಲ್ಲ, ಏಕೆಂದರೆ ನಮ್ಮಪ್ಪನಿಗೆ ಇದ್ದ ಏಳೆಂಟು ಎಕರೆ ಗದ್ದೆಯಲ್ಲಿ ನನ್ನ ಅಣ್ಣಂದಿರಿಬ್ಬರು, ಒಬ್ಬ ತಮ್ಮ ವ್ಯವಸಾಯದಲ್ಲಿ ತೊಡಗಿದ್ದಾರೆ. ನಾನಾದ್ರೂ ಪಟ್ಟಣದಲ್ಲಿರಲಿ ಎಂಬ ಆಶೆ ಅವರದು. ಬೆಂಗಳೂರಿನ ಜೀವನದ ಬಗ್ಗೆ ಪರಿಪರಿಯಾಗಿ ವಿವರಿಸಿದರೂ ಅದು ಅವರ ತಲೆಗೆ ಹತ್ತದೆ ಅನಿವಾರ್ಯವಾಗಿ ವಾಪಸ್ಸು ಒಂದು ಮತ್ತೆ ಅದೇ ಮೂರು ಸಾವಿರದ ಸಂಬಳದ ಕೆಲಸಕ್ಕೆ ಸೇರಿಕೊಂಡಿದ್ದೇನೆ. ನನ್ನ ಪಾಲಿಗಂತೂ ಬೆಂಗಳೂರು 'ಅಂದದೂರು' ಆಗಿ ಉಳಿದಿಲ್ಲ, ಆದರೆ ದೂರದ ಬೆಟ್ಟ ನುಣ್ಣಗೆ ಎನ್ನುವಂತೆ ನಮ್ಮ ಮನೆಯವರಿಗೆ ಇದಿನ್ನೂ ಅಂದದೂರಾಗಿದೆ. ಇದೆಂತಹ ವಿಪರ್ಯಾಸವಲ್ಲವೆ.....

-ಡಿ.ಎಲ್.ಮಂಜು, ಬೆಂಗಳೂರು



ಹೊಸ ತೇಗ

ಕಳೆದ ಒಂದೂವರೆ ವರ್ಷದಿಂದ ಜೈಲಿನಲ್ಲಿರುವ ನನಗೆ ಅಂಚೆ ಮೂಲಕ 'ಲಂಕೇಶ್' ನಿರಂತರವಾಗಿ (4-5 ಪ್ರತಿಗಳು ಮಿಸ್ ಆಗಿರುವುದು ಬಿಟ್ಟರೆ, ತಲುಪುತ್ತಿದೆ. ಈ ಹಿಂದೆ ಕೂಡ ನಾನು ಮೇಷ್ಟ್ರ ಪತ್ರಿಕೆಯನ್ನು ಕೋಮುವಾದ ಹಾಗೂ ಜಾತಿವಾದದ ವಿರೋಧಿ ಕಾರಣಕ್ಕೆ ಮೆಚ್ಚಿಕೊಂಡು ಓದುತ್ತಿದ್ದೆ. ಇಂದು ಪ್ರತಿವಾರ ಪತ್ರಿಕೆಗಾಗಿ ಕಾತುರದಿಂದ ಎದುರು ನೋಡುವ ನನಗೆ ಅದೊಂದು ವೈಚಾರಿಕ ಸಂಗಾತಿಯಾಗಿದೆ. ಅದಕ್ಕಾಗಿ ತಮಗೆಲ್ಲರಿಗೆ ಧನ್ಯವಾದಗಳು.

ಕಂಡಹಾಗೆ, ಚಾರ್ವಾಕ, ಬಹುತೇಕ ವಸ್ತುನಿಷ್ಠ ತನಿಖಾ ವರದಿಗಳು ಹಾಗೂ ವೈಚಾರಿಕ ಲೇಖನಗಳು ಪತ್ರಿಕೆಗೆ ಒಂದು ಮೆರುಗನ್ನು ನೀಡುವುದಲ್ಲದೆ, ಕರ್ನಾಟಕದಲ್ಲಿ ಒಂದು ವಿಸ್ತಾರವಾದ ಪ್ರಗತಿಪರ ಓದುಗ ಸಮೂಹವನ್ನೇ ಸೃಷ್ಟಿಸಬಹುದಾಗಿದೆ. ಹಾಗೆಂದು ನನ್ನ ಹಾರೈಕೆ ಕೂಡ. ಯಾವುದೇ ಪತ್ರಿಕೆಯಿರಲಿ ಅದರ ನಿಲುವು-ಧೋರಣೆಗಳೂ ಕೂಡ ತುಂಬಾ ಮುಖ್ಯವಾದವು. ಅವೇ ಅದರ ಅಸ್ತಿತ್ವವನ್ನು ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಒಟ್ಟಾರೆ ಕರ್ನಾಟಕದಲ್ಲಿ ಪತ್ರಿಕೆ ಮೇಷ್ಟ್ರ ಕಾಲಘಟ್ಟವನ್ನು ಮೀರಿ ತನ್ನ ವೈಚಾರಿಕ-ಪ್ರಗತಿಪರ ಛಾಪನ್ನು ಮೂಡಿಸಲಿ.

ಪತ್ರಿಕೆ, ಸಮಾಜ, ಓದುಗರ ದೃಷ್ಟಿಯಿಂದ ಸಮಾಜ ಘಾತುಕ ಗೂಂಡಾಗಳನ್ನು, ಅವರ ಕುಕೃತ್ಯಗಳನ್ನು ವೈಭವೀಕರಿಸುವಂತಹ ಲೇಖನಗಳನ್ನು ಚೆಕ್ ಮಾಡುತ್ತೀರೆಂದು ನಂಬಿದ್ದೇನೆ. ಜೊತೆಗೆ ಆಗಾಗ, ಮರೆಯಾಗುತ್ತಿರುವ ಗ್ರಾಮೀಣ-ಜನಪರ ಕ್ರೀಡೆಗಳ ಬಗೆಗಿನ ವಿಮರ್ಶಾತ್ಮಕ ಲೇಖನಗಳನ್ನು ಹಾಗೂ ಸಾಹಿತ್ಯದ ಲೇಖನಗಳನ್ನು ನಿರೀಕ್ಷಿಸಬಹುದೆ?

ಇತ್ತೀಚೆಗೆ ಶುರುವಾಗಿರುವ ಗೈಡ್ ಕೂಡ ವಿದ್ಯಾರ್ಥಿಕಲಿಕಾ ಆಕಾಂಕ್ಷೆಗಳ ಬುದ್ಧಿಮತ್ತೆಗೆ ಕಸರತ್ತು ನೀಡುವಂತಹ ಒಂದು ವಿಭಿನ್ನವಾದ ಮಾಸ ಪತ್ರಿಕೆ ಎನಿಸಿದೆ.


-ಉಜ್ಜನಿ ಗೌಡ
ಕೇಂದ್ರ ಕಾರಾಗೃಹ,
ಬೆಳಗಾವಿ.

ಈ ವಿಭಾಗಕ್ಕೆ ಇ-ಮೇಲ್‌ನಲ್ಲಿ ಪತ್ರಗಳನ್ನು ಬರೆಯಲಿಚ್ಛಿಸುವವರು ಬರಹ ಅಥವಾ ನುಡಿ ತಂತ್ರಾಂಶದಲ್ಲಿ ಕಳುಹಿಸಿಕೊಡಬಹುದು.

ನಮ್ಮ e-mail ವಿಳಾಸ
lankesh70@rediffmail.com

ಈಗ ಅದೆಲ್ಲವೂ ನೆನಪು.... ಬರೀ ನೆನಪು... ಕಾಶ್ಮೀರವನ್ನು ನೆನಪಿಸಿಕೊಂಡಾಗಲೆಲ್ಲ ಅಪ್ಪಾಜಿ ನನ್ನ ಕಣ್ಮುಂದೆ ಬರುತ್ತಾರೆ. ಸಂತೋಷದ ಜೊತೆಗೆ ನೋವೂ ಇದ್ದೇ ಇರುತ್ತೆ ಅಂತಾರಲ್ಲ.... ಹಾಗೆ ಇದನ್ನೆಲ್ಲ ನಿಮಗೆ ಹೇಳುವಾಗ ಆ ಸ್ವರ್ಗದ ಸೌಂದರ್ಯದ ನೆನಪಿನೊಂದಿಗೆ, ಅಪ್ಪಾಜಿ ಇವತ್ತು ಇಲ್ಲದಿರುವ ನೋವೂ ನನ್ನನ್ನು ಆವರಿಸಿ ಕೊಳ್ಳುತ್ತಿದೆ.....

ಸ್ವರ್ಗವನ್ನು ಕಂಡ ನೆನಪು



ಮೂರು ದಿನದ ಸುದೀರ್ಘ ರೈಲು ಪ್ರಯಾಣದ ...ತರ ನಾವು ಜಮ್ಮು ತಲುಪಿದೆವು. ಅಲ್ಲಿ ಬುಕ್ ...ಡಲಾಗಿದ್ದ ಹೋಟೆಲಿನಲ್ಲಿ ಬಿಸಿನೀರು ಸ್ನಾನ ಮಾಡಿ ...ಶ್ರಾಂತಿ ಪಡೆದೆವು. ಮರುದಿನ ಬೆಳಗ್ಗೆ ನಾವು ...ಮ್ಮುವಿನಿಂದ ಶ್ರೀನಗರಕ್ಕೆ ಬಸ್ಸಿನಲ್ಲಿ ಹೊರಟೆವು. ...ಮ್ಮ ನಮ್ಮೆಲ್ಲರಿಗಾಗಿ ಒಂದು ವಿಶೇಷ ಬಸ್ಸನ್ನು ...ವಸ್ಥೆ ಮಾಡಿದ್ದರಿಂದ ನಮಗದು ಒಂದು ಪಿಕ್‌ನಿಕ್ ...ರ ಕಾಣಿಸಿತು. ಕಾಶ್ಮೀರದ ಆ ಬೆಟ್ಟ-ಗುಡ್ಡಗಳ ಮೇಲೆ ...ಸ್ಸಿನಲ್ಲಿ ಹೋದಾಗ ರೋಮಾಂಚನವಾಯಿತು.

ಅಂದಹಾಗೆ, ದಕ್ಷಿಣದ ಮದ್ರಾಸಿನಿಂದ ಉತ್ತರದಲ್ಲಿನ ...ಶ್ಮೀರಕ್ಕೆ ಮಾಡಿದ ಈ ಪ್ರಥಮ ಪ್ರಯಾಣ ನಮಗೆಲ್ಲ ...ಂದು ರೀತಿಯಲ್ಲಿ ದೊಡ್ಡ ಪಾಠವೂ ಆಗಿತ್ತು. ...ಲ್ಲಿಯ ತನಕ ನಾವ್ಯಾರೂ ಮದ್ರಾಸ್ ಮತ್ತು ಬೆಂಗಳೂರು ...ಟ್ಟರೆ ಬೇರೆ ದೊಡ್ಡ ನಗರಗಳನ್ನಾಗಲಿ, ರಾಜ್ಯಗಳನ್ನಾಗಲಿ ...ನೋಡಿರಲಿಲ್ಲ. ಅವುಗಳ ಬಗ್ಗೆ ನಾವು ಪಠ್ಯ ಪುಸ್ತಕಗಳಲ್ಲಿ ...ಮಾತ್ರ ಓದಿದ್ದೆವು. ಆದರೆ ಈ ಕಾಶ್ಮೀರ ಪ್ರವಾಸ ...ರತದ ದರ್ಶನವನ್ನೇ ನೀಡಿತ್ತು. ರೈಲಿನಲ್ಲಿ ಪ್ರಯಣಿಸು ...ವಾಗ ವಿವಿಧ ಜನರನ್ನು, ವಿವಿಧ ಭಾಷೆಗಳನ್ನು, ...ವಿಧ್ಯಮಯ ಉಡುಪುಗಳನ್ನು ನೋಡಿದೆವು. ಆಗಿನ್ನೂ ...ಂಭತ್ತನೇ ತರಗತಿಯಲ್ಲಿದ್ದ ನನಗೆ ಅದೊಂದು ...ದ್ಭುತವಾದ ಅನುಭವವಾಗಿತ್ತು. ಏಕೆಂದರೆ ಕಣ್ಣಿಗೆ ...ಡದ್ದೆಲ್ಲ ನನ್ನಲ್ಲಿ ವಿಸ್ಮಯ ಮೂಡಿಸುತ್ತಿತ್ತು. ರೈಲಿನ ...ಟಕಿಯಿಂದಾಚೆಗೆ ಇದ್ದ ಭೂಮಿ ದಿಢೀರನೆ ಕೆಂಪು ...ಣ್ಣದಿಂದ ಕಪ್ಪು ಬಣ್ಣ ಪಡೆಯುತ್ತಿದ್ದದ್ದು, ಮತ್ತಿನ್ನೆಲ್ಲೋ ...ಪು ಮಣ್ಣಾಗಿ ಬದಲಾಗುತ್ತಿದ್ದದ್ದು, ಭೂಮಿಯ ...ಪರಿತ್ಯವನ್ನೇ ನನ್ನ ಮುಂದೆ ತೆರೆದಿಟ್ಟಂತಾಗಿತ್ತು. ಇದೆಲ್ಲ ...ಗೆ ಸಾಧ್ಯ ಎಂದು ತಿಳಿದುಕೊಳ್ಳಬೇಕೆಂಬ ಆಸೆ, ...ತೂಹಲ, ಅಚ್ಚರಿ ನನ್ನಲ್ಲಿ ಮೂಡಿತು.

ಇಂತಹ ಅನುಭವ ನನಗೆ ಸಿಕ್ಕುವಹಾಗೆ ಮಾಡಿದ್ದ ...ಪ್ಪಾಜಿ ಮತ್ತು ಅಮ್ಮನ ಬಗ್ಗೆ ನನ್ನಲ್ಲಿ ಕೃತಜ್ಞಭಾವ ...ಳೆಯಿತು. ಯಾಕೆಂದರೆ ಕಾಶ್ಮೀರದಲ್ಲಿ ಚಿತ್ರೀಕರಣ ...ಮಾಡುವುದೇ ಅತ್ಯಂತ ತ್ರಾಸದ ಕೆಲಸವಾಗಿತ್ತು. ಆ ...ತ್ರಾಸದ ನಡುವೆಯೂ ಅವರು ಮಕ್ಕಳ ಬಗ್ಗೆ ಅತೀವ ...ಪ್ರೀತಿ ತೋರಿಸಿದ್ದನ್ನು ಎಂದೂ ಮರೆಯಲು ಸಾಧ್ಯವಿಲ್ಲ. ...ಷ್ಟೇ ಅಲ್ಲ, ತಮ್ಮ ಮಕ್ಕಳನ್ನು ಮಾತ್ರವಲ್ಲದೆ ತಮ್ಮ ...ಣ್ಣ-ತಂಗಿಯರ ಮಕ್ಕಳನ್ನೂ, ಭಗವಾನ್ ಅವರ ...ಮಕ್ಕಳನ್ನೂ ಕರೆದುಕೊಂಡು ಹೋಗಿದ್ದರು. ಅಷ್ಟೇ ...ಲ್ಲದೆ, ಚಿ. ಉದಯ ಶಂಕರ್ ಅವರ ತಾಯಿಯನ್ನು, ...ನ್ನೂ ಅನೇಕರನ್ನು ಕರೆದುಕೊಂಡು ಹೋಗಿದ್ದದ್ದು ...ಲಭದ ಮಾತಲ್ಲ.

ಇದೆಲ್ಲ ಸಾಧ್ಯವಾಗಿದ್ದು ಏಕೆಂದರೆ ನಮ್ಮ ...ಪ್ಪಾಜಿಯವರಿಗೆ ತಾವು ಮತ್ತು ತಮ್ಮ ಮಕ್ಕಳು ...ಮಾತ್ರ ಮುಖ್ಯವಾಗಿರಲಿಲ್ಲ. ಹಾಗಿದ್ದಿದ್ದರೆ ಅವರು ...ಮ್ಮನ್ನು ಮಾತ್ರ ಕಾಶ್ಮೀರಕ್ಕೆ ಕರೆದುಕೊಂಡು ...ಹೋಗಬಹುದಿತ್ತು. ಆದರೆ ಅಪ್ಪಾಜಿಗೆ ಅದೆಲ್ಲಾ ...ಷ್ಟವಾಗುತ್ತಿರಲಿಲ್ಲ, ನಮ್ಮ ಕಸಿನ್‌ಗಳನ್ನು ಕೂಡ ಅವರು ...ಮ್ಮ ಮಕ್ಕಳಂತೆಯೇ ನೋಡಿಕೊಳ್ಳುತ್ತಿದ್ದರು. ಹೀಗಾಗಿ ...ಷ್ಟೂ ಜನ ಕಾಶ್ಮೀರಕ್ಕೆ ಹೊಗಬೇಕು ಎಂಬುದು ...ವರ ಪ್ರೀತಿಯ ಆದೇಶ ಮತ್ತು ಆಸೆ ಆಗಿತ್ತು.

ಕಾಶ್ಮೀರ ತಲುಪಿದಾಗ ಅಪ್ಪಾಜಿ "ಸ್ವರ್ಗವನ್ನು ...ತೋರಿಸುತ್ತೇನೆ" ಎಂದು ಯಾಕೆ ಹೇಳಿದ್ದರು ಎಂಬುದು ...ರ್ಥವಾಯಿತು. ಕಾಶ್ಮೀರವನ್ನು ಭೂಮಿಯ ಮೇಲಿನ ...ಸ್ವರ್ಗ' ಎಂದು ಕರೆಯುತ್ತಾರಲ್ಲವೆ? ನಿಜಕ್ಕೂ ಅದು ...ಸ್ವರ್ಗವೇ ಸರಿ! ಒಂದು ಕಡೆ ಕಣ್ಣು ಹಾಯಿಸಿದಷ್ಟೂ ಕಾಣುವ ಹಸಿರು, ಮತ್ತೊಂದು ಕಡೆ ಗಗನಕ್ಕೆ ಚುಂಬಿಸುತ್ತಿವೆ ಅನಿಸುವ ಸಾಲು ಸಾಲು ಪರ್ವತಗಳು. ಶ್ರೀನಗರವನ್ನು ದಾಟಿ ಇನ್ನೂ ಉತ್ತರಕ್ಕೆ ಹೋದರೆ ಹಿಮವನ್ನು ಮೈಮೇಲೆ ಹರಡಿಕೊಂಡಿರುವ ಎತ್ತರಗಟ್ಟಲೆ ಭೂಮಿ! ಇವನ್ನೆಲ್ಲ ನೋಡಿ ನಾವು ರೋಮಾಂಚನಗೊಂಡೆವು.

ದಯವಿಟ್ಟು ಕ್ಷಮಿಸಿ ನಾನು ಕವಿಯಲ್ಲ, ಒಂದು ವೇಳೆ ನಾನು ಕವಿಯಾಗಿದ್ದಿದ್ದರೆ, ನಾನು ಕಂಡ ಕಾಶ್ಮೀರವನ್ನು ಕಾವ್ಯಮಯವಾಗಿ ವರ್ಣಿಸುತ್ತಿದ್ದೆ, ಆದರೆ ಕವಿಯಾಗಿಲ್ಲದಿರುವ ನನಗೆ ಆ ಸೌಂದರ್ಯವನ್ನು ವರ್ಣಿಸಲು ಪದಗಳೇ ಸಿಗದೆ ಅಸಹಾಯಕನಾಗಿದ್ದೇನೆ. ಒಂದಂತೂ ಸತ್ಯ ಪ್ರತಿಯೊಬ್ಬರೂ ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಭೂಮಿ ಮೇಲಿನ ಸ್ವರ್ಗವಾದ ಕಾಶ್ಮೀರವನ್ನು ನೋಡಲೇಬೇಕು. ಅಚ್ಚರಿಯ ಸಂಗತಿಯಾವುದೆಂದರೆ ಅಂದು ಕಾಶ್ಮೀರಕ್ಕೆ ಹೋದ ನಂತರ ಇಂದಿನ ತನಕ ನನಗೆ ಮತ್ತೊಮ್ಮೆ ಆ ಸ್ವರ್ಗಕ್ಕೆ ಭೇಟಿ ನೀಡಲು ಸಾಧ್ಯವೇ ಆಗಿಲ್ಲ, ಅದೇ ಮೊದಲ ಬಾರಿ... ಅದೇ ಕೊನೆಯ ಬಾರಿ... ಆದರೆ ಅವಕಾಶ ಸಿಕ್ಕಿದರೆ ಮತ್ತೊಮ್ಮೆ ಕಾಶ್ಮೀರವನ್ನು ನೋಡುವ ಆಸೆ ಇದೆ. ಇವತ್ತು ಭೂಮಿಯ ಮೇಲಿನ ಆ ಸ್ವರ್ಗದಲ್ಲಿ ದಿನನಿತ್ಯ ಗುಂಡಿನ ಶಬ್ದ ಮಾರ್ದನಿಸುತ್ತಿದೆ ಎಂದು ಪತ್ರಿಕೆಗಳಲ್ಲಿ ಓದಿದಾಗ ಬೇಸರವಾಗುತ್ತದೆ.

ಕಾಶ್ಮೀರದಲ್ಲಿ ಅಪ್ಪಾಜಿ ಮತ್ತು ಅಮ್ಮ ಬ್ಯುಸಿ ಆಗಿದ್ದಾಗ ನಮಗೆ ಸುತ್ತ ಮುತ್ತಲಿನ ಪ್ರದೇಶಗಳನ್ನು ತೋರಿಸಲು ಒಬ್ಬ ಗೈಡ್‌ಅನ್ನು ನೇಮಿಸಿದ್ದರು. ಅಲ್ಲಿಯ ಬಹುತೇಕ ಎಲ್ಲ ಪಾರ್ಕುಗಳಿಗೆ ನಾವು ಭೇಟಿ ನೀಡಿದೆವು. ಅದರಲ್ಲೂ ಗುಲ್‌ಮೊಹರ್ ಪಾರ್ಕ್‌ನಲ್ಲಿ ನಾವು ಸಂತೋಷದಿಂದ ಸುತ್ತಾಡಿದ್ದು ಇಂದಿಗೂ ಸ್ಪಷ್ಟವಾಗಿ ನೆನಪಿದೆ. ಅಷ್ಟೇ ಅಲ್ಲ, ನಾವೆಲ್ಲಾ ವಿಶ್ವವಿಖ್ಯಾತ ದಾಲ್ ಸರೋವರಕ್ಕೂ ಹೋಗಿದ್ದೆವು. ನಮ್ಮ ಅದೃಷ್ಟ ಎಂತಹದ್ದೆಂದರೆ, ಆ ದಿನ ಆಕಾಶದಲ್ಲಿ ಪೂರ್ಣ ಚಂದ್ರ ಇದ್ದ. ಹುಣ್ಣಿಮೆಯ ರಾತ್ರಿ ದಾಲ್ ಸರೋವರದಲ್ಲಿ ದೋಣಿಯಲ್ಲಿ ಪ್ರಯಾಣಿಸುವುದೆಂದರೆ ಅದು ಮತ್ತೊಂದು ಅದ್ಭುತ. ದೋಣಿಯಲ್ಲಿ ಅಂಗಾತ ಮಲಗಿ ಆಕಾಶದಲ್ಲಿ ಹೊಳೆಯುತ್ತಿದ್ದ ದುಂಡಗಿನ ಚಂದ್ರನನ್ನು, ನೀರಿನ ಅಲೆಗಳ ಮೇಲೆಲ್ಲ ಹರಡಿದ್ದ ಆತನ ಬೆಳಕನ್ನು ನೋಡುವುದೆಂದರೆ ಸ್ವರ್ಗವಲ್ಲದೆ ಮತ್ತಿನ್ನೇನು?!

ನಾವು ಹೋಗಿದ್ದೇ ಕಾಶ್ಮೀರವನ್ನು ನೋಡಲು, ಶೂಟಿಂಗ್ ನೋಡಲು ಅಲ್ಲ. ಆದ್ದರಿಂದ ಎಲ್ಲಿ ಶೂಟಿಂಗ್ ನಡೆಯುತ್ತಿದೆ? ಹಾಡಿನ ಚಿತ್ರೀಕರಣವೋ? ಅಥವಾ ಫೈಟಿಂಗ್ ದೃಶ್ಯವೋ? ಎಂಬುದೆಲ್ಲ ನಮಗ್ಯಾರಿಗೂ ಗೊತ್ತಿರಲಿಲ್ಲ. ಹಾಗಿದ್ದರೂ ಆಗೊಮ್ಮೆ-ಈಗೊಮ್ಮೆ ನಾವು ಶೂಟಿಂಗ್ ನಡೆಯುತ್ತಿದ್ದ ಕಡೆ ಹೋಗಿದ್ದೆವು. "love me or hate me" ಮತ್ತು "ನಾ ಬೆಂಕಿಯಂತೆ... ನೀ ಗಾಳಿಯಂತೆ...." ಹಾಡುಗಳ ಚಿತ್ರೀಕರಣ ನಡೆಯುತ್ತಿದ್ದ ಜಾಗಗಳಿಗೆ ಭೇಟಿ ನೀಡಿದ್ದೆವು. ಆಗೆಲ್ಲ "ಕಾಶ್ಮೀರದಲ್ಲಿ ಯಾವ್ಯಾವ ಸ್ಥಳಗಳನ್ನು, ಪಾರ್ಕ್‌ಗಳನ್ನು ನೀವು ನೋಡಿದಿರಿ? ಇಂದು ಯಾವ್ಯಾವ ಲೊಕೇಶನ್‌ಗಳಿಗೆ ಹೋಗುತ್ತಿದ್ದೀರಿ?" ಎಂದು ಅಪ್ಪಾಜಿ ನಮ್ಮನ್ನು ವಿಚಾರಿಸುತ್ತಿದ್ದರು.

ಕಾಶ್ಮೀರದಲ್ಲಿ ಶೂಟಿಂಗ್ ಮುಗಿದು ನಾವು ಮದ್ರಾಸಿಗೆ ಹೊರಟಾಗ ನಿಜಕ್ಕೂ ನನಗೊಮ್ಮೆ ಮನಸ್ಸು ಭಾರವಾಯಿತು. ಇದನ್ನು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂತ ನಿಮಗನ್ನಿಸಬಹುದು. ಆದರೆ ಕಾಶ್ಮೀರವನ್ನು ನೋಡಿದವರಿಗೆಲ್ಲ ನನಗನ್ನಿಸಿದಂತೆ ಅನ್ನಿಸದೇ ಇರಲು ಸಾಧ್ಯವೇ ಇಲ್ಲ. ಅಷ್ಟೊಂದು ಸುಂದರವಾದ ಜಾಗ ಅದು.

ಆದರೆ ವಾಪಸ್ಸು ಬರುವಾಗ ನಾಲ್ಕು ದಿನಗಳ ಕಾಲ ದೆಹಲಿಯಲ್ಲಿ ಉಳಿದುಕೊಂಡಿದ್ದೆ. ನಮ್ಮ ದೇಶದ ರಾಜಧಾನಿಯಲ್ಲಿ ನಾನು ಕಾಲಿಟ್ಟದ್ದು ಅದೇ ಮೊದಲ ಬಾರಿ. ನಾವೆಲ್ಲಾ ಅಷ್ಟು ದೂರ ಹೋದ ನಂತರ ದೆಹಲಿ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳನ್ನೂ ನೋಡಬೇಕೆಂಬುದು ಅಪ್ಪಾಜಿಯ ಆಸೆಯಾಗಿತ್ತು.

ದೆಹಲಿಯಲ್ಲಿ ಫತೇಪುರಸಿಕ್ರಿ, ಕೆಂಪುಕೋಟೆ, ಕೆಲವು ಮಾರುಕಟ್ಟೆ ಪ್ರದೇಶಗಳನ್ನು ಸುತ್ತಾಡಿದೆವು. ಅಲ್ಲಿಂದ ಆಗ್ರಾಕ್ಕೆ ಹೋಗಿ ವಿಶ್ವವಿಖ್ಯಾತ ತಾಜ್‌ಮಹಲನ್ನೂ ನೋಡಿಕೊಂಡು ಬಂದೆವು. ಕಾಶ್ಮೀರ ಒಂದು ರೀತಿಯ ಅದ್ಭುತವಾದರೆ, ತಾಜ್ ಮಹಲ್ ಮತ್ತೊಂದು ರೀತಿಯಲ್ಲಿ ನಮ್ಮ ಮನಸ್ಸಿಗೆ ಮುದ ನೀಡಿತು. ದೇಶ ಸುತ್ತು-ಕೋಶ ಓದು ಅಂತ ಹಿರಿಯರು ಹೇಳಿದ್ದು ಎಷ್ಟು ನಿಜ ಎಂಬುದು ಕಾಶ್ಮೀರಕ್ಕೆ ಹೋಗಿ ಬಂದ ನಂತರ ನನಗೆ ಅರಿವಾಯಿತು.

ಸಾಮಾನ್ಯವಾಗಿ ತಂದೆ-ತಾಯಂದಿರು ತಮ್ಮ ಕೆಲಸ-ಕಾರ್ಯದಲ್ಲಿ ಮಗ್ನರಾದಾಗ ತಮ್ಮ ಮಕ್ಕಳನ್ನು ಮರೆಯುತ್ತಾರೆ. ಆದರೆ ಅಪ್ಪಾಜಿ ಕೆಲಸದ ನಡುವೆಯೂ ತಮ್ಮ ಮಕ್ಕಳ ಮೇಲೆ ಪ್ರೀತಿಯ ಸುರಿಮಳೆಯನ್ನು ಸುರಿಯುತ್ತಾ ಬಂದರು. ಇಲ್ಲದಿದ್ದರೆ ನಮಗೆ ಭೂಮಿ ಮೇಲಿನ ಆ'ಸ್ವರ್ಗ'ವನ್ನು ಅಷ್ಟು ಚಿಕ್ಕ ವಯಸ್ಸಿನಲ್ಲೇ ನೋಡಲು ಸಾಧ್ಯವಾಗುತ್ತಿತ್ತೇ? ಅದೂ ಬೇಸಿಗೆಯ ರಜಕ್ಕಾಗಿ ಕಾಯದೇ ಸ್ಕೂಲಿಗೆ ರಜೆ ಹಾಕಿಸಿ ನಮ್ಮನ್ನು ಕರೆದೊಯ್ದದ್ದು ಸಾಮಾನ್ಯ ವಿಷಯವಲ್ಲ. ಬಹುಶಃ ಬೇಸಿಗೆ ರಜೆಯಲ್ಲಿ ಹೋಗಿದ್ದರೆ ನಮಗೆ ಹಿಮವನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ; ನಾವೆಲ್ಲಾ ಹಿಮದ ಚೆಂಡಾಟವನ್ನು ಆಡಲೂ ಆಗುತ್ತಿರಲಿಲ್ಲ...

ಈಗ ಅದೆಲ್ಲವೂ ನೆನಪು.... ಬರೀ ನೆನಪು... ಕಾಶ್ಮೀರವನ್ನು ನೆನಪಿಸಿಕೊಂಡಾಗಲೆಲ್ಲ ಅಪ್ಪಾಜಿ ನನ್ನ ಕಣ್ಮುಂದೆ ಬರುತ್ತಾರೆ. ಸಂತೋಷದ ಜೊತೆಗೆ ನೋವೂ ಇದ್ದೇ ಇರುತ್ತೆ ಅಂತಾರಲ್ಲ.... ಹಾಗೆ ಇದನ್ನೆಲ್ಲ ನಿಮಗೆ ಹೇಳುವಾಗ ಆ ಸ್ವರ್ಗದ ಸೌಂದರ್ಯದ ನೆನಪಿನೊಂದಿಗೆ, ಅಪ್ಪಾಜಿ ಇವತ್ತು ಇಲ್ಲದಿರುವ ನೋವೂ ನನ್ನನ್ನು ಆವರಿಸಿಕೊಳ್ಳುತ್ತಿದೆ.....


(ಮುಂದುವರೆಯುತ್ತದೆ...)

...ನಾಲ್ಕರಲ್ಲಿ ರವಿ!

ಕನ್ನಡದಲ್ಲಿ ಈಗ ಅತ್ಯಂತ ಬೇಡಿಕೆಯ ನಟ ಯಾರು? ಅಂತ ಕೇಳಿದರೆ ...ವೆಲ್ಲಾ ಉಪ್ಪಿ, ಪುನೀತ್, ದರ್ಶನ್ ಇತ್ಯಾದಿ ಹೀರೋಗಳ ಹೆಸರನ್ನು ...ಡಬಹುದು.

ಆದರೆ ಗಾಂಧಿನಗರಿಗಳ ಪ್ರಕಾರ ಆ ಸ್ಥಾನ ಕ್ರೇಜಿಸ್ಟಾರ್ ರವಿಚಂದ್ರನ್‌ಗೆ ...ಲ್ಲುತ್ತದೆ. ಯಾಕೆಂದರೆ ಸದ್ಯಕ್ಕೆ ರವಿಚಂದ್ರನ್ ಏಕಕಾಲದಲ್ಲಿ ನಾಲ್ಕು ...ತ್ರಗಳಲ್ಲಿ ನಟಿಸುತ್ತಿದ್ದಾರೆ. ಒಂದೆಡೆ 'ಒಡಹುಟ್ಟಿದವಳು', ...ಮತ್ತೊಂದೆಡೆ 'ಬ್ರಾಹ್ಮಣ', ಅದರ ಜೊತೆಜೊತೆಗೆ ...ಯುಗಾದಿ'. ಈ ಮೂರು ಚಿತ್ರಗಳ ನಡುವೆ ...ಮಯ ಸಿಕ್ಕಾಗಲೆಲ್ಲಾ 'ನೀಲಕಂಠ' ಚಿತ್ರೀಕರಣಕ್ಕೂ ...ಹಾಜರಾಗುತ್ತಿದ್ದಾರೆ ರವಿಚಂದ್ರನ್!

ಹೀಗೆ ಏಕಕಾಲದಲ್ಲಿ ನಾಲ್ಕು ಚಿತ್ರ...ಗಳಲ್ಲಿ ನಟಿಸುತ್ತಿರುವ ಬೇರೆ ಯಾವ ...ಯಕ ನಟನೂ ನಮ್ಮ ನಡುವೆ ...ಲ್ಲದಿರುವುದರಿಂದ ರವಿಚಂದ್ರನ್ ...ವರನ್ನು ನಂಬರ್ ಒನ್ ನಟ ...ಥವಾ ಅತ್ಯಂತ ಬೇಡಿಕೆಯ ... ಎಂದು ಕರೆಯಬಹುದೇ ...ಎಂಬುದರ ಬಗ್ಗೆ ಹಲವರ ...ಇದೆ ಎಂಬುದು ಮಾತ್ರ ... ಸತ್ಯ!



ಸುದ್ದಿಯಲ್ಲಿ ಸಿನಿ ಪತ್ರಕರ್ತರು

ಇತ್ತೀಚೆಗೆ ಸಿನಿಮಾ ಪತ್ರಕರ್ತರು ಕನ್ನಡ ಸಿನಿಮಾಕ್ಕಿಂತ ಹೆಚ್ಚು ಸುದ್ದಿ ಮಾಡುತ್ತಿದ್ದಾರೆ.



ಮೊನ್ನೆ ಮೊನ್ನೆ 'ರೂಪತಾರಾ'ದ ಗಣಪತಿ ಭಟ್‌ರವರು ರಾಜ್‌ಕುಮಾರ್ ಬಗ್ಗೆ ಒಂದು ಪುಸ್ತಕವನ್ನು ಹೊರತಂದರು. ಈಗ ರಾಜ್‌ಕುಮಾರ್‌ರವರ ಸಮಾಧಿ ಬಳಿ ಹತ್ತಿಪ್ಪತ್ತು ರಾತ್ರಿ-ಹಗಲು ಕಳೆದ ಯತಿರಾಜ್ ಎಂಬ ಪತ್ರಕರ್ತ ಕಂ ನಟ ಸಮಾಧಿ ದೇಗುಲವಾದ ಬಗ್ಗೆ ಪುಸ್ತಕ ಹೊರತಂದಿದ್ದಾರೆ.

ಚಿತ್ರಲೋಕ ಡಾಟ್ ಕಾಂನ ಕೆ.ಎಂ. ವೀರೇಶ್ ಆಗಸ್ಟ್ 14ರಂದು ಒಂದು ವಿಶೇಷವಾದ ಚಿತ್ರಪ್ರದರ್ಶನವನ್ನು ಏರ್ಪಡಿಸಲಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಇದುವರೆಗೂ ತಯಾರಾಗಿರುವ ಪ್ರತಿಯೊಂದು ಸಿನಿಮಾದ ಕನಿಷ್ಠ ಒಂದಾದರೂ ಫೋಟೋವನ್ನು ಅವರು ಪ್ರದರ್ಶಿಸಲಿದ್ದಾರೆ. ಇದು ನಿಜಕ್ಕೂ ಒಂದು ಸಾಹಸವೇ ಸರಿ.

ಈ ಮಧ್ಯೆ ಕರ್ನಾಟಕ ಪತ್ರಕರ್ತರ ಸಂಘ ನೀಡುವ ಪ್ರಶಸ್ತಿಯನ್ನು ಸಿನಿಮಾ ಪತ್ರಕರ್ತರಾದ 'ಅರಗಿಣಿ'ಯ ಮೈಸೂರು ಹರೀಶ್ ಮತ್ತು ಹವ್ಯಾಸಿ ಪತ್ರಕರ್ತ ಬಿ.ಎನ್. ಸುಬ್ರಮಣ್ಯ ಪಡೆದಿದ್ದಾರೆ. ಎಲ್ಲರಿಗೂ 'ಲಂಕೇಶ್' ಅಭಿನಂದನೆಗಳು.

ಶಾರ್ಟ್ ಕಟ್

ಕ್ಯಾ ಖೂಬ್‌ಸೂರತ್ ಲಗತಿ ಹೊ sss

ಮೊನ್ನೆ ಟಿ.ವಿ.ಯಲ್ಲಿ 'ಲಗೆ ರಹೊ ಮುನ್ನಾಭಾಯ್' ಚಿತ್ರದ ಹಾಡು ಬರ್‍ತಾ ಇತ್ತು. ಮೂಡ್ ಆಗಿ ಎಷ್ಟು ಮುದ್ದಾಗಿ ಕಾಣ್ತಿತ್ತು ಆ ಹುಡುಗಿ!

ನಂತರ 'ಪರಿಣೀತಾ' ಚಿತ್ರದ
"ದಿಲ್ ಕಿ ಜೊ ಬಾತೆ ಹೈ
ಬಾತೆ ಜೊ ದಿಲ್ ಕಿ ಹೈ
ಪಿಯೂ ಬೋಲೆ ಪಿಯಾ ಬೋಲೆ
ಕ್ಯಾ ಯೆ ಬೋಲೆ ಜಾನು ನಾ"
ಎಂಬ ಮೆಲೋಡಿಯಸ್ ಹಾಡು ಕೇಳಿ ಬಂತು...



ಟೈಟ್ ಸಲ್ವಾರ್ ಕಮೀಜ್‌ನಲ್ಲಿ ಮೂರುದ್ದದ ಜಡೆಯ ಸರಳ ಸುಂದರಿ ಸಿಂಪ್ಲಿ ಲವ್ಲಿ ಆ್ಯಂಡ್ ಲವ್ಲಿ!

ಹೌದು ಈಗ 'ಲಗೆ ರಹೋ ಮುನ್ನಾಭಾಯ್'ನಲ್ಲಿರುವ ಮುದ್ದು ಹುಡುಗಿಯೇ 'ಪರಿಣೀತಾ'ದಲ್ಲಿ ಸಿಂಪಲ್ ಸುಂದರಿ! ಈ ಚೆಲುವೆ ವಿದ್ಯಾಬಾಲನ್... ಹ್ಯಾಗೆ ನೋಡಿದರೂ ಈಕೆ ಸೌಂದರ್ಯದ ಗಣಿಯೇ! ಕ್ಯಾ ಖೂಬ್‌ಸೂರತ್ ಲಗತಿ ಹೊ...

'ಸಂತ'ನ ಎದುರು ಸೀತಾರಾಂ



ಚಿತ್ರರಂಗದ ಅಪೂರ್ವ ಜೋಡಿಯೊಂದು ಈಗ ಬೇರ್ಪಟ್ಟಿದೆ. ಆದರೆ ಹೀಗೆ 'ಟು, ಟು' ಹೇಳಿರುವ ಇವರಿಬ್ಬರ ನಡುವೆ ಯಾವುದೇ ಮನಸ್ತಾಪ, ಬೇಸರ ಇಲ್ಲ ಎಂಬುದೇ ವಿಶೇಷ.


ನಾವೀಗ ಹೇಳುತ್ತಿರುವುದು ರವಿಚಂದ್ರನ್-ಸೀತಾರಾಂ ಜೋಡಿ ಬಗ್ಗೆ. ಸೀತಾರಾಂ ಕಳೆದ ಹದಿನಾಲ್ಕು ವರ್ಷಗಳಿಂದ ಕ್ರೇಜಿಸ್ಟಾರ್ ಜೊತೆ ಸುಮಾರು 47 ಚಿತ್ರಗಳಿಗೆ ಕ್ಯಾಮರಾಮನ್ ಆಗಿ ಕೆಲಸ ಮಾಡಿದ್ದಾರೆ. ಇನ್ನು ಮೂರು ಚಿತ್ರಗಳಿಗೆ ಇವರಿಬ್ಬರು ಜೊತೆಯಾಗಿ ಕೆಲಸ ಮಾಡಿದ್ದರೆ ಅರ್ಧ ಶತಕ ಬಾರಿಸಿದಂತಾಗುತ್ತಿತ್ತು.

ಅಂದಹಾಗೆ, ಒಬ್ಬ ನಾಯಕನಟ ಮತ್ತು ಛಾಯಾಗ್ರಾಹಕ ಹದಿನಾಲ್ಕು ವರ್ಷಗಳ ಸುದೀರ್ಘ ಕಾಲ ಒಟ್ಟಿಗೆ ಕೆಲಸ ಮಾಡಿದ ಉದಾಹರಣೆ ಪ್ರಾಯಶಃ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಇಲ್ಲ. ಇನ್ನೊಂದು ವಿಶೇಷತೆ ಏನೆಂದರೆ ರವಿಚಂದ್ರನ್ ಬಿಟ್ಟರೆ ಸೀತಾರಾಂ ಬೇರೆ ಯಾವ ನಾಯಕನಟನ ಚಿತ್ರದಲ್ಲಿಯೂ ಕೆಲಸ ಮಾಡಿದವರೇ ಅಲ್ಲ. ಹೀಗಾಗಿ ಸೀತಾರಾಂ ಒಂದು ರೀತಿಯಲ್ಲಿ ರವಿಚಂದ್ರನ್ ಅವರ ರೈಟ್ ಹ್ಯಾಂಡ್ ತರಹ ಇದ್ದರು.

ಈಗ ರವಿಚಂದ್ರನ್ ಅಪ್ಪಣೆ ಪಡೆದು ಸೀತಾರಾಂ ಮೊದಲ ಬಾರಿಗೆ ಶಿವರಾಜ್ ಕುಮಾರ್ ಅಭಿನಯದ 'ಸಂತ' ಚಿತ್ರಕ್ಕೆ ಕ್ಯಾಮರಾಮನ್ ಆಗಿದಾರೆ. ಈ ಮಧ್ಯೆ ರವಿಚಂದ್ರನ್ ನಟಿಸುತ್ತಿರುವ 'ಬ್ರಾಹ್ಮಣ' ಮತ್ತು 'ಯುಗಾದಿ' ಚಿತ್ರಗಳಿಗೆ ಸೀತಾರಾಂ ಬದಲಾಗಿ ಬೇರೆಯವರು ಕ್ಯಾಮರ ಹಿಡಿದಿದ್ದಾರೆ.

ಅದೇನೇ ಇರಲಿ, ರವಿಚಂದ್ರನ್ ಅವರ ಯಶಸ್ಸಿನ ಬಹುಪಾಲು ಈ ಶ್ರೇಷ್ಠ ತಂತ್ರಜ್ಞನಿಗೂ ಸಲ್ಲುತ್ತದೆ ಎಂದರೆ ಅದು ಅತಿಶಯೋಕ್ತಿಯ ಮಾತಲ್ಲ. ಈಗ 'ಸಂತ'ನ ಮುಖಾಂತರ ತಮ್ಮ ವೃತ್ತಿ ಜೀವನದಲ್ಲಿ ಹೊಸ ಅಧ್ಯಾಯ ಬರೆಯಲು ಹೊರಟಿರುವ ಸೀತಾರಾಂ ನಿಜವಾದ ಅಗ್ನಿ ಪರೀಕ್ಷೆ ಯನ್ನು ಎದುರಿಸಬೇಕಿದೆ.

ಪ್ರೀತಿ, ಪ್ಯಾರ್, ಲವ್ವು



ಪ್ರೀತಿಗೆ ಗಾಂಧಿನಗರದಲ್ಲಿ ಏಕ್‌ದಂ ಬೇಡಿಕೆ ಬಂದಿದೆ.

ಪ್ರೇಮ್ ನಿರ್ದೇಶನದ 'ಪ್ರೀತಿ ಏಕೆ ಭೂಮಿ ಮೇಲಿದೆ?' ಎಂಬ ಚಿತ್ರ ಮುಂದಿನ ವಾರ ಸೆಟ್ಟೇರಲಿದೆ. ಈ ಮಧ್ಯೆ ಸುಬ್ರಹ್ಮಣ್ಯ ತೆನೆಮನೆ ಎಂಬುವವರು ತಮ್ಮ ಚೊಚ್ಚಲ ನಿರ್ದೇಶನದ ಚಿತ್ರಕ್ಕೆ 'ಈ ಪ್ರೀತಿ ಒಂಥರಾ...' ಎಂದು ಹೆಸರಿಟ್ಟಿದ್ದಾರೆ. ಹಾಗೆಂಯೇ 'ಪ್ರೀತಿಯೇ ಹೀಗೆ....' ಎಂಬ ಚಿತ್ರ ಕೂಡ ಸಧ್ಯದಲ್ಲೇ ಸೆಟ್ಟೇರಲಿದೆಯಂತೆ.

ಈ ಎಲ್ಲಾ ಹೆಸರುಗಳಿಗೆ ಅಡಿಪಾಯ ಹಾಕಿದ್ದು ಪ್ರೀತಿಯ ಸರದಾರ ಕ್ರೇಜಿಸ್ಟಾರ್ ರವಿಚಂದ್ರನ್. 'ಪ್ರೀತ್ಸೋದ್ ತಪ್ಪಾ...?', 'ಪ್ರೀತ್ಸೋಣ ಬಾ' ತರಹದ ಹೆಸರುಗಳನ್ನು ಪ್ರಥಮ ಬಾರಿಗೆ ಕೊಟ್ಟವರೇ ರವಿಚಂದ್ರನ್! "ಪ್ರೀತಿಗೆ ಸಾವಿಲ್ಲ ಎಂಬಂತೆ, ಪ್ರೀತಿ ಹೆಸರಿನ ಟೈಟಲ್‌ಗೂ ಸಾವಿಲ್ಲ" ಎಂದು ಗಾಂಧಿನಗರದ ಚಿತ್ರಬ್ರಹ್ಮರು ಹೇಳುತ್ತಿದ್ದರೆ, "ಪ್ರೀತಿಯ ಹೆಸರಲ್ಲಿ ಸಿನಿಮಾ ಮಾಡಿದರೆ ತಪ್ಪಾ?!" ಎನ್ನುತ್ತಿದ್ದಾರೆ ಪಡ್ಡೆಗಳು.

ಮತ್ತೆ ರಾಜ್ ಹಾಡು...



'ಕುಮಾರರಾಮ' ಚಿತ್ರದಲ್ಲಿ ಡಾ. ರಾಜ್‌ಕುಮಾರ್‌ರವರ ಧ್ವನಿಯನ್ನು ಅಳವಡಿಸಿಕೊಳ್ಳಬೇಕೆಂಬುದು ನಿರ್ದೇಶಕ ಭಾರ್ಗವರವರ ಆಸೆಯಾಗಿತ್ತು. ಚಿತ್ರದ ಆರಂಭದಲ್ಲಿ ಬರುವ ಕಾಮೆಂಟರಿಗೆ, ಶಿವರಾಜ್ ಕುಮಾರ್ ಅವರ ಪಾತ್ರಕ್ಕೆ ಮತ್ತು ಒಂದು ಹಾಡಿಗೆ ರಾಜ್ ಕುಮಾರ್ ಅವರನ್ನು ಕಂಠಕಲಾವಿದರಾಗಿ- ಸಂಗೀತಗಾರರಾಗಿ ಬಳಸಬೇಕೆಂಬುದು ಭಾರ್ಗವರವರ ಮಹದಾಸೆಯಾಗಿತ್ತು. ಇದರ ಬಗ್ಗೆ ಒಮ್ಮೆ ಚರ್ಚಿಸಿದಾಗ ಕಾಮೆಂಟರಿ ರೂಪದಲ್ಲಿನ ನಿರೂಪಣೆಗೆ ತಮ್ಮ ಧ್ವನಿ ನೀಡಲು ಅಣ್ಣಾವ್ರು ಒಪ್ಪಿಕೊಂಡಿದ್ದರಂತೆ.

ಆದರೆ ಈಗ ಈ ಮೂರೂ ಆಸೆಗಳು ನೆರವೇರಲು ಸಧ್ಯವಿಲ್ಲವಾದ್ದರಿಂದ ಭಾರ್ಗವ 'ಸಮಾಧಾನಕರ ಬಹುಮಾನ' ಎಂಬಂತೆ ಒಂದು ಐಡಿಯಾವನ್ನು ಹಮ್ಮಿಕೊಂಡಿದ್ದಾರೆ.

ಅದರಂತೆ ಚಿತ್ರದ ಆರಂಭದಲ್ಲಿ ಡಾ. ರಾಜ್ ಹಾಡಿರುವ 'ಕನ್ನಡವೇ ಸತ್ಯ' ಎಂಬ ಜನಪ್ರಿಯ ಹಾಡನ್ನು ಬಳಸಿದ್ದಾರಂತೆ. ಆದರೆ ಅದನ್ನು ಸಂಗೀತ ನಿರ್ದೇಶಕ ಗುರುಕಿರಣ್‌ರವರು ಎರಡೆರಡು ಬಾರಿ ರೀಮಿಕ್ಸ್ ಮಾಡಿ ಅದಕ್ಕೆ ಹೊಸ ರೂಪ ನೀಡಿದ್ದಾರಂತೆ. ಈ ಹಾಡು ಕ್ಯಾಸೆಟ್‌ನಲ್ಲಿ ಇಲ್ಲದಿರುವುದರಿಂದ ಅದನ್ನು ಕೇಳಲೆಂದೇ ಜನ ಥಿಯೇಟರಿಗೆ ಬಂದರೂ ಬರಬಹುದು ಎಂಬುದು ಭಾರ್ಗವ ರವರ ಪ್ಲಾನ್.

ಈ ಜನಪ್ರಿಯ ಹಾಡನ್ನು ರೀಮಿಕ್ಸ್ ಮಾಡಿದ ನಂತರ 'ಕುಮಾರರಾಮ'ನಿಗೆ ಇನ್ನಷ್ಟು ಬಲ ಬಂದಿದೆ ಎನ್ನುತ್ತಾರೆ ನಿರ್ಮಾಪಕ ಪಟ್ಟಾಭಿರಾಮ್. ಇದೆಲ್ಲವೂ ಹೌದೋ, ಅಲ್ಲವೋ ಎಂದು ಗೊತ್ತಾಗಬೇಕಾದರೆ ಮುಂದಿನ ವಾರ 'ಕುಮಾರರಾಮ'ನನ್ನು ನೋಡಬೇಕು. ಅಲ್ಲಿಯತನಕ ನಿಮಗೂ, ನಮಗೂ ಒಂದು ಪುಟ್ಟ ಬ್ರೇಕ್.



ಶ್ಯಾಮ್, ರಕ್ಷಿತಾ
'ತನನಂ ತನನಂ'

ಶ್ರಾವಣ : ರೀಮೇಕ್‌ನಿಂದ ಶುರು...

ಗಾಂಧಿನಗರದ ಪಾಲಿಗೆ ಈಗ ಆರಂಭವಾಗಿರುವ ಶ್ರಾವಣ ಮಾಸ ಒಂದು ಶುಭ ಮಾಸವಿದ್ದಂತೆ. ಆದರೆ ಈ ಮಾಸಕ್ಕೂ, 'ಚೆಲ್ಲಾಟ' ಮತ್ತು 'ಸೇವಂತಿ ಸೇವಂತಿ' ಚಿತ್ರಗಳು ಶತದಿನೋತ್ಸವ ಆಚರಿಸಿರುವುದಕ್ಕೂ, ಯಾವುದೇ ತರಹದ ಸಂಬಂಧ ಇಲ್ಲ. ಒಂದೇ ಒಂದು ಸಮಾಧಾನದ ವಿಷಯ ಯಾವುದೆಂದರೆ, ಲಾಂಗು-ಮಚ್ಚುಗಳು ನಟಿಸದೇ ಇರುವುದು. ಈ ಎರಡು ಚಿತ್ರಗಳು ಗೆದ್ದಿರುವುದರಿಂದ ಕನ್ನಡ ಚಿತ್ರ ರಸಿಕರು ಮುಂದೆ ಬರಲಿರುವ ರಕ್ತಪಾತದಿಂದ ಪಾರಾಗಿರುವುದು!

ಅಸಮಾಧಾನದ ವಿಚಾರ ಯಾವುದೆಂದರೆ ಈ ಶ್ರಾವಣ ಮಾಸದ ಮೊದಲ ಶುಕ್ರವಾರವೇ ಪರಭಾಷೆಯ ಎರಡು ಚಿತ್ರಾನ್ನಗಳನ್ನು ಕನ್ನಡ ಚಿತ್ರ ಪ್ರೇಕ್ಷಕರಿಗೆ ನೀಡಲು ನಮ್ಮವರು ಮುಂದಾಗಿರುವುದು. ಈ ವಾರ ಬಿಡುಗಡೆಯಾಗುತ್ತಿರುವ 'ಗಂಡ-ಹೆಂಡತಿ' ಮತ್ತು 'ನೀನೆಲ್ಲೋ ನಾನಲ್ಲೇ' ಎಂಬ ಎರಡು ಚಿತ್ರಗಳೂ ರೀಮೇಕ್‌ಗಳು ಎಂಬುದನ್ನು ಮರೆಯು ವಂತಿಲ್ಲ.

ಚಿಮ್ಮಿ ಬಂತು 'ಛಾಯೆ'

ಕನ್ನಡದವಳಾದರೂ ಕನ್ನಡಿಗರಿಗೆ ದುಬಾರಿಯಾಗಿರುವ, ಅಪರೂಪವಾಗಿರುವ ಛಾಯಾಸಿಂಗ್ ಮೊನ್ನೆ 'ಆಕಾಶ ಗಂಗೆ' ಚಿತ್ರದ ಸೆಟ್‌ನಲ್ಲಿ ಮಾತನಾಡಲು ಸಿಕ್ಕಿದಳು.



ಬೊಗಸೆಕಣ್ಣಿನ ಈ ಚೆಲುವೆ "ನಾನು ಕನ್ನಡವನ್ನು ನಿರ್ಲಕ್ಷಿಸಿಲ್ಲ; ತಮಿಳು ಮತ್ತೆ ತೆಲುಗಿನಲ್ಲಿ ಬ್ಯುಸಿಯಾಗಿದ್ದೆ" ಎಂದು ಇಲ್ಲಿಂದ ನಾಪತ್ತೆಯಾಗಿರುವುದಕ್ಕೆ ಸಮಜಾಯಿಶಿ ನೀಡಿದಳು. 'ಮನ್ಮಥ ರಾಸಾ, ಮನ್ಮಥ ರಾಸಾ....' ಹಾಡಿಗೆ ಧನುಷ್ ಜೊತೆ ಹಾಡಿ ಕುಪ್ಪಳಿಸಿದ ನಂತರ, ತಮಿಳು ಚಿತ್ರೋದ್ಯಮ ಈಕೆಯನ್ನು ಅಪ್ಪಿಕೊಂಡಿತು. ಅಷ್ಟೇ ಅಲ್ಲ, ಈ ಹಾಡಿನ ಸ್ಟೇಜ್ ಶೋಗಾಗಿ ಈಕೆ ಹಲವಾರು ವಿದೇಶಗಳನ್ನೂ ಸುತ್ತಿ ಬಂದಳು.

ಇದೀಗ ಗ್ಲಾಮರ್ ಪಾತ್ರ, ಹರಟೆಮಲ್ಲಿಯ ಪಾತ್ರಗಳನ್ನೆಲ್ಲಾ ಲೀಲಾಜಾಲವಾಗಿ ನಿರ್ವಹಿಸುವ ಛಾಯಾಗೆ ಮೂಕಿ ಪಾತ್ರ ಮಾಡುವ ಆಸೆಯಂತೆ. "ಈಕೆಯ ಈ ಆಸೆಯನ್ನು ನಿರ್ದೇಶಕ ದಿನೇಶ್ ಬಾಬು ಈಡೇರಿಸಬೇಕಷ್ಟೇ. ಯಾಕೆಂದರೆ ಕನ್ನಡದಲ್ಲಿ ದಿನೇಶ್ ಬಾಬುಗೆ ಬಿಟ್ಟರೆ ಬೇರೆ ಯಾರಿಗೂ ಈಕೆ ಕಾಲ್‌ಶೀಟ್ ನೀಡುತ್ತಿಲ್ಲ" ಎನ್ನುತ್ತಿದ್ದಾರೆ ಗಾಂಧಿನಗರಿಗಳು.

ಮಳೆ ಮಳೆ... ಚಳಿ... ಚಳಿ...

ಇತ್ತೀಚೆಗೆ ಚಿತ್ರದ ಟೈಟಲ್‌ಗೂ ಚಿತ್ರದ ಕಥಾವಸ್ತುವಿಗೂ ಸಂಬಂಧವೇ ಇರುವುದಿಲ್ಲ. ಇದಕ್ಕೆ ಲೇಟೆಸ್ಟ್ ಉದಾಹರಣೆ 'ಮಸ್ತಿ'.

ಆದರೆ ಕೆಲವು ನಿರ್ದೇಶಕರು ತಮ್ಮ ಚಿತ್ರಕ್ಕೆ ಸರಿಯಾದ ಹೆಸರು ಇಟ್ಟು ತಮ್ಮ ಪ್ರೊಫೆಷನಲಿಸಮ್ ತೋರಿಸುತ್ತಾರೆ. ಇದಕ್ಕೆ ಲೇಟೆಸ್ಟ್ ಉದಾಹರಣೆ ಯುವ ನಿರ್ದೇಶಕ ಗುರುರಾಜ್ ಭಟ್.

ಮೊನ್ನೆ ಸೆಟ್ಟೇರಿದ ಅವರ 'ಮುಂಗಾರು ಮಳೆ' ಚಿತ್ರದ ಶೇ. 80 ರಷ್ಟು ಭಾಗವನ್ನು ಅವರು (ಚಿತ್ರದ ಹೆಸರಿಗೆ ತಕ್ಕಂತೆ) ಮಳೆಯಲ್ಲಿಯೇ ಚಿತ್ರೀಕರಿಸಲಿದ್ದಾರಂತೆ. ಈ ಹಿಂದೆ ರಾಜೇಂದ್ರಸಿಂಗ್ ಬಾಬು ಕೂಡಾ ತಮ್ಮ 'ಮುಂಗಾರಿನ ಮಿಂಚು' ಎಂಬ ಚಿತ್ರದ ಶೇ. 80 ರಷ್ಟು ಭಾಗವನ್ನು ಮಳೆಯಲ್ಲಿಯೇ ಚಿತ್ರೀಕರಿಸಿದ್ದರು. ಅಷ್ಟೇ ಅಲ್ಲ, ಗಿರೀಶ್ ಕಾಸರವಲ್ಲಿ ಕೂಡ ತಮ್ಮ 'ದ್ವೀಪ' ಚಿತ್ರದಲ್ಲಿ ಮಲೆನಾಡಿನ ಮಳೆಯ ಚಮತ್ಕಾರವನ್ನು ಸೆರೆ ಹಿಡಿದಿದ್ದರು.

"ಅಹಾ, ಅಹಾ, ಮಳೆ ಮಳೆ ಎಂಬ ಈ ಚಳಿಯು...." ಮಜಾನೇ ಇದಕ್ಕೆ ಕಾರಣ ಎಂಬುದು ಕುತರ್ಕಿಗಳ ವಾದ, ಬಿಡಿ!

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore-4, Phone : 2667642 Fax : 26620026, E-mail : lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44